
ಸಂಪುಟ 24 ಸಂಚಿಕೆ 16
ಏಪ್ರಿಲ್ 21, 2002 ಬೆಲೆ ರೂ. 3.00

# ಐಕ್ಯರಂಗ

ದುಡಿವ ಜನರ ಪ್ರಾಣಮಿತ್ರ

## ಸ್ವಚ್ಛ ಗ್ರಾಮ: ಯಾರ ಉದ್ಧಾರಕ್ಕಾಗಿ?






## ಈ ಮೋದಿಯನ್ನು ಈಗಲೇ ತೊಲಗಿಸಿ

## ಕುಂದಾಪುರ: ಮತಾಂಧ ವೈರಸ್ ಅಬ್ಬರ





'ಹುತಾತ್ಮ ಭಗತ್‌ಸಿಂಗ್' ಪುಸ್ತಕ ಪರಿಚಯ

## ಚಿಗಳ್ಳಿ ದೀಪ ಗುಟ್ಟು ರಟ್ಟು

# ಕೇಂದ್ರದಲ್ಲಿ ಮುಂದುವರಿದ ಹಗರಣಗಳ ಸರಮಾಲೆ

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



## ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 92

**ಕಳೆದ ಸಂಚಿಕೆಯಲ್ಲಿ ಅಮೆರಿಕಾದೊಂದಿಗೆ ರಾವ್ ಸರ್ಕಾರದ ರಾಜಿ, 15ನೇ ಮಹಾಧಿವೇಶನ ಕಲ್ಕತ್ತ ನಗರ ಪಾಲಿಕೆಯಲ್ಲಿ ಎಡರಂಗದ ವಿಜಯ ಮತ್ತು ಬೆಂಗಳೂರಿನಲ್ಲಿ ನಡೆದ ಕೇಂದ್ರ ಸಮಿತಿ ಸಭೆ ಈ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ಜ್ಯೋತಿಬಸುರವರಿಂದ ಲಂಡನ್ ಪ್ರವಾಸ, ಅಮೆರಿಕಾಕ್ಕೂ ಭೇಟಿ, ಪ.ಬಂಗಾಳ ಕೈಗಾರಿಕಾ ಬೆಳವಣಿಗೆಯ ಬಗ್ಗೆ ಚರ್ಚೆ, ಭಾರತಕ್ಕೆ ವಾಪಸ್ಸು, ಹಾಲು ಕುಡಿದ ಗಣೇಶ! ಕೇಂದ್ರದಲ್ಲಿ ಮತ್ತೊಂದು ಹಗರಣ ಬಯಲು ಈ ಬಗ್ಗೆ ಓದಿ....**

1995 ಜುಲೈ 9 ರಂದು ಕಲ್ಕತ್ತ ಮಹಾನಗರಪಾಲಿಕೆಗೆ ನಡೆದ ಮೂರನೇ ಚುನಾವಣೆಯಲ್ಲಿ ನಾವು ಜಯಿಸಿದೆವು. ವಿಧಾನನಗರ ಪುರಸಭೆಯ ಪ್ರಥಮ ಚುನಾವಣೆ ಅದರ ಮುಂಚಿನ ದಿನ ನಡೆಯಿತು. ಅದರಲ್ಲೂ ನಾವು ಗೆದ್ದೆವು. ಕಲ್ಕತ್ತ ಮಹಾನಗರ ಪಾಲಿಕೆಯಲ್ಲೂ ಜಯಿಸಿತು. ಸಿಪಿಐ(ಎಂ) 53, ಸಿಪಿಐ-4, ಆರ್.ಎಸ್.ಪಿ-6, ಫಾರ್ವರ್ಡ್ ಬ್ಲಾಕ್-4, ಬಿ.ಬಿ.ಸಿ-1, ಎಂ.ಎಫ್.ಬಿ-1 ಹಾಗೂ ನಮ್ಮ ಬೆಂಬಲದ ಪಕ್ಷೇತರರು-1. ಕಾಂಗ್ರೆಸ್‌ಗೆ 66 ಸ್ಥಾನಗಳು ಲಭ್ಯವಾದವು. ಬಿಜೆಪಿ ಎರಡು, ಪಕ್ಷೇತರರು ಮೂರರಲ್ಲಿ ಗೆದ್ದರು. ಪಕ್ಷೇತರರ ಬೆಂಬಲವಿಲ್ಲದೇ ಬಹುಮತ ಪಡೆಯಲು ಕಾಂಗ್ರೆಸ್ ಸಾಧ್ಯವಿಲ್ಲ ಎಂದಾಯಿತು. ಪುರಸಭೆಗಳಲ್ಲಿ ಕಾಂಗ್ರೆಸ್ ಪಕ್ಷ ಬಿಜೆಪಿಯ ಬೆಂಬಲವನ್ನು ಪಡೆದಿದ್ದರೂ ಕಲ್ಕತ್ತಾ ಮಹಾನಗರ ಪಾಲಿಕೆಯಲ್ಲಿ ಬಿಜೆಪಿ ಬೆಂಬಲ ಪಡೆಯುವ ಅಪಾಯದ ಕೆಲಸಕ್ಕೆ ಅದು ಕೈ ಹಾಕಲಿಲ್ಲ.

ಈ ಚುನಾವಣೆಗಳಿಗೆ ಮುನ್ನ 34 ದಿನಗಳ ವಿದೇಶ ಪ್ರವಾಸದಲ್ಲಿ ಪಶ್ಚಿಮ ಬಂಗಾಳ ಕೈಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷ ಸೋಮನಾಥ ಚಟರ್ಜಿ ನನ್ನ ಜತೆಗಿದ್ದರು. ಜೂನ್ 7 ರಂದು ನಾವು ಲಂಡನ್‌ಗೆ ಹೊರಟೆವು. 10 ದಿನ ವಿಶ್ರಾಂತಿ ತೆಗೆದುಕೊಳ್ಳುವುದು ಮೊದಲ ಯೋಜನೆಯಾಗಿತ್ತು. ಆದರೆ ಅಲ್ಲಿ ಹೋಗುತ್ತಲೇ ಹಾಲ್ಡಿಯಾ ವಿಚಾರವಾಗಿ ಸೋರೋಸ್ ಗುಂಪಿನೊಂದಿಗೆ ಹಾಗೂ ಆರ್.ಪಿ.ಜಿ. ಎಂಟರ್‌ಪ್ರೈಸ್ ಜತೆ ಒಪ್ಪಂದಕ್ಕಾಗಿ ರಾಲ್ಸ್‌ರಾಯ್ಸ್ ಕಂಪೆನಿ ಜತೆ ಮಾತುಕತೆಯಲ್ಲಿ ತೊಡಗಿದೆವು.



ಬೇಹಾಂತ್ ಸಿಂಗ್

ರಾಜ್ಯದ ಕೈಗಾರಿಕೆ ಪರಿಸ್ಥಿತಿ ಕುರಿತ ಪ್ರೈಸ್ ವಾಟರ್ ಹೌಸ್‌ನಿಂದ ಒಂದು ವರದಿಯನ್ನು ನಾವು ಪಡೆದೆವು. ಜೂನ್ 20 ರಂದು ನಾವು ಅಮೆರಿಕಕ್ಕೆ ಹೊರಟೆವು. ಚುನಾವಣೆ ವಿಚಾರದಲ್ಲಿ ನಾನು ಪ್ರವಾಸದುದ್ದಕ್ಕೂ ಕಲ್ಕತ್ತದೊಂದಿಗೆ ಸಂಪರ್ಕ ಇಟ್ಟುಕೊಂಡಿದ್ದೆ. ಲಂಡನ್‌ನಲ್ಲಿ 'ವಾಷಿಂಗ್ಟನ್ ಪೋಸ್ಟ್' ನನ್ನ ಸುಧೀರ್ಘ ಸಂದರ್ಶನ ಪಡೆಯಿತು. ಬಂಗಾಳದ ಕೈಗಾರಿಕೆ ಪರಿಸ್ಥಿತಿ ಹಾಗೂ ರಾಜ್ಯದಲ್ಲಿ ವಿದೇಶಿ ಹೂಡಿಕೆಗಳ ಅವಕಾಶದ ಕುರಿತು ಸಂದರ್ಶನ ಒತ್ತು ನೀಡಿತು. ಭೂ ಸುಧಾರಣೆ, ಕೃಷಿ ಬೆಳವಣಿಗೆ ಮತ್ತು ಮೂಲಸೌಕರ್ಯಗಳ ಬೆಳವಣಿಗೆ ಬಗ್ಗೆ ಕೂಡ ನಾನು ವಿಷದವಾಗಿ ಮಾತನಾಡಿದೆ. ಅವೆಲ್ಲವನ್ನೂ ಪತ್ರಿಕೆ ಪ್ರಕಟಿಸಿತು.

### ಅಮೆರಿಕದಲ್ಲಿ

ಜೂನ್ 20 ರಂದು ಲಂಡನ್ ಬಿಟ್ಟು 21 ರಂದು ಅಮೆರಿಕ ತಲುಪಿದೆ. 1995 ಜೂನ್ 21 ಪಶ್ಚಿಮ ಬಂಗಾಳದ ಎಡರಂಗ ಸರಕಾರದ 18ನೇ ವಾರ್ಷಿಕೋತ್ಸವ ದಿನ.

ಆಗ ಸಿದ್ಧಾರ್ಥ ಶಂಕರ ರಾಯ ಅಮೇರಿಕದಲ್ಲಿ ಭಾರತದ ರಾಯಭಾರಿಯಾಗಿದ್ದರು. ನನ್ನ ಭೇಟಿಗೆ ಅವರು ಬಂದರು. ನಾವು ಒಟ್ಟಿಗೆ ಊಟ ಮಾಡಿದೆವು. ಕಲ್ಕತ್ತದ ಕೆಲವು ಕೈಗಾರಿಕೋದ್ಯಮಿಗಳು ಕೂಡ ನಮ್ಮನ್ನು ಸೇರಿದರು. ಪ್ರತಿಯೊಬ್ಬರೂ ಅವರವರ ಊಟದ ವೆಚ್ಚವನ್ನು ಅವರವರೇ ಭರಿಸಿದರು. ಹಲವು ಒಪ್ಪಂದಗಳಿಗೆ ಹಾಗೂ 10 ತಿಂಗಳುಗಳಿಗೆ ಪತ್ರಗಳಿಗೆ (MOU) ಸಹಿ ಹಾಕಲಾಯಿತು.

ಫಿಲಡೆಲ್ಫಿಯಾದಲ್ಲಿ ನಾನು ಒಂದು ಸಾಂಸ್ಕೃತಿಕ ಸಮ್ಮೇಳನದಲ್ಲಿ ಭಾಗವಹಿಸಿದೆ ಹಾಗೂ ಅನಿವಾಸಿ ಬಂಗಾಳಿಗಳನ್ನು ಭೇಟಿಯಾದೆ. ಬಂಗಾಳದಲ್ಲಿ ಹೂಡಿಕೆ ಬಗ್ಗೆ ನಾವು ಮಾತನಾಡಿದೆವು. ಆನಂತರ ಬೋಸ್ಟನ್‌ನಲ್ಲಿ ಆರ್ಥರ್ ಡಿ. ಫೀಪಲ್ ಜನರೊಂದಿಗೆ ಸಮಾಲೋಚನೆ ನಡೆಯಿತು. ಅವರು ಕೂಡ ರಾಜ್ಯಕ್ಕಾಗಿ ಒಂದು ನೀಲನಕ್ಷೆಯನ್ನು ರೂಪಿಸಿದರು. ಅಲ್ಲಿಂದ ಮುಂದೆ ನ್ಯೂಯಾರ್ಕ್‌ನಲ್ಲಿ ನಾನು ಮೆರಿಲ್ ಲಂಚ್ ಅಧಿಕಾರಿಗಳನ್ನು ಭೇಟಿ ಮಾಡಿದೆ. ಬಂಗಾಳದಲ್ಲಿ ಹೂಡಿಕೆ ಸಾಧ್ಯತೆ ಬಗ್ಗೆ ಸಿಟಿ ಬ್ಯಾಂಕ್ ಸಹಕಾರದಿಂದ ಏಷ್ಯಾಟಿಕ್ ಸೊಸೈಟಿ ಒಂದು ವಿಚಾರಸಂಕಿರಣವನ್ನು ಏರ್ಪಡಿಸಿತ್ತು. ಅಮೇರಿಕದಲ್ಲಿ ನಾನಿದ್ದ ಅವಧಿಯಲ್ಲಿ ಬಂಗಾಳದಲ್ಲಿ 3000 ಕೋಟಿ ರೂಪಾಯಿ ಹೂಡಿಕೆಯ ಪ್ರಸ್ತಾವನೆಗಳು ಮಂಡನೆಯಾದವು ಎಂದು ನಂತರ ನನಗೆ ತಿಳಿಸಲಾಯಿತು. ಅಷ್ಟೂ ಹಣ ರಾಜ್ಯಕ್ಕೆ ಆಗಲೇ ಹರಿದು ಬಂದಿದೆಯಂದೇನೂ ಅದರ ಅರ್ಥವಲ್ಲ. ಆದರೆ ಪ್ರಯತ್ನ ಮಾಡುವುದರಲ್ಲಿ ಯಾವ ತೊಂದರೆಯೂ ಇಲ್ಲ ಎಂಬುದು ಇದರಿಂದ ಗೊತ್ತಾಗುತ್ತದೆ. ಎಲ್ಲಾ ಯೋಜನೆಗಳು ಮುಂದೆ ಸಾಕಾರಗೊಳ್ಳುತ್ತವೆ ಎಂಬ ವಿಶ್ವಾಸ ನನಗಿದೆ.

ಜುಲೈ 3 ರಂದು ಅಮೇರಿಕ ತೊರೆದು ಲಂಡನ್‌ಗೆ ಮರಳಿದೆ. ಸ್ಟ್ರಾಟ್‌ಫರ್ಡ್-ಆನ್-ಏವನ್‌ನಲ್ಲಿ ಶೇಕ್ಸ್‌ಪಿಯರ್ ಜನ್ಮಸ್ಥಳಕ್ಕೆ ನಾನು ಭೇಟಿ ನೀಡಿದೆ. ಶೇಕ್ಸ್‌ಪಿಯರ್ ಜನ್ಮಸ್ಥಳ ಟ್ರಸ್ಟ್‌ಗೆ ರವೀಂದ್ರನಾಥ ಟಾಗೂರರ ಪ್ರತಿಮೆಯೊಂದನ್ನು ಕೊಡುಗೆ ಕೊಟ್ಟೆ. ಆಗ ಲಂಡನ್‌ನಲ್ಲಿ ರಾಯಭಾರಿಯಾಗಿದ್ದ ಡಾ। ಎಸ್.ಎಂ. ಸಿಂಘ್ವಿ ಸ್ವಲ್ಪ ಸಮಯದ ಹಿಂದೆಯೇ ಈ ಬಗ್ಗೆ ಕಾಳಜಿ ತೋರಿದ್ದರು. ಪ್ರಖ್ಯಾತ ಶಿಲ್ಪಿ ಸೋಮನಾಥ ಹೋರೆ ನಿರ್ಮಿಸಿದ ಟಾಗೂರರ ಇನ್ನೊಂದು ಎದೆಮಟ್ಟದ ಪ್ರತಿಮೆಯನ್ನು ಬ್ರಿಟನ್‌ನಲ್ಲಿರುವ ನೆಹರೂ ಕೇಂದ್ರಕ್ಕೆ ಅರ್ಪಿಸಿದೆ. ಆ ಹೊತ್ತಿಗೆ ನಾನು ಸುಸ್ತಾಗಿದ್ದೆ. ಜುಲೈ 10 ರಂದು ಭಾರತಕ್ಕೆ ಮರಳಿದೆ.



ಸೋಮನಾಥ ಚಟರ್ಜಿ

ಸೆಪ್ಟೆಂಬರ್ 22-24ರಂದು ಕಲ್ಕತ್ತದ ನೇತಾಜಿ ಒಳಾಂಗಣಕ್ರೀಡಾಂಗಣದಲ್ಲಿ ನಡೆದ ಕ್ಯೂಬಾ ಏಕತಾ ಸಮಾವೇಶವನ್ನು ನಾನಿಲ್ಲಿ ನೆನೆಯಲೇ ಬೇಕು. ಅದಕ್ಕೂ ಮುಂಚೆ ನಾವು ವಿಯಟ್ನಾಂ ಹಾಗೂ ನಿಕರಾಗುವಾ ಜನತೆಗೆ ಸೌಹಾರ್ದ ಸೂಚಿಸಿ ಇಂಥ ಸಮ್ಮೇಳನಗಳನ್ನು ಸಂಘಟಿಸಿದ್ದೆವು. ಚಿಂತನಾಶೀಲದ ಇಂಥ ಸಭೆಗೆ ಕಲ್ಕತ್ತ ಸೂಕ್ತ ಆಯ್ಕೆ.

### ಹಾಲು ಕುಡಿದ ಗಣೇಶ!

ಸಮ್ಮೇಳನ ನಡೆಯುತ್ತಿರಬೇಕಾದರೆ ಇಡೀ ದೇಶದ ಗಮನ ಸೆಳೆದ ಒಂದು ಅಪರೂಪದ ವಿದ್ಯಮಾನ ವರದಿಯಾಯಿತು. ಗಣೇಶ ಹಾಲು ಕುಡಿದ ಸಂಗತಿ ಆಗಿನ್ನೂ ಭಾರತೀಯರ ತಲೆಗಳಿಂದ ಮಾಯವಾಗಿದ್ದಿರಲಿಕ್ಕಿಲ್ಲ! ಅಷ್ಟರೊಳಗೆ ವಿದೇಶದಲ್ಲೂ ಗಣೇಶ ಹಾಲು ಕುಡಿದ ಸುದ್ದಿ ಬಂತು! ಇದು ಆರ್.ಎಸ್.ಎಸ್., ವಿ.ಎಚ್.ಪಿಯ ತಂತ್ರಗಾರಿಕೆ ಎಂಬುದು ಆ ನಂತರ ತಿಳಿಯಿತು. ಇದು ವಿಜ್ಞಾನದ ಒಂದು ಘಟನೆಯೇ ಹೊರತು ಪವಾಡವಲ್ಲ ಎಂಬುದನ್ನು ನಮ್ಮ ವಿಜ್ಞಾನ ಮಂಚ್ ಕಾರ್ಯಕರ್ತರು ಜನತೆಗೆ ವಿವರಿಸಿದರು. ಆದರೆ ಧಾರ್ಮಿಕ ಮೂಲಭೂತವಾದ ಬೇರೂರುವುದೇ ಈ ರೀತಿಯಲ್ಲಿ ಅದರಲ್ಲೂ ದಿನಕ್ಕೆ ಒಂದು ಚಮಚೆಯಷ್ಟೂ ಹಾಲು ಸಿಗದ ಕೋಟ್ಯಂತರ ಮಕ್ಕಳಿರುವ ಒಂದು ದೇಶದಲ್ಲಿ!

ಚಂಡೀಗಡದಲ್ಲಿ ವಿಧಾನಮಂಡಲ ಕಾರ್ಯಾಲಯದ ಬಗ್ಗೆ ಆಗಸ್ಟ್ 31ರಂದು ನಡೆದ ಭೀಕರ ಬಾಂಬ್ ಸ್ಫೋಟದಲ್ಲಿ ಪಂಜಾಬ್ ಮುಖ್ಯಮಂತ್ರಿ ಬೇಅಂತ್ ಸಿಂಗ್ ಹತರಾದರು. ರಾಜ್ಯದಿಂದ ಭಯೋತ್ಪಾದನೆ ಪೂರ್ಣ ನಿರ್ಮೂಲನವಾಗಿಲ್ಲ ಎನ್ನುವುದಕ್ಕೆ ಅದು ಪುರಾವೆಯಾಗಿ ಅಪಾರ ಪ್ರಮಾಣದ ಹಣವನ್ನು ಪೊಲೀಸ್ ಪಡೆಗೆ ವ್ಯಯಿಸಲಾಗುತ್ತಿತ್ತು. ಹಾಗೂ ಪರಿಸ್ಥಿತಿ ಸ್ವಲ್ಪ ಸುಧಾರಿಸಿದ್ದು ಕೂಡ ನಿಜವೇ. ಆದರೆ ಕಾಂಗ್ರೆಸ್ ಪಕ್ಷ ಒಪ್ಪಂದಕ್ಕೆ ಅನುಗುಣವಾಗಿ ನಡೆದುಕೊಳ್ಳಲಿಲ್ಲ. ರಾಜ್ಯದಲ್ಲಿ ಅತೃಪ್ತಿ ಇನ್ನೂ ಮನೆ ಮಾಡಿತ್ತು. 11ನೇ ಲೋಕಸಭೆ ಚುನಾವಣೆಯ ಫಲಿತಾಂಶ ಅದನ್ನು ಸಾಬೀತುಪಡಿಸಿತು. ಅಕಾಲಿ-ಬಿಜೆಪಿ ಕೂಡ ಜಯಗಳಿಸಿತು.

ದೆಹಲಿ ಮೂಲದ ಯುವಕಾಂಗ್ರೆಸ್ ನಾಯಕರೊಬ್ಬರ ಪತ್ನಿ ನೈನಾ ಸಾಹ್ನಿಯ ಕೊಲೆಯೊಂದಿಗೆ ಕಾಂಗ್ರೆಸ್ ಇನ್ನೊಂದು ಹಗರಣದ ಸುಳಿಗೆ ಸಿಲುಕಿತು. ಆ ಯುವ ನಾಯಕನನ್ನು ಬಂಧಿಸಲಾಯಿತು. ಕಾಂಗ್ರೆಸಿಗರ ಹೆಸರು ಒಂದೊಂದಾಗಿ ಹೊರಬರತೊಡಗಿತು. ಆ ವೇಳೆ ನಾನು ವಿದೇಶದಲ್ಲಿದ್ದೆ.

### ಕೇಂದ್ರದಲ್ಲಿ ಹಗರಣ

ಕ್ರಿಮಿನಲ್‌ಗಳು ಮತ್ತು ರಾಜಕಾರಣಿಗಳ ನಡುವಿನ ಸಂಬಂಧ ಕುರಿತು ತನಿಖೆನಡೆಸಿದ ವೋರಾ ಸಮಿತಿಯ ವರದಿ ಆಗ ದೇಶದಲ್ಲಿ ಚರ್ಚೆಯ ವಿಷಯವಾಗಿತ್ತು. 1995ರಲ್ಲಿ ವರದಿ ಸಂಸತ್ತಿನಲ್ಲಿ ಕೋಲಾಹಲದ ವಾತಾವರಣ ನಿರ್ಮಿಸಿತು. ವೋರಾ ಕೇಂದ್ರ ಗೃಹಖಾತೆಯ ಕಾರ್ಯದರ್ಶಿಯಾಗಿದ್ದರು. ಸಮಿತಿಯ ಇನ್ನು ಮೂವರು ಸಿಬಿಐ ಮತ್ತು ಸಿಬಿಡಿಟಿಯ ನಿರ್ದೇಶಕರಾಗಿದ್ದರು. 1993 ಅಕ್ಟೋಬರ್ 3 ರಂದು ಸರಕಾರಕ್ಕೆ ಸಲ್ಲಿಸಲಾದ ವೋರಾ ವರದಿ- ಅನೇಕ ಸ್ಫೋಟಕ ವಿಷಯಗಳನ್ನು ಒಳಗೊಂಡಿತ್ತು. ಪೂರ್ಣ ಎರಡು ವರ್ಷ ಕಾಲ ಸರಕಾರ ಅದನ್ನು ಹಾಗೇ ಇಟ್ಟಿತ್ತು. ನೈನಾ ಸಾಹ್ನಿ ಪ್ರಕರಣದ ನಂತರ ಇಡೀ ದೇಶವೇ ಪ್ರತಿಭಟಿಸಿದಾಗ ಸರಕಾರ ವರದಿಯ ಸಂಕಲಿತ ರೂಪವನ್ನು ಆಗಸ್ಟ್ 8 ರಂದು ಸದನದಲ್ಲಿ ಮಂಡಿಸಿತು. ವರದಿ ಕೆಲವು ಪ್ರಮುಖ ವ್ಯಕ್ತಿಗಳನ್ನು ತರಾಟೆಗೆ ತೆಗೆದುಕೊಂಡಿದೆ ಎಂದು ಒಪ್ಪಿಕೊಂಡ ಗೃಹಸಚಿವ ಎಸ್.ಬಿ. ಚವಾಣ್, ಹೆಸರುಗಳನ್ನು ಬಹಿರಂಗಪಡಿಸಲು ಆಗುವುದಿಲ್ಲ ಎಂದು ಹೇಳಿದರು. ಬಿಜೆಪಿ ಕೂಡ ಸುಮ್ಮನೆ ಕುಳಿತುಕೊಂಡಿತು. ಯಾಕೆಂದರೆ ಆ ಪಕ್ಷದಲ್ಲಿ ಕೂಡ ಅಂಥ ಅವಾಂತರಗಳು ಬೇಕಷ್ಟಿದ್ದವು. ಎಲ್ಲ ಹೆಸರುಗಳನ್ನು ಬಹಿರಂಗಪಡಿಸುವಂತೆ ಒತ್ತಾಯಿಸುವಲ್ಲಿ ಎಡಪಕ್ಷಗಳು ಮುಂಚೂಣಿಯಲ್ಲಿದ್ದವು.

ಚವಾಣ್ ಹೀಗೆ ಮಾಡಿದ್ದು ಅನಿರೀಕ್ಷಿತವೇನೂ ಆಗಿರಲಿಲ್ಲ. ಯಾಕೆಂದರೆ ಅವರ 75ನೇ ಹುಟ್ಟುಹಬ್ಬದಂದು 1995 ಆಗಸ್ಟ್ 7 ರಂದು ಶಿವಸೇನೆ- ಬಿಜೆಪಿ ಸರಕಾರ ಮುಂಬಯಿಯಲ್ಲಿ ಇದೇ ಚವಾಣ್‌ರನ್ನು ಸನ್ಮಾನಿಸಿತ್ತು. ಕನಿಷ್ಠಪಕ್ಷ ಅದೊಂದು ಅಧಿಕೃತ ಕಾರಣ ಇರಬಹುದು; ಆದರೆ, ಮೊದಲನೆಯದಾಗಿ ಒಂದು ಮೂಲಭೂತವಾದಿ ಶಕ್ತಿಗಳ ಕೂಟದ ಸನ್ಮಾನ ಪಡೆಯಲು ಕೇಂದ್ರ ಗೃಹಸಚಿವರು ಯಾಕೆ ಸಮ್ಮತಿ ಕೊಟ್ಟರು ಎಂಬುದೇ ಕಳವಳದ ವಿಷಯವಾಗಿದೆ. ಇಷ್ಟಾಗಿಯೂ ಕಾಂಗ್ರೆಸ್ ತಾನೊಂದು ಜಾತ್ಯಾತಿತ ಪಕ್ಷವೆಂದು ಹೇಳಿಕೊಳ್ಳುವುದನ್ನು ಮುಂದುವರಿಸಿದ್ದು ಖೇದದ ವಿಚಾರ.

ಇದೀಗ ರಾವ್‌ರ ತತ್ವಶಾಸ್ತ್ರಜ್ಞ ಗುರು ಚಂದ್ರಸ್ವಾಮಿಯ ಸರದಿಯಾಗಿತ್ತು. ಹಲವಾರು ಆರೋಪಗಳ ಆಧಾರದಲ್ಲಿ ಅವರನ್ನು ಬಂಧಿಸುವಂತೆ ಗೃಹಖಾತೆ ರಾಜ್ಯ ಸಚಿವ ರಾಜೇಶ್ ಪೈಲಟ್ ಆದೇಶಿಸಿದರು. ಆದರೆ ಅಧಿಕಾರವಲಯದಲ್ಲಿ ಚಂದ್ರಸ್ವಾಮಿಗಿದ್ದ

(ಮುಂದುವರಿಯುವುದು)

### ಮೇ ದಿನಾಚರಣೆ ಸಂಚಿಕೆ

ಮೇ ದಿನದ ಮಹತ್ವ, ಅದರ ಸಂದೇಶಗಳು, ಜರ್ಮನಿಯ ಹಿಟ್ಲರನ ಫ್ಯಾಸಿಸ್ಟ್ POGROM ನೆನಪಿಸುವ ಗುಜರಾತ್‌ನ ಭೀಕರ ಮಾರಣಹೋಮದ ವಿವರಗಳು. ಕಥೆ, ಕವನ, ವಿಶ್ಲೇಷಣೆ ಒಳಗೊಂಡ ವಿಶೇಷ ಲೇಖನಗಳ ಮೇ ದಿನದ ಸಂಚಿಕೆ ಸಿದ್ಧವಾಗುತ್ತಿದೆ. ಹೆಚ್ಚಿನ ಪ್ರತಿಗಳನ್ನು ಬೇಕಾದಲ್ಲಿ ಮುಂದಾಗಿ ತಿಳಿಸುವುದು. ಅಲ್ಲದೇ ನಿಮ್ಮ ಪ್ರದೇಶಗಳಲ್ಲಿ ವಿಶಿಷ್ಟವಾಗಿ ಆಚರಿಸಿದ ಮೇ ದಿನದ ಹಳೆಯ ನೆನಪುಗಳು, ಫೋಟೋಗಳನ್ನು ಕಳುಹಿಸಿ...

- ಸಂ.

# ಈವಾರ ಕರ್ನಾಟಕ ಒಂದು ನೋಟ



ಎಸ್.ವೈ.ಗುರುಶಾಂತ್

## ಜನತಾದಳಗಳ ವಿಲೀನ ಹೊಸ ಚಾಲನೆ

ಒಡೆದುಹೋಗಿರುವ ಜನತಾದಳದ ಬಣಗಳು ಒಂದಾಗುವ ಪ್ರಕ್ರಿಯೆಗೆ ವಿಶೇಷ ಚಾಲನೆ ದೊರೆತಿದೆ. ಈ ವಿಲೀನದ ವಿಧಿ ವಿಧಾನಗಳನ್ನು ವಿವರವಾಗಿ ಚರ್ಚಿಸಲು ಹಿರಿಯ ನಾಯಕರುಗಳಿಂದ ಹಲವಾರು ಸುತ್ತಿನ ಮಾತುಕತೆಗಳೂ ನಡೆದಿವೆ. ಇವೆಲ್ಲಾ ಸುಸೂತ್ರವಾಗಿ ನಡೆದರೆ ಮೇ 14 ರಂದು 'ವಿಲೀನ'ದ ಘೋಷಣೆ ಮಾಡಿ, ಹೊಸ ಸಮಿತಿ-ನಾಯಕತ್ವವನ್ನು ಘೋಷಿಸುವ ಪ್ರಕಟಣೆ ಇದೆ.

ಈ ವಿಲೀನಕ್ಕಾಗಿ ಯಾರ ಮನೆಯ ಬಾಗಿಲಿಗೂ ತಿರುಗಲು, ಕೈಮುಗಿಯಲು ಸಿದ್ಧ, ಬಿಜೆಪಿ ಕಾಂಗ್ರೆಸ್‌ಗೆ ಪರ್ಯಾಯ ಶಕ್ತಿಯಾಗಿ ಇಲ್ಲಿ ಜನತಾಪರಿವಾರ ಮೂಡಬೇಕು' ಎನ್ನುತ್ತಾರೆ ದೇವೇಗೌಡರು. 'ಅವಸರ ಬೇಡ... ನೋಡೋಣ... ಈ ದೇವೇಗೌಡರಿಗೆ ರಾಜಕೀಯ ಪುನರ್‌ಜನ್ಮ ನೀಡಿದ್ದೇ ನಾನು' ಎನ್ನುತ್ತಾರೆ ರಾಮಕೃಷ್ಣ ಹೆಗ್ಗಡೆಯವರು. ಈ ವಿಲೀನಕ್ಕಾಗಿ ಅವರು ಉತ್ಸುಕರಿಲ್ಲ. ಅಖಿಲ ಭಾರತಮಟ್ಟದಲ್ಲಿ ಶರದ್ ಯಾದವ್ ಸಿದ್ಧರಿಲ್ಲ. ಈಗಾಗಲೇ ರಾಜ್ಯ ಜೆಡಿ(ಯು) ನಾಯಕರು ಎನ್‌ಡಿಎ ಮೈತ್ರಿಕೂಟದಿಂದ ಹೊರಬರುವುದಾಗಿ ಹೇಳಿದ್ದಾರೆ. ಆದರೆ ಶರದ್ ಯಾದವ್ ಸಿದ್ಧರಿಲ್ಲ. ಇಂತಹ ಸ್ಥಿತಿಯಲ್ಲಿ ಈಗಿರುವ ಕೇಂದ್ರ ಸಚಿವ ಸ್ಥಾನವನ್ನು ಹೇಗೋ ಉಳಿಸಿಕೊಳ್ಳಬೇಕು ಎಂಬ ವರಸೆ ಅವರಿಗೆ. ಹೀಗಾಗಿ ಅಖಿಲ ಭಾರತ ಮಟ್ಟದಲ್ಲಿ ಬಿಟ್ಟು ಕೊನೆಗೆ ರಾಜ್ಯದಲ್ಲಿಯೇ ಅವರಿಗೆ ವಿಲೀನಕ್ಕೆ ನಿರ್ಧರಿಸಲು ಇದು ಒಂದು ಕಾರಣ.

ಈಗ ಸಿದ್ದರಾಮಯ್ಯ ಮತ್ತಿತರರ ಮನೆಗಳಲ್ಲಿ ನಡೆದಿರುವ ಚರ್ಚೆಯಲ್ಲಿ ಪಕ್ಷದ ಅಧ್ಯಕ್ಷರ್‍ಯಾರಬೇಕು ಎಂಬುದು ಅಲ್ಲದೇ ಹಲವು ಪದಾಧಿಕಾರಿಗಳು ಹಂಚಿಕೆ ಮುಖ್ಯ ಅಂಶ. ವಿಭಜನೆಯಾಗುವ ಮೊದಲುಸಹ ಸಿದ್ಧರಾಮಯ್ಯನವರೇ ಅಧ್ಯಕ್ಷರಾಗಿದ್ದರು. ಈಗಲೂ ಇರಲಿ ಎಂದು ಒಂದು ವಾದವಾದರೆ, ಕೊಡುಕೊಳ್ಳುವಲ್ಲಿ ಬೈರೇಗೌಡರೇ ಇರಲಿ ಎಂಬುದು ಇನ್ನೊಂದು ವಾದ. ಹೇಗೋ 'ಸ್ಥಾನ', ಅಧಿಕಾರದ 'ಬಲ' ಪ್ರಬಲ ಅಲ್ಲವೇ? ಮುಂದಿನ ಸರ್ಕಾರದ 'ಕನಸು'ಗಳು ಒಬ್ಬೊಬ್ಬರಲ್ಲಿ ಒಂದೊಂದು ರೀತಿ ಚಿಗುರೊಡೆಯುತ್ತಿರಬಹುದು.

ಇದೇನೇ ಇರಲಿ, ಆದಷ್ಟು ಬೇಗ ಇಂತಹ ಪ್ರಶ್ನೆಗಳನ್ನು ಬಗೆಹರಿಸಿಕೊಳ್ಳಬೇಕು. ದೇಶದ ಜನತೆಯ ಹಿತ ಮುಖ್ಯವಾಗಬೇಕು. ಬಿಜೆಪಿ-ಕಾಂಗ್ರೆಸ್ ವಿರುದ್ಧ ಮೂರನೇ ಪರ್ಯಾಯ ಬಲಗೊಳ್ಳಬೇಕೆಂಬುದು ಬಹಳ ಪ್ರಮುಖ ಅಂಶ. ಈ ದಿಕ್ಕಿನಲ್ಲಿ ವಿಲೀನ ಬೇಗ ಬರಲಿ. ಆದರೆ ವಿಲೀನ ಎಂಬುದು ಹೋರಾಡಲು ಉತ್ತೇಜಕ ಅಂಶ ನಿಜ. ಇದನ್ನು ಬಳಸಿ ಜನತೆಯ ಪ್ರಶ್ನೆಗಳ ಆಧಾರದಲ್ಲಿ ಜನವಿರೋಧಿ, ಕೋಮುವಾದಿ ಶಕ್ತಿಗಳ ವಿರುದ್ಧ ಸಮರ ಸಾರಬೇಕು.

## ವಿದ್ಯುತ್ ದರಗಳ ಹೆಚ್ಚಳ:

# ಏಪ್ರಿಲ್ 22 ರಿಂದ 29 ಜನಜಾಗೃತಿ ಜಾಥಾ

**ಮೇ 6 ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ**

**ಮೇ 30 - ವಿದ್ಯುತ್ ಬಳಕೆದಾರರ ರಾಜ್ಯಮಟ್ಟದ ರ್‍ಯಾಲಿ**

ವಿದ್ಯುತ್ ದರಗಳನ್ನು ಹೆಚ್ಚಿಸುವ ಬಗ್ಗೆ ತಕರಾರುಗಳೇನಾದರೂ ಇದ್ದರೆ ತಿಳಿಸಿ ಎಂದು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಪಿಟಿಸಿಎಲ್) ಏನಾದರೂ ತಕರಾರಿದ್ದರೆ ಕೊಡಿ ಎಂದು ಆಹ್ವಾನಿಸುತ್ತಿದೆ. ಈ ಅಹವಾಲು ಕೋರಿಕೆ 24 ರೊಳಗೆ ಮುಗಿಯಲಿದೆ. ಆದರೆ ಈಗಲೇ ಕೆಪಿಟಿಸಿಎಲ್ ನ ಅಧ್ಯಕ್ಷರಾದ ಬಳಿಗಾರ್ ಹೇಳುತ್ತಿದ್ದಾರೆ 'ಮೇ 9 ರ ನಂತರ ದರಗಳನ್ನು ಯಾವಾಗ ಬೇಕಾದರೂ ಹೆಚ್ಚಿಸಬಹುದು' ಎಂದು. ಹಾಗಾದರೆ ಆಯೋಗದ ಈ ಅಹವಾಲು ಕೋರಿಕೆಗೆ ಏನರ್ಥವಿದೆ. ದರಗಳು ಹೆಚ್ಚಿಸುವ ಬಗ್ಗೆ ನಿರ್ಧಾರ ಆಗಿಹೋಗಿದ್ದು ಜನರ ಕಣ್ಣಿಗೆ ಮಣ್ಣೆರಚಲು ಈ ನಾಟಕವಲ್ಲವೇ?

ಈ ದರಗಳ ಹೆಚ್ಚಳದ ಬಗ್ಗೆ ವಿವರವಾಗಿ ಅಧ್ಯಯನ ನಡೆಸಿರುವ ಸಿಪಿಐ(ಎಂ) ಮತ್ತು ಪ್ರಾಂತ ರೈತಸಂಘ ಆಯೋಗದ ಎದುರು ತಕರಾರು ಅರ್ಜಿ ಸಲ್ಲಿಸಿದೆ. ಈ ದರಗಳು ಹೆಚ್ಚಳಕ್ಕೆ ವಿಶ್ವಬ್ಯಾಂಕ್ ಒತ್ತಡವನ್ನು ಹೆಚ್ಚಿಸಿದೆ. ಇದೇ ಏಪ್ರಿಲ್ 1 ರಿಂದ ಕೆಪಿಟಿಸಿಎಲ್ ವಿಭಜನಗೊಳಿಸಿ(ಗುಲ್ಬರ್ಗಾ, ಮಂಗಳೂರು, ಬೆಂಗಳೂರು, ಹುಬ್ಬಳ್ಳಿ) ನಾಲ್ಕು ಕಂಪನಿಗಳನ್ನಾಗಿಸಲು ನಿರ್ಧರಿಸಲಾಗಿತ್ತು. ಅದರ ಘೋಷಣೆ ಮೇ ನಲ್ಲಿ ನಡೆಯಲಿದೆ.

ವಿದ್ಯುತ್ ದರಗಳನ್ನು ಹೆಚ್ಚಿಸಿರುವುದು ಅತ್ಯಂತ ಅಸಹನೀಯ ಸ್ಥಿತಿ ನಿರ್ಮಿಸಿದೆ. ಆಂಧ್ರದ ದರಗಳಿಗಿಂತಲೂ ಕರ್ನಾಟಕದಲ್ಲಿನ ಪ್ರಸ್ತಾಪಿತ ದರಗಳು ತುಂಬಾ ಅಧಿಕ. ಇದು ನಗರ-ಗ್ರಾಮಾಂತರಗಳ ಸಾಮಾನ್ಯ ವಿದ್ಯುತ್ ಬಳಕೆದಾರರನ್ನು, ಪಂಪ್‌ಸೆಟ್ ಕೃಷಿಗೆ ಬಳಸುವ ಎಲ್ಲಾ ರೈತರನ್ನು ಬಾಧಿಸಲಿದೆ. ಭಾಗ್ಯಜ್ಯೋತಿಗೆ ದರಗಳನ್ನು ನಿಗದಿ ಪಡಿಸಿರುವುದಲ್ಲದೇ ಮೀಟರ್ ಅಳವಡಿಸುತ್ತಿರುವುದು ಕೃಷಿಕೂಲಿಕಾರು-ಬಡಜನರನ್ನು ಕತ್ತಲೆಗೆ ತಳ್ಳಲಿದೆ. ಇವೆಲ್ಲಾ ಕೇಂದ್ರ - ರಾಜ್ಯ ಸರ್ಕಾರಗಳ ನೀತಿಗಳು. ಇಂತಹ ಕ್ರಮಗಳನ್ನು ವಿರೋಧಿಸಿ ಇದೇ ಏಪ್ರಿಲ್ 22 ರಿಂದ 29 ರವರೆಗೆ ಎಲ್ಲಾ ಜಿಲ್ಲೆಗಳಲ್ಲಿ ಜಾಥಾಗಳನ್ನು ನಡೆಸಿ, ವ್ಯಾಪಕ ಜನ ಜಾಗೃತಿ ಆಂದೋಲನ ಸಂಘಟಿಸಲು ನಿರ್ಧರಿಸಿದೆ. ಬಳಿಕ ಮೇ 6 ರಂದು ಎಲ್ಲಾ ಕೇಂದ್ರಗಳಲ್ಲಿ ಪ್ರತಿಭಟನಾ ಮೆರವಣಿಗೆ, ಕೆಪಿಟಿಸಿಎಲ್ ಆಫೀಸುಗಳೆದುರು ಪ್ರತಿಭಟನಾ ಪ್ರದರ್ಶನ ನಡೆಸಲಾಗುವುದು. ಇದರ ಪ್ರಚಾರಕ್ಕಾಗಿ ಕರಪತ್ರ, ಪೋಸ್ಟರ್ಸ್, ಅಲ್ಲದೇ ಕಿರುಹೊತ್ತಿಗೆಯನ್ನು ಹೊರತರಲಾಗುತ್ತಿದೆ. ಈ ಚಳುವಳಿ ಮೂಲಕ ಜನತೆಯ ಪ್ರತಿರೋಧ ಬೆಳೆಸಬೇಕಿದೆ.

ಹಾಗೆಯೇ ಪ್ರಾಂತ ರೈತ ಸಂಘ, ಕೂಲಿಕಾರರ ಸಂಘಟನೆ, ಅಲ್ಲದೇ ವಿದ್ಯುತ್ ಬಳಕೆದಾರರ ಸಂಘಟನೆ ಹಾಗೂ ಸಾಮೂಹಿಕ ಸಂಘಟನೆಗಳಿಂದ ಮೇ 30 ರಂದು ರಾಜ್ಯಮಟ್ಟದ ಬೃಹತ್ ರ್‍ಯಾಲಿಯನ್ನು ಬೆಂಗಳೂರಿನಲ್ಲಿ ಸಂಘಟಿಸಲು ನಿರ್ಧರಿಸಲಾಗಿದೆ. ರಾಜ್ಯಮಟ್ಟದ ಜಾಥಗಳು ಹೊರಡಲಿದೆ.

### POTA ಬೇಡ ಕೋಕವೂ ಬೇಡ

ಕರ್ನಾಟಕದಲ್ಲಿ ಭಯೋತ್ಪಾದನಾ ನಿಗ್ರಹ ಕಾಯ್ದೆ(POTA) ವನ್ನು ಜಾರಿಗೊಳಿಸುವುದಿಲ್ಲವೆಂದು ಮುಖ್ಯಮಂತ್ರಿ ಕೃಷ್ಣ ಪ್ರಕಟಿಸಿರುವುದು ಸ್ವಾಗತಾರ್ಹ. ಇದು ಕೇಂದ್ರದ ಕಾನೂನಾದರೂ ಅದರ ಜಾರಿ ರಾಜ್ಯಗಳ ತೀರ್ಮಾನಕ್ಕೆ ಬಿಟ್ಟದ್ದು. (ಕಾನೂನು - ಸುವ್ಯವಸ್ಥೆ - ರಾಜ್ಯದ ಪಟ್ಟಿಯಲ್ಲಿದೆ) ಹಾಗೆಯೇ POTA ಜಾರಿಗೊಳಿಸುವುದಿಲ್ಲವೆಂದಿರುವ ಕೃಷ್ಣ ಅಂತಹುದೇ ಕ್ರೂರ 'ಕೋಕಾ' ಜಾರಿಗೊಳಿಸಬಾರದು. ಜನತೆಯ, ನಾಗರೀಕರ ಪ್ರಜಾಸತ್ತಾತ್ಮಕ ಹಕ್ಕುಗಳ ವಿಷಯದಲ್ಲಿ ಕಾಳಜಿಪೂರ್ವಕ ಸಮಾನವಾದ ಹೊಣೆಗಾರಿಕೆಯುಳ್ಳ ನಿಲುಮೆ ಇರಬೇಕು.

## ಕೊಡಗು: ಜನವಂಚನೆಗೆ ಜಾಗೃತಿಯ ಸೋಗು

ಕೊಡಗು ಜಿಲ್ಲೆ ಸದಾ ಉರಿಯುತ್ತಿರಲೇ ಬೇಕೆಂದು ಬಿಜೆಪಿ ತೀರ್ಮಾನಿಸಿಬಿಟ್ಟಿದೆ. ಕಳೆದ ಡಿಸೆಂಬರ್‌ನಲ್ಲಿ ನಂತರ ಜನವರಿಯಲ್ಲಿ ವ್ಯಾಪಕ ಹಿಂಸೆ, ಆಕ್ರಮಣ ನಡೆಸಿ ಅಲ್ಪಸಂಖ್ಯಾತರ ಮಸೀದಿ, ಅಂಗಡಿ, ಮನೆಗಳ ನಾಶ ಪಡಿಸಿದ ಈ 'ಖಾವಿ ಪಡೆ' ಇನ್ನೊಮ್ಮೆ 'ಹುಸಿ ಜಾತ್ಯತೀತ ವಾದಿ'ಗಳನ್ನು ಖಂಡಿಸಲು ರ್‍ಯಾಲಿ ನಡೆಸಿ ಹಿಂತಿರುಗುವಾಗ ಮಸೀದಿ ಮೇಲೆ ಧಾಳಿ ನಡೆಸಿದ್ದು ಹಸಿಯಾಗಿರುವಾಗಲೇ ಈಗ ಭಾಗಮಂಡಲದ ತಲಕಾವೇರಿಯಿಂದ ಜಿಲ್ಲೆಯಾದ್ಯಂತ ಏಪ್ರಿಲ್ 12 ರಿಂದ 19 ರವರೆಗೆ ಜನಜಾಗೃತಿ ಜಾಥಾ ಹೆಸರಿನಲ್ಲಿ ಮತ್ತೆ ಸ್ಮಶಾನ ಮಾಡಲು ಹೊರಟಿದೆ. ಇಲ್ಲದ ಹರಿಶ್ಚಂದ್ರನಿಗೆ ದೇವಸ್ಥಾನ ಕಟ್ಟುವ ಈ ಪರಿವಾರ, ಪಾಲೂರು ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿಸಲು(ಇವರೇ ಹಾಳು ಮಾಡಿದ್ದರೆಂಬ ಪುಕಾರು ಇದೆ) ಈಗ ಸರ್ಕಾರದ ಹಣಕ್ಕಾಗಿ ಜಾಥಾ ನಡೆಸಲು ಮುಂದಾಗಿದ್ದಾರೆ. ಇದನ್ನು ಕೇಂದ್ರ ಸಚಿವ ಧನಂಜಯ ಕುಮಾರ್ ಉದ್ಘಾಟಿಸಲಿದ್ದಾರೆ. ಮುಕ್ತಾಯಕ್ಕೆ ಸಚಿವೆ ಉಮಾಭಾರತಿ ಬರಲಿದ್ದಾರೆ.

ದೇವಸ್ಥಾನ ಜೀರ್ಣೋದ್ಧಾರ ಮಾಡಿಸುವುದಾದರೆ ಈ ಭಕ್ತಾದಿಗಳಿಂದ ಬೇಕಾದರೆ ಹಣ ಕೂಡಿಸಿಕೊಳ್ಳಲಿ. ಸರ್ಕಾರದ್ದೇಕೆ? ಅದೂ ಕೇಂದ್ರ ಸಚಿವರಿದ್ದು. ಅದಕ್ಕಾಗಿ ವಾರಗಟ್ಟಲೇ ಜಾಥಾವೆ! ಇದರಲ್ಲಿ ಸಂಘ ಪರಿವಾರ, ಭಜರಂಗದಳದವರ ಮಾತುಗಳು ಎಂತಹ ಸೌಹಾರ್ದತೆ, ಭಕ್ತಿಯನ್ನು ತರುತ್ತವೆ ಎಂಬುದು ತಿಳಿದೇ ಇದೆ. ಅಂತಿಮವಾಗಿ ಮತ್ತೆ ಗಲಭೆ ಎಬ್ಬಿಸುವುದು. ಅಲ್ಪಸಂಖ್ಯಾತರನ್ನು ಬೆದರಿಸುವುದು. ಆ ಮೂಲಕ ಜಿಲ್ಲೆಯಲ್ಲಿ ಅತೀ ಧಾರುಣ ಸ್ಥಿತಿ ತಲುಪಿರುವ ಕಾಫಿ ಬೆಳೆಗಾರರು, ಕೂಲಿ ಸಿಗದೇ ಕಂಗಾಲಾಗಿರುವ ಕೂಲಿಕಾರರ ಅಹವಾಲುಗಳನ್ನು ಮೂಲೆಗೊತ್ತುವುದು.

ದೇಶಾದ್ಯಂತ ಕಾಣುತ್ತಿರುವಂತೆ ಬಿಜೆಪಿಯ ಬಗ್ಗೆ ಜನತೆ ಇಲ್ಲಿಯೂ ಭ್ರಮನಿರಸಗೊಂಡಿದ್ದಾರೆ. ಕಳೆದ ಹಲವಾರು ವರ್ಷಗಳಿಂದ ಕಾಫಿಗೆ ಲಾಭದಾಯಕ ಬೆಲೆ ಕೊಡಿಸುವುದಾಗಿ ಹೇಳಿ 'ಬೆಳೆಗಾರರನ್ನು' ದೆಹಲಿಯಾತ್ರೆ ಮಾಡಿಸಿ, ವಾಜಪೇಯಿ ಹೂಹಾರ ಹಾಕಿಸಿ, ಕರೆದು ತಂದಿದ್ದಾರೆ. ಆದರೆ ಏನೂ ಪ್ರಯೋಜನ ಆಗಿಲ್ಲ. ಹೀಗಾಗಿ ಕ್ಷೇತ್ರವನ್ನು ರಕ್ಷಿಸಿಕೊಳ್ಳಲು ಬೆಳೆಗಾರರನ್ನು ಮರೆಸಲು ಇಂತಹ ಕೋಮು ಪ್ರಚೋದನೆಯನ್ನು ಪ್ರಜ್ಞಾಪೂರ್ವಕವಾಗಿ ಮಾಡುತ್ತಾ ಬಂದಿದ್ದಾರೆ. 'ಪಾಲೂರು ಯಾತ್ರೆ' ಯ ಹಿಡನ್ ಅಜೆಂಡಾವೇ ಇದು.

ಇಂತಹ ಅಪಾಯಕಾರಿ ಪ್ರಯತ್ನಗಳನ್ನು ಆರಂಭದಲ್ಲೇ ಮಟ್ಟಹಾಕಬೇಕು. ಜನತೆ ತಿರಸ್ಕರಿಸಬೇಕು. ಅಲ್ಲದೇ ರಾಜ್ಯ ಸರ್ಕಾರ-ಪೋಲೀಸ್ ಇಲಾಖೆ ದೃಢ ಕ್ರಮ ವಹಿಸಬೇಕು. ಈ ಕುರಿತು ಜಾತ್ಯತೀತ ವೇದಿಕೆಯ ಎ.ಕೆ.ಸುಬ್ಬಯ್ಯ ನವರು ಮತ್ತು ಸಿಪಿಐ(ಎಂ) ನ ರಾಜ್ಯ ನಿಯೋಗ ಪೋಲಿಸ್ ಅಧಿಕಾರಿಗಳನ್ನು ಆಗ್ರಹಿಸಿದೆ. ಈಗೇನೂ ಜಾಥಾ ನಿರ್ಬಂಧಿಸಿದ್ದಾರೆ. ಆಡಳಿತದ ಬಿಗಿ ನಿಲುವ ತಳೆದಿದ್ದರಿಂದ ತಲಕಾವೇರಿಯಿಂದ ಭಾಗಮಂಡಲ ದಲ್ಲಿ ಮುಕ್ತಾಯವಾಗಲಿದೆಯೆಂದು ಬಿಜೆಪಿ ನಾಯಕರು ಉಸುರಿದ್ದಾರೆ.

ಸರ್ಕಾರದ ಕ್ರಮ ಸ್ವಾಗತಾರ್ಹ. ಇನ್ನೂ ಬಿಗಿಯಾಗಿ ಕಾರ್ಯವೆಸಗಬೇಕು. ಆದರೆ ಈ ಹಿಂದಿನ ಗಲಭೆಗಳಲ್ಲಿ ಭಾಗಿಯಾದ ಆರೋಪಿಗಳ ಮೇಲೆ ಇನ್ನೂ ಮೊಕದ್ದಮೆ ಹೂಡಿಲ್ಲ. ಖಾವಿಪಡೆ ಗಳೊಂದಿಗೆ ಸಹಕರಿಸಿ ,ಕೈಜೋಡಿಸಿದ ಜಿಲ್ಲಾ ಪೋಲೀಸ್ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಿಲ್ಲ.

ದಿಗ್ಭ್ರಮೆಗೊಳಿಸುವ ವಿಷಯವೆಂದರೆ ಬಾಳೆಲೆ ಗ್ರಾಮದಲ್ಲಿ ಕಳೆದ ಗಲಭೆಯಲ್ಲಿ ಎರಡು ಮಸೀದಿಗಳು ನಾಶಗೊಂಡವು. 14 ಅಂಗಡಿ ಲೂಟಿ ಯಾದವು. ಅಂದು ಮುಚ್ಚಿದ ಅಲ್ಪಸಂಖ್ಯಾತರ ಈ ಅಂಗಡಿಗಳನ್ನು ತೆರೆಯಲು ಇದುವರೆಗೂ ವಿಶ್ವಹಿಂದೂ ಪರಿಷತ್ ಪಡೆ ಅವಕಾಶವನ್ನೇ ಕೊಟ್ಟಿಲ್ಲ. ತೆರೆದರೆ ಧಾಳಿ ನಡೆಸಿದ್ದಾರೆ. ಇವರು ಸಚಿವ ಎಂ.ಎಂ.ನಾಣಯ್ಯನವರ ಬೆಂಬಲಿಗರಂತೆ. ಕೊಡಗಿನಲ್ಲಿ ಕಾನೂನು-ವ್ಯವಸ್ಥೆ, ಸಂವಿಧಾನ ಜಾರಿಯಲ್ಲಿದೆಯೇ ಅಥವಾ ಖಾವಿ ಪಡೆಯ ಆಡಳಿತಕ್ಕೆ ಒಪ್ಪಿಸಲಾಗಿದೆಯೇ? ಎಂಬ ಅನುಮಾನ ಬರುತ್ತದೆ. ಈ ಬಗ್ಗೆ ರಾಜ್ಯ ಪೋಲೀಸ್ ಅಧಿಕಾರಿಗಳು ವಾರದಲ್ಲಿ ಕ್ರಮವಹಿಸುತ್ತೇವೆ ಎನ್ನುತ್ತಾರೆ. ಇಲ್ಲಿ ಪ್ರಶ್ನೆ ಎಂದರೆ ಇಷ್ಟು ವಿಳಂಬ ಯಾಕಾಯಿತು? ಕಾಂಗ್ರೆಸ್ ಸಹ ಇಂತಹ ಸ್ಥಿತಿಯ ರಾಜಕೀಯ ಲಾಭ ಹೊಡೆಯಲು



ಸಂಘಪರಿವಾರದಿಂದ ಭಗ್ನಗೊಂಡ ಬಜಾರು



**ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡು ತಾಲೂಕಿನ ಚಿಗಳ್ಳಿ ಎಂಬುದು ಸಣ್ಣಗ್ರಾಮ. ಶ್ರೀಮಂತ ಹಳ್ಳಿಯೇನಲ್ಲ. ಕೆಲವರು ಬೇಸಾಯ ಮಾಡುವವರು, ಹಲವರು ಕೃಷಿ ಕೂಲಿ ಮಾಡುವವರು, ನೀರಾವರಿಯೇ ಇಲ್ಲದ ಈ ನೆಲದಲ್ಲಿ ಬೆಳೆ ತೆಗೆಯಲು ವರ್ಷಕ್ಕೊಮ್ಮೆ ಬರುವ ಮಳೆಯನ್ನೇ ಕಾಯಬೇಕು. ಇಂತಹ ಊರಲ್ಲಿ ಇಂದು ಲಕ್ಷಾಂತರ ರೂಪಾಯಿ ವ್ಯಯಿಸಿ ದೇವಸ್ಥಾನ ಕಟ್ಟಲು ಪ್ರಾರಂಭಿಸಿ ಆಗಿದೆ. ಈ ದೇಶದಲ್ಲಿ ದೇವಸ್ಥಾನ ಕಟ್ಟುವುದು ವಿಶೇಷ ಸಂಗತಿಯೇನಲ್ಲ. ಎಷ್ಟು ಜೀವ ಬಲಿ ಬಿದ್ದರೇನು? ಎಷ್ಟು ರಕ್ತ ಹರಿದರೇನು? ದೇವಸ್ಥಾನ ಕಟ್ಟೇ ಕಟ್ಟುತ್ತೇವೆ ಎನ್ನುವವರು ಒಂದಿಷ್ಟು ಜನ ಇದ್ದಾರೆ. ಆದರೆ ಚಿಗಳ್ಳಿಯಲ್ಲಿ ನಿರ್ಮಾಣ ಆಗುತ್ತಿರುವ ದೇವಸ್ಥಾನದ ಹಿಂದೆ ಒಂದು ದೊಡ್ಡ ಕಥೆಯೇ ಇದೆ.**

# 'ಚಿಗಳ್ಳಿ ದೀಪ'ದ ಗುಟ್ಟು ರಟ್ಟು


ಚಿಗಳ್ಳಿಯ ಒಂದು ಮನೆಯಲ್ಲಿ ಕಳೆದ 23 ವರ್ಷಗಳಿಂದ ಎಣ್ಣೆ ಇಲ್ಲದ ದೀಪ ಪವಾಡಸದೃಶ್ಯವಾಗಿ ಉರಿಯುತ್ತಿದೆಯೆಂದೂ, ಎಣ್ಣೆಯಿಲ್ಲದೆ ಬೇರೆ ಯಾವ ಇಂಧನವೂ ಬಳಕೆಯಾಗದೇ ಕೇವಲ ದೈವೀಶಕ್ತಿಯ ಪ್ರಭಾವದಿಂದ ಉರಿಯುತ್ತಿರುವುದರಿಂದ ಇದೊಂದು ಪುಣ್ಯಕ್ಷೇತ್ರ, ಯಾತ್ರಾ ಕ್ಷೇತ್ರವೆಂದೂ, ಇಲ್ಲಿ ಈ ದೀಪ ಇರುವ ಸ್ಥಳದಲ್ಲಿ ಒಂದು ದೇವಸ್ಥಾನ ಕಟ್ಟಿ ಜಗತ್ತಿಗೆ ಶಾಂತಿ ಒದಗಿಸಲು ಮತ್ತು ದೇವರ ಕೃಪೆಗೆ ಒಳಗಾಗಲು ಬಯಸಿರುವ ಜನ ದೇವಸ್ಥಾನ ಕಟ್ಟಲು ಹೊರಟಿದ್ದಾರೆ. ಅಲ್ಲಿರುವ ಇನ್ನೂ ಹಲವರು'ಉಳ್ಳವರು ಶಿವಾಲಯ ಕಟ್ಟುವರು ನಾವೇನು ಮಾಡುವುದು ತಂದೆ? ಎಂದು ಸುಮ್ಮನಿದ್ದಾರೆ.

**ಏನಿದು ಚಿಗಳ್ಳಿಯ ದೀಪದ ಕಥೆ?**

ಚಿಗಳ್ಳಿಯ ದೀಪದ ಬಗ್ಗೆ ಒಂದು ಕಥೆಯೇ ನಿರ್ಮಾಣ ಆಗಿದೆ. (ಜನರನ್ನು ನಂಬಿಸಲು ಒಂದು ಕಥೆ ಬೇಕಲ್ಲ). ಅಲ್ಲಿಯ ಈರಪ್ಪಣ್ಣ, ನಾಗರತ್ನ, ರಾಯ್ಕರರನ್ನು ಕೇಳಿದರೆ ಈ ಕೆಳಗಿನ ಕಥೆ ಹೇಳುತ್ತಾರೆ.

1979 ರಲ್ಲಿ ಶಾರದಮ್ಮ ಎನ್ನುವ ಬಡ ಮಹಿಳೆಯೊಬ್ಬಳು ಹೊತ್ತಿಸಿದ ಮೂರು ದೀಪ ಬ್ರಹ್ಮ-ವಿಷ್ಣು-ಮಹೇಶ್ವರ ಸ್ವರೂಪಿಯಾದದ್ದು. ಈ ದೀಪ ಹೊತ್ತಿಸಿದ ಶಾರದಮ್ಮ ಈ ದೀಪದಲ್ಲಿ ಮಹಾಪುರುಷರು, ಗುಹೆಗಳು, ದೇವರುಗಳನ್ನೆಲ್ಲಾ ಕಾಣುತ್ತಿದ್ದಳಂತೆ!

ಅವರ ಪತಿ ಅಣ್ಣಪ್ಪ ವಿಧಿವಶನಾದ ಮೇಲೆ ಬಡತನ ಅವರನ್ನು ಅಪ್ಪಿಕೊಂಡಿತು. ಒಮ್ಮೆ ಇವರ ಮನೆಯ ಎದುರಿನ ಸದ್ಗುರು ಸಮರ್ಥ ಕಲ್ಲೇಶ್ವರ ಮಹಾರಾಜರ ಮಠದಲ್ಲಿ ಶರೀಫ ಶಿವಯೋಗಿ ಪುರಾಣವನ್ನು ಚೆನ್ನಬಸವ ಶಾಸ್ತ್ರಿಗಳು ಹೇಳುವ ಕಾರ್ಯಕ್ರಮ ನಡೆಯುತ್ತಿತ್ತು. ದೈವಭಕ್ತಿಯೂ, ಸಾಧ್ವಿಯಾದ ಶಾರದಮ್ಮ ಈ ಪುರಾಣ ಕೇಳಲು ಹೋಗುವಾಗ ಮನೆಯಲ್ಲೊಂದು ದೀಪ ಹಚ್ಚಲು ಮುಂದಾದರೆ ಎಣ್ಣೆ ಇರಲಿಲ್ಲ. ಕೊನೆಗೂ ಬಾಟಲಿಯ ತಳದಲ್ಲಿರುವ ಒಂದೆರೆಡು ತೊಟ್ಟು ಎಣ್ಣೆಯನ್ನು ಹಾಕಿ ದೀಪ ಹಚ್ಚಿಟ್ಟು ಹೋದರು. ಆದರೆ ಮಧ್ಯರಾತ್ರಿ ಪುರಾಣ ಮುಗಿಸಿ ಬಂದರೂ ದೀಪ ಆರಿರಲಿಲ್ಲ. ಈ ದೀಪವನ್ನು ಅಜ್ಜಿ (ಶಾರದಮ್ಮ) ಭಕ್ತಿಯಿಂದ ಪೂಜಿಸಿದಳು. ಇನ್ನೊಂದು ದೀಪ ಹೊತ್ತಿಸಲು ಎಣ್ಣೆ ಇರಲಿಲ್ಲ. ಎಲ್ಲಿಂದಲೋ ಸ್ವಲ್ಪ ಸೀಮೆ ಎಣ್ಣೆ ತಂದು ಇನ್ನೊಂದು ಲಾಂಪ್ ಉರಿಸಿದಳು. ಅದೂ ಕೂಡಾ



ಆರದೇ ಉರಿಯುತ್ತಲೇ ಇತ್ತು. ಕೆಲವು ದಿನಗಳಿಂದ ಈ ಎರಡು ದೀಪದ ಪೂಜೆಗಾಗಿ ಇನ್ನೊಂದು ಲಾಟೀನು ಹೊತ್ತಿಸಿದರು. ಅದೂ ಆರದೇ ಉರಿಯುತ್ತಿದೆ. ಹೀಗೆ ಅಜ್ಜಿ ಹಚ್ಚಿದ ಮೂರು ದೀಪಗಳೂ ಆರದೆ ಪ್ರತಿಯೊಂದರಲ್ಲಿ ಬ್ರಹ್ಮ ವಿಷ್ಣು, ಮಹೇಶ್ವರ ನೆಲೆ ನಿಂತು ಅಜ್ಜಿಯನ್ನು ಉದ್ದಾರ ಮಾಡಿದರು. ಇನ್ನೂ ದೀಪ ಹಚ್ಚುತ್ತಾ ಹೋದರೆ ಮನೆತುಂಬಾ ದೀಪ ಆಗಿಬಿಡಬಹುದೆಂದು ಮತ್ತೆ ದೀಪ ಹೊತ್ತಿಸಿಲ್ಲ!

**ವಿಠ್ಠಲ ಭಂಡಾರಿ**

ದೀಪ ಹೊತ್ತಿಸಿದ ಅಜ್ಜಿ ಇಲ್ಲ. ದೀಪ ಉರಿಯುತ್ತಲೇ ಇದೆ. ಕಥೆಗಳು ಹೊಸ ಹೊಸ ಆಯಾಮ ಪಡೆದ ಬಳಿಕ ಸಂಚರಿಸಲು ಹೊರಟಿವೆ.

ಇಂತಹ ಆಕರ್ಷಕ ಕಥೆ ಚಿಗಳ್ಳಿ, ಮುಂಡಗೋಡು, ಉತ್ತರ ಕನ್ನಡದ ಸೀಮೆ ದಾಟಿದರೆ ಈ ಕತೆ ಚಿನ್ನದ ಮೊಟ್ಟೆ ಇಡುತ್ತದೆಂದು ತಿಳಿದು ಪತ್ರಿಕೆ ಮೂಲಕ, ಇನ್ನಿತರ ಮಾಧ್ಯಮದ ಮೂಲಕ ಪ್ರಚಾರ ಪ್ರಾರಂಭಿಸಿದರು. ಸಿರ್ಸಿಯಲ್ಲಿರುವ ಬ್ಯಾಂಕ್ ಉದ್ಯೋಗಿಯ ಮೂಲಕ ಇದಕ್ಕೊಂದು ಯೋಜನೆ ಸಿದ್ಧವಾಯಿತು.

**ಗಣ್ಯಾತಿಗಣ್ಯರ ಕಣ್ಣಲ್ಲಿ ಹೊತ್ತದ ಬೆಳಕು....**

ವೀರೇಂದ್ರ ಹೆಗ್ಗಡೆ ಬಂದರು. "ವೈಜ್ಞಾನಿಕ ದೃಷ್ಟಿಯಲ್ಲಿ ನೋಡಿ ಇದು ಸುಳ್ಳು - ಪಳ್ಳು ಎಂದೆಲ್ಲಾ ಹೇಳುವುದು ಸರಿಯಲ್ಲ" ಎಂದು ಶಿಫಾರಸ್ಸು ಕೊಟ್ಟು ಹೋದರು. ದಲಾಯಿ ಲಾಮ ಬಂದು ಹುಬ್ಬೇರಿಸಿ 50 ಸಾವಿರ ರೂ. ಕೊಟ್ಟರು. ದೇಶಪಾಂಡೆಯವರು ಸರ್ಕಾರದಿಂದ ಈ ದೇವಸ್ಥಾನಕ್ಕೆ ಹಣ ಕೊಡಿಸುವುದಾಗಿ ಆಶ್ವಾಸನೆ ಕೊಟ್ಟರು. ಪೇಜಾವರ ಸ್ವಾಮಿಗಳು ಭೇಟಿ ಕೊಟ್ಟು 'ಇದು ಪರೀಕ್ಷೆ ಆಗಬೇಕು' ಎಂದು ಹೇಳಿದ್ದನ್ನು ತಿದ್ದಿಕೊಳ್ಳುವಂತೆ 'ನಂಬಿಕೆಯ ಮೇಲೆ ಪೆಟ್ಟು ಬೀಳಬಾರದು' ಎಂದು ಹೇಳುವ ಮೂಲಕ ಬೆಕ್ಕಿನ ತಲೆಯ ಮೇಲೆ ದೀಪ ಇಟ್ಟವರಂತೆ ಶಿಫಾರಸು ಮಾಡಿದರು. ಹೀಗೇ ಅನೇಕರ ಭೇಟಿ.. ಸಹಾಯ... ಮುಂದುವರಿದಿದೆ.

**ವೈಜ್ಞಾನಿಕ ಶೋಧಕ್ಕೆ ಅವಕಾಶವಿದೆಯೇ?**

ಅನೇಕ ವಿಜ್ಞಾನಿಗಳು ಬಂದು ಪರೀಕ್ಷೆ ಮಾಡಿದ್ದಾರೆಂದು ಹೇಳಲಾಗುತ್ತಿದೆ. ಆದರೆ ಅವರು ಯಾರು ಎಂದು ಹೆಸರು ಬಹಿರಂಗ ಪಡಿಸುತ್ತಿಲ್ಲ. ಆದರೆ ನಿಜವಾದ ವಿಜ್ಞಾನಿಗೂ, ವಿಜ್ಞಾನ ಸಂಘಟನೆಯ ಕಾರ್ಯಕರ್ತರಿಗೆ ಇದನ್ನು ಪರೀಕ್ಷಿಸಲು ಅವಕಾಶ ಇಲ್ಲ. 1989 ರಲ್ಲಿ ಎಸ್‌ಎಫ್‌ಐ ನಿಂದ, 1992 ರಲ್ಲಿ ಜನವಿಜ್ಞಾನ ಕಲಾಜಾಥಾದಿಂದ, 1996 ರಲ್ಲಿ ಭಾರತ ಜ್ಞಾನ ವಿಜ್ಞಾನ ಸಮಿತಿಯಿಂದ ಇದರ ಪರೀಕ್ಷೆಗಾಗಿ ಸ್ಥಳಕ್ಕೆ ಹೋದಾಗ ಅವಕಾಶ ಕೊಟ್ಟಿಲ್ಲ. ಇದು ನಂಬಿಕೆಯ ಪ್ರಶ್ನೆ ಎಂದುಹೇಳುವ ಮೂಲಕ ಪರೀಕ್ಷೆಗೆ ಅವಕಾಶ ಕೇಳುವವರನ್ನು ದೈವಿ ದ್ರೋಹಿಗಳು, ದೈತ್ಯ-ದಾನವರೆಂಬ ದೃಷ್ಟಿಯಲ್ಲಿ ನೋಡಲಾಗುತ್ತಿತ್ತು. ಈಗ ಮತ್ತೆ 2002 ರಲ್ಲಿ ಖ್ಯಾತ ವಿಚಾರವಾದಿ ನರೇಂದ್ರ ನಾಯಕ್ ಅವರು ಎಣ್ಣೆ ಇಲ್ಲದ ದೀಪ ಉರಿಯುವುದು ಸುಳ್ಳೆಂದು, ಅದು ಸತ್ಯವಾದರೆ 1 ಲಕ್ಷ ರೂ. ಕೊಡುವುದಾಗಿ ಸವಾಲು ಹಾಕಿದರು. ಈಗಲೂ ದೀಪಗಳ ಒಡೆಯರು, ಅವರ ಹಿಂಬಾಲಕರು ಹೇಳುವುದು ಇದನ್ನು ಮುಟ್ಟಿ ಪರೀಕ್ಷಿಸುವಂತಿಲ್ಲ ಮತ್ತು ದೂರದಿಂದ ನೋಡಿ ಬರಬಹುದಷ್ಟೇ.

## ನಂಬಿಕೆಯ ಮಾತು ಧರ್ಮ-ಧಾರ್ಮಿಕತೆಯ ಸೋಗು

ಸರ್ಕಾರದ (ಸಾರ್ವಜನಿಕರ) ಹಣವನ್ನು ಇಂತಹ ಮೌಢ್ಯ ಬೆಳೆಸುವ ಕೆಲಸಕ್ಕೆ ಕೊಡಿಸುವ ಭರವಸೆ ಬಂದಿರುವುದರಿಂದ ಜಿಲ್ಲೆಯ ಅನೇಕರು ಇದನ್ನು ವಿರೋಧಿಸುತ್ತಿದ್ದಾರೆ. ಆದರೆ ಈ ಮೂಢನಂಬಿಕೆ, ಕಂದಾಚಾರಗಳಿಂದ ನಮ್ಮ ಜನರನ್ನು ಹೊರತರಲು ಪ್ರಯತ್ನಿಸುವುದನ್ನು ಬಿಟ್ಟು ಜಿಲ್ಲೆಯ ಕೆಲವು ಬಿಜೆಪಿ ಮುಂದಾಳುಗಳು ಈ 'ದೀಪ' ನಂಬಿಕೆಯ ಪ್ರಶ್ನೆಯೆಂದೂ, ಇದರ ಪರೀಕ್ಷೆಗೆ ಒತ್ತಾಯಿಸುವುದು ಹಿಂದೂ ಧರ್ಮದ ಮೇಲಿನ ಧಾಳಿಯೆಂದೂ, ಇವರನ್ನು ಬಂಧಿಸಬೇಕೆಂದೂ ಬೊಬ್ಬೆ ಹೊಡೆದರು. ಇಡೀ ವಿಷಯವನ್ನೇ ಧರ್ಮದೊಂದಿಗೆ ತಳಕುಹಾಕುವ ಮೂಲಕ ವೈಜ್ಞಾನಿಕ ಹೋರಾಟಕ್ಕೆ ಅಡ್ಡಿ ಮಾಡುತ್ತಿದ್ದಾರೆ. ಜನರ ಗಮನವನ್ನು ಗಂಭೀರ ವಿಷಯಗಳಿಂದ ಕ್ಷುಲ್ಲಕ ವಿಚಾರಗಳ ಕಡೆಗೆ ಸೆಳೆಯುವ ಅವರ ಮಾಮೂಲಿ ತಂತ್ರ ಉಪಯೋಗಿಸುತ್ತಿದ್ದಾರೆ. ವಿಷಯದ ಬಗ್ಗೆ ಸಂಪೂರ್ಣ ತಿಳುವಳಿಕೆ ಪಡೆದುಕೊಳ್ಳದೇ ಬೇಜಾಬ್ದಾರಿ ಹೇಳಿಕೆಗಳನ್ನು ನೀಡುತ್ತಿದೆಯೆಂದು ಆರೋಪಿಸಿ ಇಂಥವು ಯಾರಿಗೂ ಗೌರವ ತರುವಂತಹವುಗಳಲ್ಲ ಎನ್ನುವುದನ್ನು ಹೇಳುತ್ತಾ ಚಿಗಳ್ಳಿ ದೀಪ ಶೋಧದಿಂದ ಕೋಮುಸಾಮರಸ್ಯ ಕೆಡುವುದರಿಂದ ವಿಜ್ಞಾನದ ಕಾರ್ಯಕರ್ತರನ್ನು ಜೈಲಿಗೆ ಕಳುಹಿಸಬೇಕೆಂದು ಅಪ್ಪಣೆ ಕೊಡಿಸಿದ್ದಾರೆ. ಭಾರತದ ವಿವಿಧೆಡೆ ಕೋಮುಗಲಭೆ ಹುಟ್ಟುಹಾಕಿರುವವರೆಂದು ಸಾಬೀತಾಗಿರುವ ಪಕ್ಷದ ಹಿಂಬಾಲಕರಿಂದಲೇ ಇಂತಹ ಮಾತು!

ದ.ಕ. ವಿಚಾರವಾದಿ ಸಂಘದ ಕಾರ್ಯದರ್ಶಿ ನರೇಂದ್ರ ನಾಯಕ್, ಚಿಂತನ ಉತ್ತರ ಕನ್ನಡ, ಜನವಿಜ್ಞಾನ ಕಲಾಜಾಥಾ-1992, ಡಿವೈಎಫ್‌ಐ, ವಿಮಾ ನೌಕರರ ಸಂಘ(ಎಐಐಇಎ), ಅಂಚೆ ನೌಕರರ ಸಂಘ ಶಿರಸಿ, ಎಸ್‌ಎಫ್‌ಐ, ಭಾರತ ಜ್ಞಾನ ವಿಜ್ಞಾನ ಸಂಘಟನೆ, ಬಿ.ಎಚ್.ಶ್ರೀಧರ ಪ್ರತಿಷ್ಠಾನ - ಈ ಎಲ್ಲಾ ಸಂಘಟನೆಯ ಪ್ರತಿನಿಧಿಗಳನ್ನೊಳಗೊಂಡಂತೆ ಅನೇಕರು ಈ ದೀಪದ ಹಿಂದಿರುವ ವೈಜ್ಞಾನಿಕ ಸತ್ಯವನ್ನು ಬಯಲು ಮಾಡಲು ಒತ್ತಾಯಿಸಿದ್ದಾರೆ. ಜನರನ್ನು ಮೋಸ ಮಾಡುವ ಈ ಜಾಲವನ್ನು ಹೊರಗೆಳೆಯಲು ಸಹಕರಿಸುವಂತೆ

ಪುಟ 10 ಕ್ಕೆ

## ಕಟ್ಟುಕತೆಗಳ ಪ್ರಚಾರಕ್ಕೊಂದು ಪತ್ರಿಕೆ 'ತರಂಗ'

ಜನರ ಮೌಢ್ಯ, ಕಂದಾಚಾರವನ್ನು, ಅವೈಜ್ಞಾನಿಕ ನಂಬಿಕೆಗಳನ್ನು ಬೆಳೆಸುವ ಮೂಲಕವೇ ತನ್ನ ಪ್ರಸಾರದ ಸಂಖ್ಯೆ, ಲಾಭವನ್ನು ಹೆಚ್ಚು ಮಾಡಿಕೊಳ್ಳುವುದರಲ್ಲಿ ನಿಸ್ಸೀಮವಾಗಿರುವ 'ತರಂಗ' ವಾರಪತ್ರಿಕೆ ಹಿಂದೆ ಈ ಚಿಗಳ್ಳಿ ದೀಪದ ಬಗೆಗಿನ ಸಚಿತ್ರ ವರದಿಯನ್ನ ಪ್ರಕಟಿಸಿತು. ತಾಲೂಕು/ಜಿಲ್ಲಾ ಮಟ್ಟದಲ್ಲಿ ಮಾತ್ರ ಸುದ್ದಿಯಲ್ಲಿದ್ದ ಈ ಸುದ್ದಿಯನ್ನು ಇಡೀ ಕರ್ನಾಟಕಕ್ಕೆ ಹಂಚಿದ ಖ್ಯಾತಿ ತರಂಗದ್ದು. 98 ಆಗಸ್ಟ್ 2 ರ 31ನೇ ಸಂಚಿಕೆಯಲ್ಲಿ ಈ ಅವೈಜ್ಞಾನಿಕ ಸುದ್ದಿಯನ್ನು ಅತಿರಂಜಿತವಾಗಿ, ಎಲ್ಲರೂ ನಂಬುವಂತೆ ಪ್ರಕಟಿಸಲಾಯಿತು. ಅನೇಕ ವಿಜ್ಞಾನಿಗಳು ಇದನ್ನು ಸಂಶೋಧನೆ ಮಾಡಿದ್ದಾರೆಂದು [illegible] ತಪ್ಪು ತಿಳುವಳಿಕೆ ಕೊಟ್ಟಿತು.

ಪ್ರೇತದ ಚಿತ್ರ ಪ್ರಕಟಿಸುವುದು, ಪ್ರಳಯದ ಬಗ್ಗೆ ವೈಜ್ಞಾನಿಕವೆಂದು ಭಯ ಹುಟ್ಟಿಸಿದ್ದು, ಆತ್ಮದೊಂದಿಗೆ ಸಂಭಾಷಣೆ, ಮಸೀದಿಯ ಕೆಳಗೆ ದೇವಸ್ಥಾನದ ಕಂಬ ಇದೆ ಎಂಬ ಸಂಶೋಧನಾ ವರದಿ ಪ್ರಕಟಿಸುವುದು, ದೇವಸ್ಥಾನ, ಸ್ವಾಮಿ, ಮಠದ ಬಗ್ಗೆ ಸಚಿತ್ರ ವರದಿ ಪ್ರಕಟಿಸುವುದು... ಹೀಗೆ ಸದಾ ಇಂತಹ ವರದಿಯನ್ನು ಪ್ರಕಟಿಸುವ ಚಾಳಿಯನ್ನೇ ಇಟ್ಟುಕೊಂಡಿರುವ 'ತರಂಗ' ಈ ರಾಜ್ಯದ ಜನರ ಜೀವನ ಮಟ್ಟವನ್ನು ಎತ್ತರಿಸುವ ಯಾವ ಕಾರ್ಯವನ್ನು ಮಾಡದಿದ್ದರೂ ತೊಂದರೆ ಇಲ್ಲ, ಇಂತಹ ವರದಿ ಪ್ರಕಟಿಸುವ ಮೂಲಕ ಅಜ್ಞಾನ ಹಬ್ಬಿಸಿ ಸಮಾಜದ ವಿಕಾಸವನ್ನು ತಡೆಯುವ ಕೆಲಸ ನಿಲ್ಲಿಸಬೇಕು. ಜನರನ್ನು ಬಲಿಹಾಕುವುದನ್ನು ವಿರೋಧಿಸಬೇಕಿದೆ.



# ಮೋದಿಯನ್ನು ಉಳಿಸಲಾಗದು

**ಮೋದಿಯನ್ನು ಉಚ್ಚಾಟಿಸಲೇಬೇಕೆಂಬ ಒತ್ತಡ ಈಗ ಕೇವಲ ಕಾಂಗ್ರೆಸ್ ಅಥವಾ ಪೀಪಲ್ಸ್ ಫ್ರಂಟ್‌ನಿಂದ ಮಾತ್ರವಲ್ಲ ಸ್ವತಃ ಎನ್‌ಡಿಎ ಮಿತ್ರಪಕ್ಷಗಳು ವಾಜಪೇಯಿಯನ್ನು ಆಗ್ರಹಿಸತೊಡಗಿವೆ 'ಪ್ರಧಾನಿಗಳೇ ಅವರನ್ನು ತೊಲಗಿಸಿ, ನಮ್ಮ ಮುಖಕ್ಕೆ ಹಚ್ಚಿರುವ ಮಸಿ ಒರೆಸಿ' ಎಂದು**



ಹಿಂಗಾದರೂ ನಿಲ್ಲದ ಹಿಂಸಾಚಾರ

ದೇಶವಿಭಜನೆಯ ಕಾಲಕ್ಕಿಂತಲೂ ಅತ್ಯಂತ ಬರ್ಬರ ಕೋಮು ಪ್ರಚೋದಿತ ಹಿಂಸಾಚಾರದ ಐದು ವಾರಗಳ ನಂತರ ಗುಜರಾತಿಗೆ ಭೇಟಿ ನೀಡುವುದು ಉಚಿತವೆಂದು ಪ್ರಧಾನಮಂತ್ರಿಗಳು ಕಂಡುಕೊಂಡರು. ಸರ್ಕಾರಿ ಪ್ರಾಯೋಜಿತ ಪಾತಕಕ್ಕೆ ಯಾವ ವ್ಯಕ್ತಿ, ನರೇಂದ್ರಮೋದಿ ಕಾರಣನಾಗಿದ್ದನೋ ಆ ವ್ಯಕ್ತಿಯನ್ನು ಜೊತೆಯಲ್ಲೇ ಕರೆದುಕೊಂಡು ಪ್ರಧಾನಿ ವಾಜಪೇಯಿಯವರು ಗುಜರಾತಿನಲ್ಲಿ ನಡೆದಿರುವುದು ಅಪಮಾನಕಾರಿ ಎಂದು ಘೋಷಿಸಿದರು. ಭೇಟಿಯ ಕೊನೆಯಲ್ಲಿ, ವಾಜಪೇಯಿಯವರು 'ಮೋದಿ' ಮುಖ್ಯಮಂತ್ರಿಯಾಗಿ ಮುಂದುವರೆಯುತ್ತಾರೆ ಎಂದು ಸ್ಪಷ್ಟಪಡಿಸಿದರು ಮತ್ತು ಕೊನೆಗೆ 'ರಾಜಧರ್ಮ'ವನ್ನು ಪಾಲಿಸಿ ಎಂದು ಮೃದುವಾಗಿ ಹೇಳಲು ತಯಾರಾದರು. ಪರಿಹಾರ ಶಿಬಿರಗಳಲ್ಲಿ ಅತ್ಯಂತ ಅಸಹನೀಯವಾಗಿ ಬದುಕುತ್ತಿರುವ ಮುಸ್ಲಿಂ ಅಲ್ಪಸಂಖ್ಯಾತರಿಗೆ ಮೋದಿ ಕುರಿತ ಪ್ರಧಾನಮಂತ್ರಿಯವರ ನಿಲುವುಗಳು ಕ್ರೂರ ವ್ಯಂಗ್ಯದಂತೆ ಕಂಡಿರಲೇಬೇಕು.

ಗುಜರಾತಿನಿಂದ ಅಲ್ಪಸಂಖ್ಯಾತರನ್ನು ಸಾಮೂಹಿಕವಾಗಿ ನಿರ್ನಾಮ ಮಾಡಬೇಕೆಂಬ ಫ್ಯಾಸಿಸ್ಟ್ ಸಿದ್ಧಾಂತವನ್ನು ಕಳೆದ ಕೆಲವು ವಾರಗಳಿಂದ ಎತ್ತಿಹಿಡಿಯುವಲ್ಲಿ ನಿರತನಾಗಿದ್ದ ವ್ಯಕ್ತಿಗೆ 'ರಾಜಧರ್ಮ' ದ ತತ್ವಗನ್ನು ಪಾಲಿಸಲು ಹೇಳಿದರು. ಸ್ವಾತಂತ್ರ್ಯ ಭಾರತದಲ್ಲಿ ಬೇರೆ ಯಾವುದೇ ಮುಖ್ಯಮಂತ್ರಿ ಸಾವು-ನೋವಿಗೆ ಸಿಕ್ಕ ಸಂತ್ರಸ್ತರಿಗೆ ಧರ್ಮದ ಆಧಾರದಲ್ಲಿ ಎರಡು ರೀತಿಯಲ್ಲಿ ಪರಿಹಾರ ನೀಡುವ ಕ್ರಮಗಳನ್ನು ಕೈಗೊಂಡಿರಲಿಲ್ಲ. ಮುಂದುವರೆದು, ಈ ಆರ್‌ಎಸ್‌ಎಸ್‌ನ ಈ ಪ್ರಚಾರಕ ಹಿಂದುತ್ವ ಶಕ್ತಿಗಳ ಹಿತಗಳನ್ನು ಕಾಪಾಡುವ ಹಂತಕ್ಕೆ ರಾಜ್ಯಯಂತ್ರನವನ್ನು ಬುಡಮೇಲು ಮಾಡುವ ಕ್ರಮ ಕೈಗೊಂಡರು. ಗುಜರಾತಿನ ಹಿಂಸಾಚಾರ ಭುಗಿಲೆದ್ದ ದಿನದಿಂದ 27 ಪೊಲೀಸ್ ಅಧಿಕಾರಿಗಳನ್ನು ವರ್ಗಾಯಿಸಲಾಗಿದೆ, ಇದಕ್ಕೆ ಕಾರಣ ಅವರು ನಿಷ್ಕ್ರಿಯರಾಗಿದ್ದದ್ದೋ ಅಥವಾ ಕರ್ತವ್ಯದಿಂದ ವಿಮುಖರಾಗಿದ್ದುದ್ದಲ್ಲ ಬದಲಾಗಿ ಹಿಂಸಾಚಾರವನ್ನು ನಿಯಂತ್ರಿಸುವಲ್ಲಿ ತಮ್ಮ ಕನಿಷ್ಟ ಜವಾಬ್ದಾರಿಯನ್ನು ನಿರ್ವಹಿಸಿದ್ದು. ತಮ್ಮ ಕರ್ತವ್ಯ ನಿರ್ವಹಿಸುತ್ತಿದ್ದ ನಾಲ್ಕು ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿದ್ದಕ್ಕೆ ಸರ್ಕಾರದ ವಿಧೇಯರಾಗಿದ್ದ ಪೋಲೀಸ್ ಮಹಾನಿರ್ದೇಶಕ ಕೂಡ ಪ್ರತಿಭಟಿಸಿದ್ದಾರೆ. ವಾಜಪೇಯಿ ಭೇಟಿಯ ತಕ್ಷಣವೇ ಗುಜರಾತಿನಲ್ಲಿ ನಡೆಯುತ್ತಿರುವ ಹತ್ಯಾಕಾಂಡಗಳು ನಿಂತಿಲ್ಲ ಎಂದು ದೇಶಕ್ಕೆ ಮನವರಿಕೆಯಾಯಿತು. ಅಹಮದಾಬಾದ್ ಮತ್ತು ವಡೋದರ ಇತರೆಡೆಗಳಲ್ಲಿ ಮುಂದುವರಿಯುತ್ತಿರುವ ಹಿಂಸಾಚಾರದ ಜೊತೆಯಲ್ಲೇ ಅಬಸಾನ ಎಂಬ ಹಳ್ಳಿಯಲ್ಲಿ ಎರಡು ಮುಸ್ಲಿಂ ಕುಟುಂಬಗಳನ್ನು ಜೀವಂತವಾಗಿ ಸುಡಲಾಯಿತು.

ಮತ್ತೊಂದು ಅಘಾತಕಾರಿ ಘಟನೆಯೆಂದರೆ ಸಬರಮತಿಯ ಗಾಂಧಿ ಆಶ್ರಮದಲ್ಲಿ ನಡೆಯುತ್ತಿದ್ದ ಶಾಂತಿ ಸಭೆಯ ಮೇಲೆ ಬಿಜೆಪಿ-ಆರ್‌ಎಸ್‌ಎಸ್ ಗುಂಪಿನ ಧಾಳಿ. ಮಾಧ್ಯಮಗಳಲ್ಲಿ ದೇಶಾದ್ಯಂತ ಕಾರ್ಯಕ್ರಮವನ್ನು ವರದಿ ಮಾಡುತ್ತಿದ್ದ ಮಾಧ್ಯಮ ಪ್ರತಿನಿಧಿಗಳನ್ನು ಪೊಲೀಸರು ಹೊಡೆಯುತ್ತಿದ್ದದ್ದು ಗುಜರಾತಿನಲ್ಲಿ ವಾಸ್ತವವಾಗಿ ಏನು ನಡೆಯುತ್ತಿದೆ ಎಂಬುದರ ಸ್ಪಷ್ಟ ಸಂದೇಶವಾಗಿದೆ. ಪೋಲೀಸರು ಅಲ್ಲಿರುವುದೇ ದಾಳಿ ನಡೆಸುತ್ತಿರುವ ವಿಹೆಚ್‌ಪಿ-ಆರ್‌ಎಸ್‌ಎಸ್ ಪಡೆಯನ್ನು ರಕ್ಷಿಸುವುದಕ್ಕಾಗಿ ಮತ್ತು ಯಾರಾದರೂ ಅವರನ್ನು ಬಯಲಿಗೆಳೆಯಲು ಪ್ರಯತ್ನಿಸಿದರೆ ಅವರು ಪೋಲೀಸರ ದಾಳಿಗೆ ಗುರಿಯಾಗುತ್ತಾರೆ. ರಾಷ್ಟ್ರೀಯ ಮಾನವ ಹಕ್ಕು ಆಯೋಗಕ್ಕೆ ನೀಡಿದ ರಾಜ್ಯದ ಅಧಿಕೃತ ವರದಿಯಂತೆ ಪೋಲೀಸ್ ಗೋಲಿಬಾರಿನಲ್ಲಿ 137 ಜನರು ಸತ್ತಿದ್ದಾರೆ, ಅರ್ಧಕ್ಕೂ ಹೆಚ್ಚಿನವರು ಮುಸ್ಲಿಮರು. ಗೋದ್ರಾ ಘಟನೆಯ ನಂತರ ರಾಜ್ಯಾದ್ಯಂತ ಮುಸಲ್ಮಾನರೇ ದಾಳಿಗಳಿಗೆ ಗುರಿಯಾಗಿದ್ದಾರೆ ಮತ್ತು ಪೋಲೀಸ್ ಗೋಲಿಬಾರ್‌ಗೂ ಕೂಡ ಅವರೇ ಗರಿಯಾಗಿದ್ದಾರೆ.




'ನೀವು ಅತ್ತ ಹಾಗೆ ಮಾಡಿ, ನಾನು ನಕ್ಕ ಹಾಗೆ ಮಾಡುತ್ತೇನೆ' ಅನ್ನುವ ನಾಟಕದಲ್ಲಿ ಎಷ್ಟು ನೈಜವಾಗಿ ಅಭಿನಯಿಸಿದ್ದೀರಿ. ದೆಹಲಿಯಲ್ಲಿ ಬಿಜೆಪಿ... ಎನ್‌ಡಿಎ ಗ್ರೂಪಿನಲ್ಲಿ ಟ್ರೈನಿಂಗ್ ತೆಗೆದುಕೊಂಡಿರಬೇಕು..

ಗುಜರಾತಿನ ಘೋರ ಹಿಂಸಾಚಾರದಿಂದ ಪರಿಣಾಮಕ್ಕೊಳಗಾಗದ ಭಾರತದ ಸಮಾಜದ ಯಾವ ವಿಭಾಗವೂ ಇಲ್ಲ. ಉದ್ರೇಕ ಮತ್ತು ಹೇಯತನವು ನಾಗರಿಕರ ಸಾಮಾನ್ಯ ಭಾವನೆಯಾಗಿದೆ. ಕೇವಲ ಆರ್‌ಎಸ್‌ಎಸ್ ಮತ್ತು ಬಿಜೆಪಿ ನಾಯಕರು ಮಾತ್ರವೇ ಈ ಭಾವನೆಗಳಿಂದ ಅಭಾದಿತರಾಗಿರುವುದು.

ಆರ್‌ಎಸ್‌ಎಸ್‌ನ ಅಣತಿಯ ಮೇರೆಗೆ ಬಿಜೆಪಿ ಅಧ್ಯಕ್ಷರು ನಿರಂತರವಾಗಿ ನರೇಂದ್ರ ಮೋದಿಯವರನ್ನು ಮತ್ತು ರಾಜ್ಯ ಆಡಳಿತವನ್ನು ರಕ್ಷಿಸಲು ಪ್ರಯತ್ನಿಸುತ್ತಿದ್ದಾರೆ. ಎನ್‌ಡಿಎನಲ್ಲಿರುವ ಅವಕಾಶವಾದಿ ಮಿತ್ರಪಕ್ಷಗಳು ಕೂಡ ಇಂತಹ ಕೃತ್ಯಗಳನ್ನು ಸಹಿಸಲು ಕಷ್ಟಪಡುತ್ತಿವೆ. ನರೇಂದ್ರಮೋದಿ ತೊಲಗಬೇಕು ಎಂದು ಹೇಳಿಕೆಯಿತ್ತ ನಂತರ ಸಮತಾ ಪಕ್ಷವು ತನ್ನ ಪ್ರಧಾನ ಕಾರ್ಯದರ್ಶಿ ಶಂಬು ಶ್ರೀವಾಸ್ತವರನ್ನು ಕಳಕೊಂಡಿದೆ. ಅತ್ಯಂತ ವಿನಮ್ರ ಸೇವಕ ಜಾರ್ಜ್ ಫರ್ನಾಂಡಿಸ್‌ರವರು ಬಿಜೆಪಿಯ ರಕ್ಷಣೆಗೆ ಕಟಿಬದ್ಧರಾಗಿದ್ದಾರೆ. ಆದರ ಮಿತ್ರಪಕ್ಷಗಳು ಸಾಮಾನ್ಯವಾಗಿ ಬಿಜೆಪಿಯನ್ನು ಖಂಡಿಸುತ್ತಿವೆ.

ಬಿಜೆಪಿಯನ್ನು ಬೆಂಬಲಿಸುತ್ತಿದ್ದ ದೊಡ್ಡ ಬಂಡವಾಳದಾರರ ಒಂದು ಗುಂಪು ಕೂಡಾ ಗುಜರಾತ್ ಹಿಂಸಾಚಾರದ ವಿರುದ್ಧ ಮಾತನಾಡಿದೆ. ಹೆಚ್‌ಡಿಎಫ್‌ಸಿ ಅಧ್ಯಕ್ಷ ದೀಪಕ್ ಪಾರೇಖ್‌ರ ಹೇಳಿಕೆ ಇದರಲ್ಲಿ ಮುಖ್ಯವಾದುದು.

ಕೇವಲ ನರೇಂದ್ರ ಮೋದಿಯನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸುವುದರಿಂದ ಎಲ್ಲವನ್ನು ಸಾಧಿಸಲು ಸಾಧ್ಯವಿಲ್ಲ. ಈ ಹತ್ಯಾಕಾಂಡಕ್ಕೆ ಕಾರಣರಾದ ತಪ್ಪಿತಸ್ತರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಲು, ತನಿಖೆ ಕೈಗೊಳ್ಳಲು, ಕೇಸುಗಳನ್ನು ದಾಖಲಿಸಲು ಮತ್ತು ಶೀಘ್ರ ತನಿಖೆ ನಡೆಸಲು ನರೇಂದ್ರಮೋದಿ ಅಧಿಕಾರದಲ್ಲುಳಿದರೆ ಸಾಧ್ಯವಿಲ್ಲ. ಅಧಿಕಾರವನ್ನು ದುರುಪಯೋಗಪಡಿಸಿಕೊಂಡ ಅಧಿಕಾರಿಗಳನ್ನು ಶಿಕ್ಷಿಸಿದರೆ ಅವರು ಆ ರೀತಿ ದುರುಪಯೋಗಪಡಿಸಿಕೊಳ್ಳಲು ನಿರ್ದೇಶನ ಕೊಟ್ಟ ನರೇಂದ್ರಮೋದಿ ಮೊದಲು ತೊಲಗಬೇಕು. ಕೇವಲ ರಾಜಕೀಯ ಲಾಭಕ್ಕೆ ನರೇಂದ್ರ ಮೋದಿಯನ್ನು ಕೆಳಗಿಳಿಸಲು ಜನರು ಒತ್ತಾಯಿಸುತ್ತಿದ್ದಾರೆ ಎಂದು ಬಿಜೆಪಿ ಮತ್ತು ಆರ್‌ಎಸ್‌ಎಸ್ ಬಾಸ್‌ಗಳೇನಾದರೂ ಭಾವಿಸಿದರೆ ಅದು ತಪ್ಪಾಗುತ್ತದೆ. ಗುಜರಾತಿನಲ್ಲಿ ನಡೆದ ಘಟನೆಗಳು ಭಾರತಕ್ಕೆ ಮತ್ತು ಅದರ ಪ್ರಜಾಪ್ರಭುತ್ವ ಗುಣಗಳಿಗೆ ದ್ವೇಷಮಯವಾದವು ಎಂಬುದನ್ನು ಭಾರತದ ಪ್ರತಿಯೊಬ್ಬ ನಾಗರೀಕನು ಅರ್ಥ ಮಾಡಿಕೊಳ್ಳುವಷ್ಟು ಪ್ರಜ್ಞಾವಂತನಾಗಿದ್ದಾನೆ. ಬಿಜೆಪಿ ಇದನ್ನು ನಿರಾಕರಿಸಿದರೆ ಜನತೆಯಿಂದ ಕ್ರೂರ ಶಿಕ್ಷೆಗೊಳಗಾಗುತ್ತದೆ ಮತ್ತು ಎನ್‌ಡಿಎ ಯ ಮಿತ್ರರೂ ಕೂಡ ಇದಕ್ಕೆ ಭಾರಿ ಬೆಲೆ ತೆರಬೇಕಾಗುತ್ತದೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ○

## ಏಪ್ರಿಲ್ 17: ಗುಜರಾತ್ ಹತ್ಯಾಕಾಂಡ ವಿರೋಧಿಸಿ 'ಪೀಪಲ್ಸ್ ಫ್ರಂಟ್'ದ ಪ್ರತಿಭಟನೆ

ಗೋದ್ರಾದಲ್ಲಿ ಸಬರಮತಿ ಎಕ್ಸ್‌ಪ್ರೆಸ್ ಮೇಲಿನ ದುಷ್ಕರ್ಮಿಗಳ ಹೀನ ಹಲ್ಲೆಯ ನಂತರ ಸುಮಾರು ಒಂದು ತಿಂಗಳಿಗೂ ಹೆಚ್ಚು ಕಾಲದ ಅನಾಗರೀಕ ಹಿಂಸಾಚಾರ, ಮುಸ್ಲಿಂ ಅಲ್ಪಸಂಖ್ಯಾತರ ಮೇಲಿನ ಬರ್ಬರ ಧಾಳಿಯಿಂದ ಗುಜರಾತ್ ತತ್ತರಿಸಿದೆ.

ಇಂತಹ ಕೋಮು ಗಲಭೆಯ ಸಂದರ್ಭವನ್ನು ನಿರ್ವಹಿಸಿದ ವಿಧಾನದಿಂದ ನರೇಂದ್ರಮೋದಿ ನೇತೃತ್ವದ ಬಿಜೆಪಿ ಸರ್ಕಾರ ಕುಖ್ಯಾತಿ ಗಳಿಸಿದೆ. ಗಲಭೆಕೋರ ಗುಂಪುಗಳ ಧಿಕ್ಕಾರದಲ್ಲಿ ದೃಢವಾದ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಬದಲಾಗಿ ಅತ್ಯಂತ ಆಘಾತಕರ ರೀತಿಯಲ್ಲಿ ಇಡೀ ರಾಜ್ಯದ ಸರ್ಕಾರಿ ಯಂತ್ರವೇ ಗಲಭೆಕೋರರೊಂದಿಗೆ ಕೈಜೋಡಿಸಿದೆ. ಇಂತಹ ವಿಷಮ ಪರಿಸ್ಥಿತಿಯನ್ನು ತಿಳಿಗೊಳಿಸಬೇಕಾದರೆ ಆಡಳಿತ ಯಂತ್ರದ ಮೇಲೆ ಸ್ವಲ್ಪವಾದರೂ ವಿಶ್ವಾಸ ಮೂಡಬೇಕಾದರೆ ಮುಖ್ಯಮಂತ್ರಿ ಪದವಿಯಿಂದ ನರೇಂದ್ರಮೋದಿಯನ್ನು ಈ ಕೂಡಲೇ ವಜಾ ಮಾಡಬೇಕಾಗಿದೆ. ಇದಕ್ಕಿಂತ ಕಡಿಮೆಯಾದ ಯಾವ ಕ್ರಮವೂ ಗುಜರಾತಿನಲ್ಲಿ ಕಾನೂನಿನ ಆಡಳಿತವನ್ನು ಖಾತ್ರಿಪಡಿಸುವುದಿಲ್ಲ.



ನರೇಂದ್ರ ಮೋದಿಯನ್ನು ಮುಖ್ಯಮಂತ್ರಿ ಸ್ಥಾನದಿಂದ ವಜಾ ಮಾಡಬೇಕು. ಮುಂದುವರಿಯುತ್ತಿರುವ ಗಲಭೆಯನ್ನು ಹತ್ತಿಕ್ಕಲು ದೃಢವಾದ ಕ್ರಮ ಕೈಗೊಳ್ಳಬೇಕು. ದುಷ್ಕರ್ಮಿಗಳ ವಿರುದ್ಧ ಬಿಗಿ ಕ್ರಮ ಕೈಗೊಂಡು, ಸಂತ್ರಸ್ತರಿಗೆ ನ್ಯಾಯ ಒದಗಿಸಬೇಕು. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ತನಿಖೆ ಹಾಗೂ ಆರೋಪಿಗಳ ವಿಚಾರಣೆ ಕುರಿತು ಮಾಡಿರುವ ಶಿಫಾರಸ್ಸುಗಳನ್ನು ಕೇಂದ್ರ ಸರ್ಕಾರ ಜಾರಿಗೊಳಿಸುವಂತೆ ಕ್ರಮವಹಿಸಬೇಕು. ಈ ಪ್ರಮುಖ ಬೇಡಿಕೆಗಳ ಆಧಾರದಲ್ಲಿ ಏಪ್ರಿಲ್ 17, 2002 ರಂದು ಜನತಾರಂಗವು ರಾಷ್ಟ್ರವ್ಯಾಪಿ ಪ್ರತಿಭಟಿಸಬೇಕೆಂದು, ಬೃಹತ್ ಪ್ರಮಾಣದಲ್ಲಿ ಜನರನ್ನು ಅಣಿನೆರಸಬೇಕೆಂದು ತೀರ್ಮಾನಿಸಿದೆ.

17 ರಂದು ದೆಹಲಿಯ ಜಂತರ್ ಮಂತರ್ ಬಳಿಯಲ್ಲಿ ಬೃಹತ್ ಪ್ರದರ್ಶನವನ್ನು ಸಂಘಟಿಸಲಾಗುವುದು. ಉಳಿದ ಎಲ್ಲಾ ರಾಜ್ಯಗಳಲ್ಲಿ, ಪ್ರಮುಖ ಕೇಂದ್ರಗಳಲ್ಲಿ ಪ್ರತಿಭಟನಾ ರ್ಯಾಲಿ, ಮೆರವಣಿಗೆ ನಡೆಸಲಾಗುವುದು. ಪ್ರಜಾಪ್ರಭುತ್ವ ಮತ್ತು ಜಾತ್ಯತೀತ ಮೌಲ್ಯಗಳ ಬಗೆಗೆ ಕಾಳಜಿಯುಳ್ಳ ಎಲ್ಲಾ ನಾಗರಿಕರು ಈ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಬೇಕೆಂದು ಪೀಪಲ್ಸ್ ಫ್ರಂಟ್ ಕರೆನೀಡಿದೆ. ಎಲ್ಲಾ ಅಂಗ ಪಕ್ಷಗಳು ಸಹ ತಯಾರಿ ನಡೆಸಿವೆ.

# 'ಸ್ವಚ್ಛತಾ ಗ್ರಾಮ ಯೋಜನೆ'

**ಇಂದು ನಮ್ಮ ಗ್ರಾಮಗಳ ಪರಿಸ್ಥಿತಿ ತೀರ ಶೋಚನೀಯವಾಗಿದೆ. ಕುಡಿಯುವ ನೀರಿಲ್ಲ, ರಸ್ತೆಗಳಿಲ್ಲ, ಶೌಚಾಲಯಗಳಿಲ್ಲ. ಇದು ಬಹುತೇಕ ಗ್ರಾಮಗಳ ಸ್ಥಿತಿ. ಇದರೊಂದಿಗೆ ಅವರ ಅನಕ್ಷರತೆಯೂ ಇದಕ್ಕೆ ಸಾಕಷ್ಟು ಕೊಡುಗೆ ನೀಡಿದೆ. ಈ ಬಗ್ಗೆ ಎಚ್ಚರವಹಿಸಬೇಕಿದ್ದ ನಮ್ಮ ಸರ್ಕಾರಗಳು ರೈತ-ಕೂಲಿಕಾರರ ವಿರೋಧಿ ನೀತಿಗಳಿಗೆ ತಲೆಬಾಗಿ ಅವರನ್ನು ಕತ್ತಲ ಕೂಪಕ್ಕೆ ತಳ್ಳಿವೆ. ಬಡವರ ಉದ್ಧಾರ ಮಾಡುತ್ತಿದ್ದೇವೆ ಎಂಬ ಹೇಳಿಕೆಗಳೊಂದಿಗೆ ಪ್ರಕಟವಾಗುವ ಹಲವಾರು ಯೋಜನೆಗಳು ನಿಜಕ್ಕೂ ಅರ್ಹರಾದ ಫಲಾನುಭವಿಗಳಿಗೆ ದಕ್ಕದೆ, ಭ್ರಷ್ಟ ಅಧಿಕಾರಿಗಳು ಮತ್ತು ಸ್ಥಳೀಯ ಪುಡಾರಿಗಳಿಗೆ 'ದುಡ್ಡು ಮಾಡುವ ದಂಧೆ'ಯಾಗಿದೆ. ಅಂತಹದೊಂದು ಯೋಜನೆಯೇ 'ಸ್ವಚ್ಛತಾ ಗ್ರಾಮ ಯೋಜನೆ'**

**ಚಂದ್ರಪ್ಪ ಹೊಸ್ಕೆರಾ - ರಾಮು.ಎಂ**

1995 ರಲ್ಲಿ ಜನತಾದಳದ ದೇವೇಗೌಡರ ಸರ್ಕಾರವು 'ನಿರ್ಮಲ ಗ್ರಾಮ ಯೋಜನೆ'ಯನ್ನು 2000 ಇಸ್ವಿಯ ಅಂತ್ಯದೊಳಗೆ ಶೇ 30 ಗ್ರಾಮೀಣ ಕುಟುಂಬಗಳನ್ನು ಈ ಯೋಜನೆಯಡಿಯಲ್ಲಿ ಒಳಗೊಳ್ಳಲು ಜಾರಿಗೆ ತಂದಿತು. ಶೇ 14 ಕ್ಕೂ ಕಡಿಮೆ ಶೌಚಾಲಯ ವ್ಯವಸ್ಥೆ ಇರುವ ನಮ್ಮ ಗ್ರಾಮಗಳಿಗೆ ಶೌಚಾಲಯ, ಒಳಚರಂಡಿ, ರಸ್ತೆ, ಕುಡಿಯುವ ನೀರು ಇನ್ನಿತರ ಮೂಲಭೂತ ಸೌಕರ್ಯಗಳನ್ನು ಒದಗಿಸಲು 'ನಿರ್ಮಲ ಗ್ರಾಮ ಯೋಜನೆ'ಯ ಭಾಗವಾಗಿ ಪಂಚಸೂತ್ರಗಳಿಗನು ಸಾರವಾಗಿ 'ಸ್ವಚ್ಛತಾ ಗ್ರಾಮ'ಯೋಜನೆಯನ್ನು ಅನುಷ್ಠಾನಕ್ಕೆ ತಂದಿದೆ. ಅದರ ಪ್ರಕಾರ

- ಗ್ರಾಮದಲ್ಲಿ ಒಳರಸ್ತೆ ಮತ್ತು ಬೀದಿ ದೀಪ ಉತ್ತಮ ಪಡಿಸುವುದು.
- ಕೊಳೆ ಮತ್ತು ಮಳೆ ನೀರಿನ ವಿಲೇವಾರಿಗಾಗಿ ಚರಂಡಿ ನಿರ್ಮಾಣ
- ಸಾಮೂಹಿಕ ಮಿಶ್ರಗೊಬ್ಬರದ ಅಂಗಳವನ್ನು (ಕಮ್ಯುನಿಟಿ ಕಾಂಪೋಸ್ಟ್) ಒದಗಿಸಿ, ಗ್ರಾಮದ ವಾಸಸ್ಥಳದಿಂದ ತಿಪ್ಪೆಗುಂಡಿಗಳನ್ನು ಸ್ಥಳಾಂತರಿಸುವುದು
- ಗ್ರಾಮದ ಎಲ್ಲಾ ಮನೆಗಳಿಗೂ ಹೊಗೆರಹಿತ ಒಲೆಗಳನ್ನು ಒದಗಿಸುವುದು
- ಗ್ರಾಮದ ಎಲ್ಲಾ ಜನತೆಗಾಗಿ ಕೌಟುಂಬಿಕ ಶೌಚಾಲಯಗಳು, ಸಾಮೂಹಿಕ ಶೌಚಾಲಯಗಳು, ಶಾಲಾ ಶೌಚಾಲಯಗಳ ನಿರ್ಮಾಣ.

**ಗ್ರಾಮಸ್ಥರಿಂದ ಹಣ ವಸೂಲಿ**

ಈ ಯೋಜನೆಗೆ ಸರ್ಕಾರ 200 ಕೋಟಿ ರೂ.ಗಳ ಅನುದಾನವಲ್ಲದೆ 'ಹುಡ್ಕೋ' ದಿಂದ 1,600 ಕೋಟಿ ರೂ. ಸಾಲ ಮತ್ತು ಸಮುದಾಯದ ವಂತಿಗೆಯಿಂದ 200 ಕೋಟಿ ರೂ. ಗಳ ನೆರವು ಪಡೆದಿದೆ. ಇದು ಸಾಲದೆಂಬಂತೆ ಒಂದು ಗ್ರಾಮ

ಈ ಯೋಜನೆಯ ಅಡಿಯಲ್ಲಿ ಬರಬೇಕಾದರೆ ಗ್ರಾಮದ ನೈರ್ಮಲ್ಯೀಕರಣಕ್ಕೆ ತಗಲುವ ವೆಚ್ಚದ ಶೇ 10 ರಷ್ಟನ್ನು ಗ್ರಾಮಸ್ಥರೇ ನೀಡಬೇಕೆಂದು, ಜಿಲ್ಲಾ ಪಂಚಾಯತ್ ಅದನ್ನು ಸಂಗ್ರಹಿಸಿ 'ಸ್ವಚ್ಛತಾ ಗ್ರಾಮ'ಯೋಜನೆಗಾಗಿ ಅರ್ಜಿ ಸಲ್ಲಿಸಬೇಕು ಮತ್ತು ಯೋಜನೆ ಪೂರ್ಣಗೊಂಡ ನಂತರ ಸರ್ಕಾರ ಒದಗಿಸಿದ ಸೌಲಭ್ಯಗಳ ನಿರ್ವಹಣೆಯನ್ನು ಗ್ರಾಮಸ್ಥರೇ ವಹಿಸಿಕೊಳ್ಳಬೇಕೆಂದು ಸರ್ಕಾರ ಹೇಳುತ್ತದೆ. ಈ ನಿರ್ವಹಣೆಯ ವೆಚ್ಚವನ್ನು ಕರ ವಸೂಲಿಯ ಮೂಲಕ ಸರಿದೂಗಿಸಿಕೊಳ್ಳಬೇಕೆಂದು ಸೂಚಿಸಿದೆ. ಇದು ನಿಜಕ್ಕೂ ಕಷ್ಟಸಾಧ್ಯವಾದ ಮಾತು. ಒಂದೊತ್ತಿನ ಊಟಕ್ಕೂ ಪರಿಪಾಟಲು ಬೀಳುತ್ತಿರುವ ಬಡ ರೈತ-ಕೂಲಿಕಾರರ ಮೇಲೆ ಈ ಹೊರೆಯನ್ನು ಹಾಕಬೇಕೆ? ದುಡ್ಡು ಕೊಟ್ಟರೂ ಅದರ ಫಲ ಅವನಿಗೆ ದಕ್ಕುವುದೇ? ಎಲ್ಲವನ್ನೂ ನುಂಗಿ ನೀರು ಕುಡಿಯುವ ಭ್ರಷ್ಟರೇ ತುಂಬಿರುವಾಗ ರೈತ-ಕೂಲಿಕಾರರಿಗೇನು ದಕ್ಕೀತು? ಇದರಲ್ಲಿ ಸರ್ಕಾರದ ಜವಾಬ್ದಾರಿ ಏನು?

ಸ್ವಚ್ಛತಾ ಗ್ರಾಮದ ಮೂಲ ಉದ್ದೇಶವನ್ನು ತಿಳಿಸದೇ ಊರಿನ ಗಣ್ಯ ವ್ಯಕ್ತಿಗಳು, ಅಧಿಕಾರಿಗಳು ಸೇರಿ ಹಣವನ್ನು ಜನತೆಯಿಂದ ಭರಿಸದೆ, ದೇವಸ್ಥಾನ, ಕಂಟ್ರಾಕ್ಟರ್ ಗಳಿಂದ ಭರಿಸಿ ಹಣ ಲೂಟಿ ಮಾಡುವುದ'ಲ್ಲದೆ ಯಾರು ಹಣ ನೀಡುತ್ತಾರೋ ಅಂತಹ ವ್ಯಕ್ತಿಗಳಿಗೆ ಕಂಟ್ರಾಕ್ಟರ್ ನೀಡುತ್ತಿದ್ದಾರೆ. ಇದರಿಂದ ಕಳಪೆ ಕಾಮಗಾರಿ ನಡೆಯುವಂತಾಗಿದೆ.



ಶಾಸಕ ಶ್ರೀರಂಗದೇವರಾಜಲು

**ಸ್ವಚ್ಛ ಗ್ರಾಮ ಸಮಿತಿ ಕೇವಲ ಬೂಟಾಟಿಕೆ**

ಗ್ರಾಮದ ಸಂಪೂರ್ಣ ನೈರ್ಮಲ್ಯೀ ಕರಣಕ್ಕಾಗಿ, ಯೋಜನೆಯ ಕಾಮಗಾರಿಗಳನ್ನು ಸಕಾಲದಲ್ಲಿ, ಸುವ್ಯವಸ್ಥಿತವಾಗಿ ಅನುಷ್ಠಾನ ಗೊಳಿಸಲು ಮತ್ತು ಗುಣಮಟ್ಟ ಉತ್ತಮ ವಾಗಿರುವಂತೆ ನೋಡಿಕೊಳ್ಳಲು 'ಗ್ರಾಮಸಮಿತಿ' ರಚಿಸಬೇಕು, ಅದರಲ್ಲಿ ಗ್ರಾಮಪಂಚಾಯತ್ ಅಧ್ಯಕ್ಷರು ಈ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಗ್ರಾ.ಪಂ.. ಕಾರ್ಯದರ್ಶಿಗಳು ಸಮಿತಿಯ ಕಾರ್ಯದರ್ಶಿಗಳಾಗಿರುತ್ತಾರೆ. ಇವರಲ್ಲದೆ ತಾ.ಪಂ. ಕಾರ್ಯನಿರ್ವಹಣಾ ಧಿಕಾರಿಗಳು, ಭೂಸೇನಾ ನಿಗಮ ಅಧಿಕಾರಿಗಳು, ಅಂಗನವಾಡಿ ಶಿಕ್ಷಕಿ, ಶಾಲಾ ಶಿಕ್ಷಕ ಮತ್ತು ಗ್ರಾಮಸ್ಥರು ಸದಸ್ಯರಾಗಿರಬೇಕೆಂದು ಸರಕಾರ ಸೂಚಿಸಿದೆ. ಆದರೆ ಇದಕ್ಕೆ ಅರ್ಹರಾದವರು ಸದಸ್ಯರಾಗದೆ ಭ್ರಷ್ಟಾತಿಭ್ರಷ್ಟರೆಲ್ಲಾ ಸೇರಿ 'ಸಮಿತಿ' ರಚಿಸಿಕೊಂಡು ಖರ್ಚಾಗುವ ಹಣಕ್ಕೆ ದುಪ್ಪಟ್ಟು ಲೆಕ್ಕ ತೋರಿಸಿ ಲೂಟಿ ಹೊಡೆದು ಹಂಚಿಕೊಳ್ಳುವ 'ಸಮಾನ ಮನಸ್ಕರ ಸಮಿತಿ'ಯಾಗಿ ಪರಿವರ್ತನೆಗೊಂಡಿದೆ.

'ಸ್ವಚ್ಛ ಗ್ರಾಮ' ಯೋಜನೆ ಶ್ರೀಮಂತ ರೈತರಿಗೆ, ಕಂಟ್ರಾಕ್ಟರುಗಳಿಗೆ, ಸ್ಥಳೀಯ ಪುಡಾರಿಗಳಿಗೆ, ಭ್ರಷ್ಟ ಅಧಿಕಾರಿಗಳಿಗೆ ವರದಾನವಾಗಿ ಪರಿಣಮಿಸಿದೆ. ಇವರು ಸರಕಾರ ಸೂಚಿಸಿದ ಶರತ್ತುಗಳು, 'ಗ್ರಾಮ ಸಮಿತಿ ರಚನೆ' ಇವುಗಳನ್ನೆಲ್ಲಾ ಗಾಳಿಗೆ ತೂರಿ ತಮಗೆ 'ಮಾಮೂಲು' ಎಲ್ಲಿ ಗಿಟ್ಟುತ್ತದೋ ಅಲ್ಲಿಗೆ ಈ ಯೋಜನೆಯನ್ನು ಸೀಮಿತಗೊಳಿಸಿದ್ದಾರೆ. ಈ ಯೋಜನೆಯ ಬಗ್ಗೆ ಒಂದಿಷ್ಟೂ ಅರಿವಿರದ ಬಡ

## 'ಸಿಂಗನಾಳ' ಎಂಬ ವರ್ಗ ಸಂಘರ್ಷದ ಒ

ಸಿಂಗನಾಳ ಎಂಬ ಊರು ಗಂಗಾವತಿ ತಾಲೂಕಿನ ರಾಜಕೀಯದ ಮುಖ್ಯ ಕೇಂದ್ರಗಳಲ್ಲೊಂದು. ನೂರಾರು ಎಕರೆ ನೀರಾವರಿ ಭೂಮಿಯ ಒಡೆತನ ಹೊಂದಿದ ಹಲವಾರು ಧಣಿಗಳು ಕೃಷಿಯ ಜೊತೆಗೆ ದಲಾಲಿ, ರಸಗೊಬ್ಬರ ಮೊದಲಾದ ವ್ಯಾಪಾರ, ಬಡ್ಡಿ ವ್ಯವಹಾರ ಮೊದಲಾದವುಗಳನ್ನು ನಡೆಸುತ್ತಾ ಸೊಕ್ಕಿದವರು. 'ತಾವು ಆಡಿದ್ದೇ ಆಟ, ಮಾಡಿದ್ದೇ ನಿಯಮ' ಎಂಬ ಇವರ ಮುಂದೆ ಸರ್ಕಾರದ ಎಲ್ಲಾ ನಿಯಮಗಳು ಗಾಳಿಪಾಲು.

ಇಂತಹ ಊರಿನಲ್ಲಿ ಕೂಲಿಕಾರ ಸಂಘ ಹುಟ್ಟಿದ್ದೇ ತಡ ಈ ಸಾಹುಕಾರರುಗಳಿಗೆ ತಲೆನೋವಾಗತೊಡಗಿತು. ಈ ಸಾಹುಕಾರರು ಸರ್ಕಾರಿ ಭೂಮಿಗಳನ್ನು ಆಕ್ರಮಿಸಿ ಬೃಹತ್ ಮನೆಗಳನ್ನು ನಿರ್ಮಿಸಿಕೊಂಡದ್ದು, ಅಥವಾ ತಿಪ್ಪೆಗಳನ್ನು ಮಾಡಿಕೊಂಡದ್ದು, ಭೂಸುಧಾರಣಾ ಕಾನೂನಿನ ಪ್ರಕಾರ 80 ರ ದಶಕದ ಮೊದಲ ವರ್ಷಗಳಲ್ಲಿ ದಲಿತ ಕೂಲಿಕಾರರಿಗೆ ನೀಡಿದ ಭೂಮಿಯನ್ನು ಆಕ್ರಮಿಸಿ ಅದರೊಳಕ್ಕೆ ಭೂಮಿಯ ಪಟ್ಟಾದಾರನಿಗೆ ಹೆಜ್ಜೆಯಿಡಲೂ ಬಿಡದೆ ಇದ್ದದ್ದು, ದೇವಸ್ಥಾನಗಳ ಹೆಸರಿನಲ್ಲಿದ್ದ ಹಣವನ್ನು ನುಂಗಿನೀರು ಕುಡಿದದ್ದು ಹೀಗೆ ಒಂದೇ ಎರಡೇ ಹಲವಾರು ಅಕ್ರಮಗಳ ವಿರುದ್ಧ ಹೋರಾಟಗಳು ನಡೆದವು. ಒಂದೊಂದು ಹೋರಾಟದಲ್ಲಿಯೂ ಇಡೀ ಊರೇ ಒಂದು ರಣಾಂಗಣದಂತೆ ಆಯಿತು. ಕೂಲಿಕಾರರ ಗುಡಿಸಲುಗಳನ್ನು ಸುಟ್ಟಿದ್ದು, ಕೂಲಿಕಾರ ಸಂಘದ ನಾಯಕರ ಮೇಲೆ ತಮ್ಮ ಟ್ರ್ಯಾಕ್ಟರ್, ಮೋಟಾರ್ ಬೈಕ್‌ಗಳನ್ನು ಹರಿಬಿಟ್ಟು ತಮ್ಮ ಸೊಕ್ಕು ತೋರಿಸಿದ್ದು, ಇಲ್ಲವೇ ಕೂಲಿಕಾರ ಸಂಘದ ನಾಯಕರಿಗೆ ಕುಡಿತ, ಹಣದ ಆಮಿಷಗಳನ್ನೊಡ್ಡಿ ಕೊಂಡುಕೊಳ್ಳಲು ಪ್ರಯತ್ನಿಸಿದ್ದು ಹೀಗೆ ಒಂದೇ ಎರಡೇ. ಈ 10-12 ವರ್ಷಗಳಲ್ಲಿ ಎಡಬಿಡದ ನಿರಂತರ ವರ್ಗ ಸಂಘರ್ಷ. ಗ್ರಾಮೀಣ ಪ್ರದೇಶದಲ್ಲಿ ವರ್ಗ ಸಂಘರ್ಷ ಎಂದರೆ ಹೇಗಿರುತ್ತದೆಂಬುದಕ್ಕೆ ಒಂದು ಪ್ರಯೋಗಶಾಲೆ ಸಿಂಗನಾಳ. ಈ ಶ್ರೀಮಂತ ಅನುಭವವನ್ನು ಒಂದೊಂದಾಗಿ 'ಏಕರಂಗ'ದಲ್ಲಿ ವರದಿ ಮಾಡಬೇಕಾಗಿದ್ದೆ.

ಇವುಗಳ ಜೊತೆಯಲ್ಲಿ ಕೂಲಿಕಾರರ ವಸತಿಗಾಗಿ, ಬೀದಿದೀಪ, ಕುಡಿಯುವ

## ಸರ್ಕಾರದ ಶರತ್ತು - ಜನರಿಗೆ ಹೊರೆ


'ಸ್ವಚ್ಛ ಗ್ರಾಮ' ಯೋಜನೆಯ ಸೌಲಭ್ಯವನ್ನು ಪಡೆಯಲು ಸರ್ಕಾರವು ಹಲವು ಶರತ್ತುಗಳನ್ನು ವಿಧಿಸಿದೆ. ಇದರ ಜವಾಬ್ದಾರಿಯನ್ನು ಜಿಲ್ಲಾ ಪಂಚಾಯತ್ ಮತ್ತು ಗ್ರಾಮ ಪಂಚಾಯತ್‌ಗಳಿಗೆ ವಹಿಸಿದೆ.

**ಆ ಶರತ್ತುಗಳೇನೆಂದರೆ -**

- ಗ್ರಾಮ ಪಂಚಾಯತಿಯು ತನ್ನ ಪಾಲಿನ ಶೇ 50 ರಷ್ಟು ಹಣವನ್ನು ಗ್ರಾಮಸ್ಥರಿಂದ ಸಂಗ್ರಹಿಸಿ ಜಿಲ್ಲಾ ಪಂಚಾಯತ್‌ಗೆ ರೇವಣಿ ಮಾಡುವ ಮೂಲಕ ತನ್ನ ಕೋರಿಕೆಯನ್ನು ನೋಂದಣಿ ಮಾಡುವುದು.
- ಗ್ರಾಮ ಪಂಚಾಯತಿಯು ಗ್ರಾಮ ಸಭೆಯೊಡನೆ ಸಮಾಲೋಚಿಸಿ ಗ್ರಾಮಕ್ಕೆ ಒದಗಿಸಲಾಗುವ ಸೌಲಭ್ಯಗಳ ನಿರ್ವಹಣೆಗಾಗಿ ಬೇಕಾಗುವ ಪೂರ್ತಿ ವೆಚ್ಚವನ್ನು ಗ್ರಾಮಸ್ಥರಿಂದ ಕರ ವಸೂಲಿ ಮಾಡುವ ಮೂಲಕ ಭರಿಸಲಾಗುವ ಕುರಿತು ಒಂದು ಠರಾವು ಮಾಡತಕ್ಕದ್ದು.
- ಯೋಜನೆಯಡಿ ನಿರ್ಮಿಸಲಾಗುವ ಸಾಮೂಹಿಕ ಶೌಚಾಲಯಗಳನ್ನು ಪ್ರತಿದಿನವೂ ಸ್ವಚ್ಛಗೊಳಿಸುವ ಬಗ್ಗೆ ಹಾಗೂ ಕನಿಷ್ಟ ಒಂದು ವಾರಕ್ಕೊಮ್ಮೆ ರಸ್ತೆಗಳನ್ನು ಎರಡು ವಾರಗಳಿಗೊಮ್ಮೆ ಚರಂಡಿಗಳನ್ನು ಸ್ವಚ್ಛಗೊಳಿಸುವ ಅಗತ್ಯ ವ್ಯವಸ್ಥೆಯನ್ನು ಕಲ್ಪಿಸಲು ಗ್ರಾಮ ಪಂಚಾಯತ್ ಒಪ್ಪಿಕೊಳ್ಳತಕ್ಕದ್ದು
- ಗ್ರಾಮ ಪಂಚಾಯತಿಗಳು ಸಾರ್ವಜನಿಕ ನಳಗಳು, ಸಿಸ್ಟರ್ನ್‌ಗಳು, ಕೈ ಪಂಪುಗಳ ಸುತ್ತಮುತ್ತಲಿನ ಸ್ಥಳಗಳನ್ನು ಸ್ವಚ್ಛವಾಗಿಟ್ಟು ನೀರು ನಿಲ್ಲದಂತೆ ನೋಡಿಕೊಳ್ಳುವುದು ಹಾಗೂ ವರ್ಷಕ್ಕೊಮ್ಮೆ ಕುಡಿಯುವ ನೀರಿನ ಮಾದರಿಯ ಗುಣಮಟ್ಟ ಪರೀಕ್ಷೆಯನ್ನು ಮಾಡಿಸಲು ಒಪ್ಪಿಕೊಳ್ಳತಕ್ಕದ್ದು.
- ಗ್ರಾಮ ಪಂಚಾಯತಿಯು ಗ್ರಾಮದ ವಾಸಸ್ಥಳಗಳಲ್ಲಿ ಯಾವುದೇ ತಿಪ್ಪೇಗುಂಡಿಗಳು, ಸಗಣಿ-ಕಸದ ರಾಶಿಗಳು ಇರತಕ್ಕದ್ದಲ್ಲವೆಂಬ ಬಗ್ಗೆ ಒಂದು ನಿಯಮಾವಳಿಗಳನ್ನು ಜಾರಿಗೊಳಿಸುವುದು ಮತ್ತು ಯೋಜನೆ ಮಂಜೂರಾದ ಒಂದು ತಿಂಗಳಲ್ಲಿ ವಾಸಸ್ಥಳದ ಅನೈರ್ಮಲ್ಯ, ತಿಪ್ಪೆಗುಂಡಿಗಳನ್ನು ಗ್ರಾಮದ ಹೊರವಲಯಕ್ಕೆ ಸಾಗಿಸಲು ಒಪ್ಪಿಕೊಳ್ಳತಕ್ಕದ್ದು.
- ಗ್ರಾಮ ಪಂಚಾಯತಿಯು ಗ್ರಾಮಕ್ಕೆ ಒದಗಿಸಲಾದ ಸೌಲಭ್ಯಗಳ ಅಂದರೆ ರಸ್ತೆ, ಚರಂಡಿ, ಸಾಮೂಹಿಕ ಮಿಶ್ರ ಗೊಬ್ಬರದ ಅಂಗಳ ಮತ್ತು ಸಾಮೂಹಿಕ ಶೌಚಾಲಯಗಳ ನಿರ್ವಹಣೆಯ ವೆಚ್ಚವನ್ನು ಭರಿಸಲು ವಾರ್ಷಿಕ ಆಯ-ವ್ಯಯವನ್ನು ತಯಾರಿಸಿಕೊಳ್ಳಬೇಕು.

ಈ ಶರತ್ತುಗಳು ಹೇಗಿವೆಯೆಂದರೆ 'ಬಡ ಬೋರೇಗೌಡನನ್ನು ತಡವಿ ತಟ್ಟಿ ಕದ್ದರಿದ್ದುದನ್ನೆಲ್ಲವ' ಎನ್ನುವಂತಾಗಿದೆ.

ಅರ್ಹರಿಗೆ ದಕ್ಕದ ಆಶ್ರಯ ಮನೆಗಳು



# ಯಾರ ಉದ್ಧಾರಕ್ಕಾಗಿ?

## ಪ್ರಯೋಗ ಶಾಲೆ

ನೀರುಗಳಿಗಾಗಿ ಸಾಗುವಳಿ ಯೋಗ್ಯ ಸರ್ಕಾರಿ ಭೂಮಿಯ ಅಕ್ರಮಣಕ್ಕಾಗಿ ನಡೆದ ಹೋರಾಟಗಳು ಮತ್ತಷ್ಟು. ಇಂತಹ ಊರಿನಲ್ಲಿ ದುಡಿಯುವ ಜನರ ರಾಜಕೀಯ ಪ್ರಜ್ಞೆಯನ್ನು ಎಚ್ಚರಿಸಲು ಹಲವಾರು ರಾಜಕೀಯ ಸಭೆಗಳು. ಈ ಕೂಲಿಕಾರ ಸಂಘದ ಈ ಸಭೆಗಳ ಮೂಲಕ ಇಡೀ ಊರಿಗೆ ದೇಶದ, ರಾಜ್ಯದ ರಾಜಕೀಯ ಪರಿಸ್ಥಿತಿ ವಿವರಣೆ, ಈ ಊರಿಗೆ ಕೃಷಿ ಕೂಲಿಕಾರಸಂಘ ಅಖಿಲಭಾರತ ಮುಂದಾಳುಗಳಾದ ಕಾಂ. ವಿಜಯರಾಘವನ್, ಕಾಂ. ಸುನೀತ್ ಚೋಪ್ರಾರವರೂ ಭೇಟಿ ನೀಡಿ ಬಹಿರಂಗಸಭೆಗಳನ್ನು ಉದ್ದೇಶಿಸಿ ಮಾತನಾಡಿದ್ದಾರೆ.

ನಮ್ಮ ಪಕ್ಷದ 'ಕಾರ್ಯಕ್ರಮ'ದ ತಿಳುವಳಿಕೆಯಂತೆ ಕೂಲಿಕಾರರು ಒಗ್ಗೂಡಿ ಪ್ರತಿಭಟಿಸಿದರೆ ರೈತರೂ ಕೂಡ ಸಾಹುಕಾರರ, ದಣಿಗಳ ಮರ್ಜಿಯನ್ನು ಅನುಸರಿಸುವುದನ್ನು ಬಿಟ್ಟು ಹೋರಾಟದಲ್ಲಿ ಕೂಲಿಕಾರರ ಜೊತೆ ಸೇರುತ್ತಾರೆ ಎಂಬುದಕ್ಕೆ ಸಜೀವ ಉದಾಹರಣೆಯೋ ಎಂಬಂತೆ ಕರ್ನಾಟಕ ಪ್ರಾಂತ ರೈತ ಸಂಘವೂ ಕೂಡಾ ಈ ಹಳ್ಳಿಯಲ್ಲಿ ಆರಂಭವಾಯಿತು. ಇಷ್ಟೇ ಇಂದು ಸುತ್ತಮುತ್ತಲ ಅನೇಕ ಹಳ್ಳಿಗಳ ರಾಜಕೀಯದೊಳಗೆ ಕಡೆತವನ್ನು ಧ್ರುವೀಕರಣವನ್ನು ಆರಂಭಿಸುವ ಪ್ರಭಾವ ಪಡೆದಿದೆ.

ಇಂತಹ ಹೋರಾಟದ ಇತಿಹಾಸವಿರುವ ಸಿಂಗನಾಳದಲ್ಲಿ ಕೇವಲ ಶ್ರೀಮಂತರ, ಮೇಲುಜಾತಿಯವರ ಮನೆಯ ಮುಂದಿನ ರಸ್ತೆಗಳು ಮಾತ್ರವಲ್ಲ ಅವರ ಮನೆಯ ಅಂಗಳಕ್ಕೂ ಕೂಡ ಫರ್ಸಿ (ಚಪ್ಪಡಿ) ಕಲ್ಲು. ದಲಿತರು, ಕೂಲಿಕಾರರುಮಾತ್ರವಲ್ಲ ಬಡ, ಮಧ್ಯಮ ವರ್ಗದ ಹಿಂದುಳಿದ ಜಾತಿಗಳ ರೈತರು ವಾಸಿಸುವ ಪ್ರದೇಶದಲ್ಲಿ ರೊಚ್ಚು ಕೊಚ್ಚೆಗಳು. ಇಂತಹ 'ಸ್ವಚ್ಛ!!!' ಗ್ರಾಮದ ಕಲ್ಪನೆಯನ್ನು ಕೂಲಿಕಾರರು ಸ್ವೀಕರಿಸಿಯಾರೇ?

ಮೊದಲು ಸಿಂಗನಾಳದಲ್ಲಿ ಬಹಿರಂಗ ಸಭೆ ನಡೆಸಿ ಈ 'ಸಚ್ಛ ಗ್ರಾಮ' ಯೋಜನೆಯ ಜಾರಿಯಲ್ಲಿ ತೊಡಗಿರುವ ಕೊಳಕು ಮನಸ್ಸುಗಳನ್ನು ಬಯಲಿಗೆಳೆದರು ಕೂಲಿಕಾರರ ಸಂಘದವರು. ನಂತರ ಹೋರಾಟದತ್ತ... ಎಲ್ಲಾ ರಾಜಕೀಯ ಒತ್ತಡಗಳ ನಡುವೆಯೂ ಜಿಲ್ಲಾ ಆಡಳಿತ ಕೂಲಿಕಾರರು ಕೇಳಿದ ನ್ಯಾಯವಾದ ಬೇಡಿಕೆಗಳಿಗೆ, ತಮ್ಮ ಸರ್ಕಾರದ ನಿಯಮಗಳ ಜಾರಿಗೆ ಒಪ್ಪಿಕೊಳ್ಳಲೇಬೇಕಾಯಿತು.

- ನಾಗರಾಜ್ ಜಿ.ಎನ್

## 'ದುಡ್ಡು ಮಾಡುವ ದಂಧೆ'

ಭ್ರಷ್ಟ ಅಧಿಕಾರಿಗಳು ತಮಗೆ 'ಮಾಮೂಲಿ' ನೀಡಿದ ಶ್ರೀಮಂತ ರೈತರ ಓಣಿಗಳನ್ನು ಸರ್ವೆ ಮಾಡಿ ಯೋಜನೆಯನ್ನು ಕಾರ್ಯಗತಗೊಳಿಸಲು ಒಪ್ಪಿಗೆ ನೀಡುತ್ತಾರೆ. ಕಂಟ್ರಾಕ್ಟರುಗಳು ಕಳಪೆ ಕಾಮಗಾರಿ ನಡೆಸಿ ದುಪ್ಪಟ್ಟು ವಸೂಲಿ ಮಾಡುತ್ತಾರೆ. ರಾಜಕೀಯ ಧುರೀಣರು, ಅವರ ಅನುಯಾಯಿಗಳು ಇವರಿಗೆಲ್ಲಾ ಕೊಂಡಿಯಾಗಿದ್ದುಕೊಂಡು ತಮ್ಮ ಪಾಲಿಗೆ ಬರಬೇಕಾದ್ದನ್ನು ವಸೂಲಿ ಮಾಡಿಕೊಳ್ಳುತ್ತಾರೆ. ಸರ್ಕಾರಿ ಕಡತಗಳಲ್ಲಿ 'ಸ್ವಚ್ಛತಾ ಗ್ರಾಮ ಯೋಜನೆ'ಯಲ್ಲಿ ಇಂತಿಷ್ಟು ಗ್ರಾಮಗಳ ಉದ್ಧಾರ ಎಂದಿದ್ದರೆ ಅದಕ್ಕಾಗಿ ತಗುಲಿದ ಲಕ್ಷಾಂತರ ರೂಪಾಯಿ ಗುಳುಂ ಆಗಿರುತ್ತದೆ. ಬಡವರ ಕೇರಿಗಳು ಮಾತ್ರ ತಿಪ್ಪೆಗುಂಡಿಯಾಗಿಯೇ ಉಳಿದಿರುತ್ತವೆ. ರಾಜ್ಯದಲ್ಲಿ ಒಂದು ಸಾವಿರ ಗ್ರಾಮಗಳನ್ನು 'ಸ್ವಚ್ಛತಾ ಗ್ರಾಮ'ಗಳನ್ನಾಗಿ ಪರಿವರ್ತಿಸಲು ಸರ್ಕಾರ ಯೋಜಿಸಿದ್ದು ಇದರಲ್ಲಿ ಗಂಗಾವತಿ ತಾಲೂಕಿನ ಸಿಂಗನಾಳ ಗ್ರಾಮವೊಂದನ್ನು ನೋಡಿದರೆ ಸಾಕು ಸರಕಾರದ ಉದ್ದೇಶ ವೇನೆಂದು ಅರ್ಥವಾಗುತ್ತದೆ.



ವಸತಿ ಸಚಿವ ಕಮರುಲ್ ಇಸ್ಲಾಂ

ರೈತರು-ಕೂಲಿಕಾರರು ಶ್ರೀಮಂತ ರೈತರ ಓಣಿಗಳು ನವೀಕರಣಗೊಳ್ಳುತ್ತಿರುವುದನ್ನು ಕಂಡು ಮೂಕವಿಸ್ಮಿತರಾಗಿ 'ಈ ಸೌಲತ್ತುಗಳು ನಮಗ್ಯಾಕಿಲ್ಲ' ಎಂದು ತಮ್ಮಲ್ಲೇ ಗೊಣಗಿಕೊಳ್ಳುವಂತಾಗಿದೆ.

ಸರ್ಕಾರ ಇದರತ್ತ ಗಮನ ಹರಿಸದೆ ಕಣ್ಣು ಮುಚ್ಚಿ ಕುಳಿತಿದೆ. ಈ ರಾಜ್ಯದ ಬಹುತೇಕ ಗ್ರಾಮಗಳು ಶೋಚನೀಯ ಸ್ಥಿತಿಯಲ್ಲಿರುವಾಗ ಈ ಯೋಜನೆಯನ್ನು ಸರಿಯಾದ ನಿಟ್ಟಿನಲ್ಲಿ ಅನುಷ್ಠಾನಕ್ಕೆ ತರದೇ ತನ್ನ ಹಿಂಬಾಲಕ 'ಚೇಲಾ'ಗಳ ಏಳ್ಗೆಗಾಗಿಯೇ ಇಂತಹ ಯೋಜನೆಯನ್ನು ತಂದಿದೆಯೇನೋ ಎಂಬ ಅನುಮಾನ ಮೂಡಿಸುತ್ತದೆ.

## ರೊಚ್ಚಿಗೆದ್ದ ರೈತರು, ರೈತ-ಕೂಲಿಕಾರರ ಸಂಘದ ನೇತೃತ್ವದಲ್ಲಿ ಪ್ರತಿಭಟನೆ

ಗಂಗಾವತಿ ತಾಲೂಕಿನ ಸಿಂಗನಾಳ ಅತಿ ಶ್ರೀಮಂತರು ವಾಸಿಸುವ ಊರು. ಅಷ್ಟೇ ಪ್ರಮಾಣದಲ್ಲಿ ಕೃಷಿಕೂಲಿಕಾರರು ವಾಸಿಸುತ್ತಿದ್ದಾರೆ ಕೂಡ. 400-500 ಮನೆಗಳಿರುವ ಗ್ರಾಮಗಳಿಗೆ ಮಾತ್ರವಾಗಿದ್ದ ಈ ಯೋಜನೆ 1000 ಕ್ಕೂ ಮನೆಗಳಿರುವ ಸಿಂಗನಾಳ ಗ್ರಾಮಕ್ಕೆ ಅದರಲ್ಲೂ ಶ್ರೀಮಂತ ರೈತರ ಓಣಿಗಳಲ್ಲಿ ಜಾರಿಗೆ ಬಂತು. ನಿಯಮಗಳ ಪ್ರಕಾರ ಗ್ರಾಮ ಸಮಿತಿ ರಚಿಸಿ, ಸಭೆ ನಡೆಸಿ ಯೋಜನೆಯ ಉದ್ದೇಶಗಳನ್ನು ತಿಳಿಸಿ, ಗ್ರಾಮದ ಸರ್ವೆ ನಡೆಸಿ ಆ ನಂತರ ಕಾಮಗಾರಿಗಳನ್ನು ಜಾರಿಗೊಳಿಸಬೇಕಿತ್ತು. ಆದರೆ ಇದಾವುದನ್ನು ಲೆಕ್ಕಿಸದೆ ಭೂಮಾಲೀಕರು ನೀಡಿದ ಎಂಜಲು ಕಾಸಿಗೆ ಕೈಯೊಡ್ಡಿದ ಅಧಿಕಾರಿಗಳು ಅವರ ಓಣಿಗೆ ಯೋಜನೆಗಳನ್ನು ಜಾರಿಗೊಳಿಸಿದರು. ಬಡ ಕೃಷಿ ಕೂಲಿಕಾರರಿಗೆ, ಅವರ ಸಂಘಟನೆಗೆ ಇದು ತಿಳಿಯಬಾರದೆಂಬ ಎಚ್ಚರ ವಹಿಸಿದರು. ಕೂಲಿಕಾರರ ಓಣಿಗೆ ಈ ಸೌಲಭ್ಯಗಳು ದಕ್ಕಬಾರದೆಂದೇ ಗಣ್ಯವ್ಯಕ್ತಿಗಳು ಪ್ರತಿಪಾದಿಸಿದರು. ಆದರೆ ತಮ್ಮ ಓಣಿಗೆ ಯಾವುದೇ ಸೌಲಭ್ಯವಿಲ್ಲದೆ ಅವರಿಗೆ ಮಾತ್ರ ಏಕೆ ವಿಶೇಷ ಸೌಲಭ್ಯಗಳು ಎಂಬ ಅನುಮಾನ ಬಡ ಕೃಷಿಕರಿಗೆ ಕಾಡಿತು. ಈ ವಿಷಯವನ್ನು ಪ್ರಾಂತ ಕೃಷಿಕೂಲಿಕಾರರ ಸಂಘದ ಗಮನಕ್ಕೆ ತಂದರು.

### ಪೇಚಿಗೆ ಸಿಕ್ಕಿಹಾಕಿಕೊಂಡವರು

ಪ್ರಾಂತ ಕೃಷಿ ಕೂಲಿಕಾರರ ಸಂಘದ ನಿಯೋಗವೊಂದು ಗ್ರಾಮಪಂಚಾಯತಿಗೆ ಭೇಟಿ ನೀಡಿ ಸಿಂಗನಾಳ ಗ್ರಾಮದಲ್ಲಿ ಕೈಗೊಂಡಿರುವ ಯೋಜನೆಗಳು ಯಾವ ಕಾರ್ಯಕ್ರಮದಡಿಯಲ್ಲಿ ಬರುತ್ತವೆ ಎಂದು ಪ್ರಶ್ನಿಸಿದರು. ಪೇಚಿಗೆ ಸಿಕ್ಕಿಕೊಂಡ ಗ್ರಾ.ಪಂ.ಕಾರ್ಯದರ್ಶಿಗಳು ಸಮರ್ಪಕ ಉತ್ತರ ನೀಡದೆ ಜಾರಿಕೊಳ್ಳುವ ಪ್ರಯತ್ನ ನಡೆಸಿದರು. ಈ ಯೋಜನೆಯ ನಕಲು ನೀಡಬೇಕೆಂಬ ಸಂಘದ ಒತ್ತಾಯಕ್ಕೆ ಮಣಿಯದೆ ಮಾಹಿತಿ ನೀಡಲು ನಿರಾಕರಿಸಿದರು. ಆದರೆ ಪಟ್ಟು ಬಿಡದ ಸಂಘಕ್ಕೆ 'ಸ್ವಚ್ಛತಾ ಗ್ರಾಮ'ಯೋಜನೆಯ ಪಟ್ಟಿಯನ್ನು ನೀಡಲೇಬೇಕಾಯಿತು. ಅದನ್ನು ನೋಡಿದ ಮೇಲೆ ಸಂಘಕ್ಕೆ ಸ್ಪಷ್ಟವಾಯಿತು ಇದು ದೊಡ್ಡರ ಮರ್ಜಿಗೆ ತಕ್ಕಂತೆ ನಡೆಯುವ ಯೋಜನೆ ಬಡ ಕೃಷಿಕರಿಗಾಗಿ ಅಲ್ಲ ಎಂದು. ಇದರಲ್ಲಿ ಸಾಕಷ್ಟು ಹಣ ಪೋಲಾಗುತ್ತಿರುವುದನ್ನು ಮನಗಂಡ ಸಂಘಟನೆ ಇದನ್ನು ದೃಢವಾಗಿ ಪ್ರತಿಭಟಿಸಲು ನಿರ್ಧರಿಸಿತು.

ನಿಯಮದ ಪ್ರಕಾರ ಇಡೀ ಗ್ರಾಮಕ್ಕೆ ಯೋಜನೆ ಅಳವಡಿಸಬೇಕೆಂದಿರುವಾಗ ಒಂದು ಓಣಿಗೆ ಮಾತ್ರ ಏಕೆ ಸೀಮಿತಗೊಳಿಸಿದ್ದೀರೆಂದು ಪ್ರಶ್ನಿಸಿ ಕೃಷಿ ಕೂಲಿಕಾರರ ಸಂಘಟನೆ ಗ್ರಾಮ ಪಂಚಾಯತ್ ಅಧ್ಯಕ್ಷರ ಮನೆ ಮುಂದೆ ಧರಣಿ ಸತ್ಯಾಗ್ರಹ ಆರಂಭಿಸಿತು. ಯೋಜನೆಗೆ ತಗಲುವ ವೆಚ್ಚದ ಶೇ 10 ರಷ್ಟನ್ನು ನೀವು ನೀಡಿಲ್ಲ ಮತ್ತು ಸರ್ವೆಯಲ್ಲಿ ನಿಮ್ಮ ಓಣಿಗಳು ಒಳಗೊಂಡಿಲ್ಲವಾದ್ದರಿಂದ ಈ ಯೋಜನೆ ನಿಮಗಿಲ್ಲವೆಂದು ದಬಾಯಿಸಿದರು. ಶೇ 10 ರಷ್ಟನ್ನು ತಾವು ಭರಿಸಬೇಕೆಂಬ ವಿಚಾರವೇ ನಮಗೆ ತಿಳಿದಿಲ್ಲ, ಇದನ್ನು ತಿಳಿಸಬೇಕಾದ ಜವಾಬ್ದಾರಿ ನಿಮ್ಮದಲ್ಲವೇ ಎಂದು. ಸಂಘಟನೆ ಪ್ರಶ್ನಿಸಿದಾಗ ಸ್ಪಷ್ಟವಾದ ಉತ್ತರ ನೀಡದೆ ಗ್ರಾ.ಪಂ.ಅಧ್ಯಕ್ಷರು ನಿರ್ಲಕ್ಷ್ಯ ತೋರಿದರು. ಸಂಘ ತೀವ್ರ ಪ್ರತಿಭಟನೆ ನಡೆಸಿದ ಬಳಿಕ ಈ ಯೋಜನೆ ಬಗ್ಗೆ ತಮಗೆ ಸರಿಯಾದ ಮಾಹಿತಿ ಇಲ್ಲ, ತಾನೇನು ಮಾಡಲಿ ಎಂದು ಗ್ರಾ.ಪಂ.ಅಧ್ಯಕ್ಷರು ತಮ್ಮ ಅಸಹಾಯಕತೆ ವ್ಯಕ್ತಪಡಿಸಿ ಜಾರಿಕೊಂಡು.

### ಜಿಲ್ಲಾ ಪಂಚಾಯತ್ ಕಾರ್ಯಾಲಯದ ಮುಂದೆ ಬೃಹತ್ ಪ್ರತಿಭಟನೆ

ಸಿಂಗನಾಳ ಗ್ರಾಮದಲ್ಲಿ ಸ್ವಚ್ಛತೆ ಗ್ರಾಮ ಯೋಜನೆಯಲ್ಲಿ ನಡೆದ ಭ್ರಷ್ಟಾಚಾರ, ಕಳಪೆ ಕಾಮಗಾರಿ, ಅವ್ಯವಹಾರ ತಡೆಗಟ್ಟಿ, ಕೃಷಿ ಕೂಲಿಕಾರರ ಓಣಿಯನ್ನು ಕಡೆಗಣಿಸಿದನ್ನು ವಿರೋಧಿಸಿ, ಪುನರ್‌ಕಾಮಗಾರಿಯನ್ನು ಕೈಗೊಳ್ಳಲು ಒತ್ತಾಯಿಸಿ ಕೊಪ್ಪಳ ಜಿಲ್ಲೆಯ ಜಿಲ್ಲಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಕಛೇರಿಮುಂದೆ ನೂರಾರು ಕೃಷಿ ಕೂಲಿಕಾರರು ಬೃಹತ್ ಪ್ರಮಾಣದಲ್ಲಿ ಪ್ರತಿಭಟನೆ ನಡೆಸಿದರು. ಕೆಂಬಾವುಟ ಕಂಡ ತಕ್ಷಣದಲ್ಲಿ ಜಿಲ್ಲಾ ಪಂಚಾಯತ್ ಅಧಿಕಾರಿಗಳು ಬೆದರಿಹೋದರು. 'ಏನದು ಹೋರಾಟ, ನಮ್ಮಲ್ಲಿ ಏಕೆ ನಡೆಸುತ್ತಾರೆ'ಎಂದು ಗುಸುಗುಸು ಸುದ್ದಿ ಕಛೇರಿ ಒಳಗಡೆ ಪ್ರಾರಂಭಗೊಂಡಿತು. ತಕ್ಷಣದಲ್ಲಿ ಕೃಷಿಕೂಲಿಕಾರರ ಬಳಿ ಧಾವಿಸಿ ಬಂದ ಅಧಿಕಾರಿಗಳು ಅವರ ಮನವಿಯನ್ನು ಪರಿಶೀಲಿಸಿ ಕೂಡಲೇ ಅದಕ್ಕೆ ಸಂಬಂಧಪಟ್ಟ ಕಾಮಗಾರಿಗಳು ಮತ್ತು ಹಣ ಮಂಜೂರಾತಿಯನ್ನು ತಡೆಗಟ್ಟಬೇಕೆಂದು ಆದೇಶಿಸಿದರಲ್ಲದೆ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಕರೆಸಿ ಸಿಂಗನಾಳ ಗ್ರಾಮಕ್ಕೆ ಭೇಟಿ ನೀಡಿ ತನಿಖೆ ನಡೆಸಲು ಸೂಚಿಸಿದರು.

### ಗ್ರಾಮಕ್ಕೆ ಅಧಿಕಾರಿಗಳು ತಹಶೀಲ್ದಾರರ ಭೇಟಿ

ಶ್ರೀಮಂತರ ಓಣಿಗಳು ರಸ್ತೆ, ಒಳಚರಂಡಿ ಮತ್ತು ಶೌಚಾಲಯಗಳಿಂದ ಕೂಡಿದ್ದು ಬಡ ಕೃಷಿ ಕೂಲಿಕಾರರ ಓಣಿಗಳು ಕೊಳಚೆ ಗುಂಡಿಗಳಾಗಿರುವುದು ಮತ್ತು ಶಾಲೆಯ ಸುತ್ತ ಮುತ್ತ ಕೂಡ ಯಾವುದೇ ಅಭಿವೃದ್ಧಿಯಾಗದಿರುವುದು ಅದನ್ನು ತೀವ್ರವಾಗಿ ಕಡೆಗಣಿಸುವುದು ಸ್ಪಷ್ಟವಾಗಿ ಗೋಚರಿಸುತ್ತಿದ್ದನ್ನು ಕಂಡ ತಾ. ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ತಹಶೀಲ್ದಾರರು ಗ್ರಾ.ಪಂ. ಅಧ್ಯಕ್ಷರನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು. ಇಲ್ಲದ ಸಬೂಬು ಹೇಳತೊಡಗಿದ ಅಧ್ಯಕ್ಷರು ಕೃಷಿ ಕೂಲಿಕಾರರು ಹಣ ಸಂದಾಯಿಸಲಿಲ್ಲ, ಸರ್ವೆಯಲ್ಲಿ ಅವರ ಓಣಿಗಳು ಅವರು ಒಳಗೊಂಡಿಲ್ಲ ಎಂದು ಜಾರಿಕೊಳ್ಳಲು ಯತ್ನಿಸಿದರು. ಆದರೆ ಸಂಘದ ಮುಖಂಡರು ಈ ಯೋಜನೆಯ ಬಗ್ಗೆ ನಮಗೆ ಯಾವುದೇ ಮಾಹಿತಿ ನೀಡಿಲ್ಲ, ಗ್ರಾಮ ಸಭೆ ಸೇರಿಸಿ ತಿಳಿಸಲಿಲ್ಲ, ಹಣವನ್ನು ತಾವು ಸಂದಾಯಿಸಬೇಕೆಂಬ ವಿಚಾರವೇ ತಮಗೆ ತಿಳಿದಿಲ್ಲವೆಂದು ಸ್ಪಷ್ಟಪಡಿಸಿದರು. ಅಧಿಕಾರಿಗಳು ಈ ಯೋಜನೆಯ ವಿವರಗಳು ಸಾಮಾನ್ಯ ಜನರಿಗೆ ತಲುಪದಿರುವ ಬಗ್ಗೆ ಆಶ್ಚರ್ಯಗೊಂಡರು.

ಕೊನೆಗೆ ಸಂಘಟನೆಯ ಪ್ರತಿಭಟನೆ ಮತ್ತು ಒತ್ತಾಯಕ್ಕೆ ಮಣಿದ ಜಿಲ್ಲಾ ಪಂಚಾಯತ್ ಮತ್ತು ಗ್ರಾಮ ಪಂಚಾಯತ್ ಮೊದಲ ಆದ್ಯತೆಯಾಗಿ ಬಡ ಕೃಷಿಕರ ಓಣಿಗಳ ಅಭಿವೃದ್ಧಿ ಕೈಗೊಳ್ಳುವುದಾಗಿ ಒಪ್ಪಿಕೊಂಡಿತು.

### ಮಾತು ತಪ್ಪಿದ ಅಧಿಕಾರಿಗಳು

ತಮ್ಮ ಓಣಿಗಳ ಏಳ್ಗೆಯ ಕನಸು ಕಂಡಿದ್ದ ಕೃಷಿ ಕೂಲಿಕಾರರಿಗೆ ನಿರಾಸೆ ಕಾದಿತ್ತು. ಅಧಿಕಾರಿಗಳು ಶ್ರೀಮಂತ ರೈತರ ಒತ್ತಡಕ್ಕೆ ಮಣಿದು ಮತ್ತೆ ಬಡ ಕೃಷಿಕರ ಕೇರಿಗಳತ್ತ ಕಣ್ಣು ಹಾಯಿಸಲಿಲ್ಲ. ಕೊಟ್ಟ ಮಾತಿಗೆ ತಪ್ಪಿದ ಅಧಿಕಾರಿಗಳು ರಸ್ತೆ, ಚರಂಡಿ ನಿರ್ಮಾಣದ ಕಡೆಗೆ ಗಮನ ಹರಿಸಲಿಲ್ಲ. ಇದರಿಂದ ಕೃಷಿಕೂಲಿಕಾರರು ಅಸಮಾಧಾನಗೊಂಡು ಸಂಘಟನೆಯ ಮುಖಾಂತರ ನೇರವಾಗಿ ಜಿಲ್ಲಾ ಪಂಚಾಯತ್ ಅಧಿಕಾರಿಗಳನ್ನು ಭೇಟಿ ಮಾಡಿ ನಿಯಮಾವಳಿಗಳನ್ನು ಮತ್ತೆ ಮತ್ತೆ ಗಾಳಿಗೆ ತೂರುತ್ತಿರುವ ಅಧಿಕಾರಿಗಳ ವಿರುದ್ಧ ದೂರಿತ್ತರು. ಕೂಡಲೇ ಸಿಂಗನಾಳ ಗ್ರಾಮಕ್ಕೆ ಭೇಟಿ ನೀಡಲು ಒಪ್ಪಿದ ಜಿಲ್ಲಾ ಅಸಿಸ್ಟೆಂಟ್ ಕಮಿಷನರ್ ಗ್ರಾಮಕ್ಕೆ ಭೇಟಿ ನೀಡಿ ಕಾಮಗಾರಿಗಳನ್ನು ಪರಿಶೀಲಿಸಿದರು. ಹಿಂದಿನ ತೀರ್ಮಾನದಂತೆ ಯಾವುದೇ ಕೆಲಸ ಕಾರ್ಯಗಳನ್ನು ಕೈಗೊಳ್ಳದ ಅಧಿಕಾರಿಗಳನ್ನು ಎಲ್ಲರ ಸಮ್ಮುಖದಲ್ಲಿ ತೀವ್ರವಾಗಿ ತರಾಟೆಗೆ ತೆಗೆದುಕೊಂಡರು. ಕೂಡಲೇ ಕಾಮಗಾರಿಗಳನ್ನು ಆರಂಭಿಸಬೇಕೆಂದು ಆದೇಶವಿತ್ತರು. ಕಾಮಗಾರಿಯಲ್ಲಿ ಏರುಪೇರಾದರೆ ಶಿಸ್ತಿನ ಕ್ರಮ ಜರುಗಿಸುವುದಾಗಿ ಎಚ್ಚರಿಸಿದರು.

### ಕೂಲಿಕಾರರ ಸಂಘಕ್ಕೆ ಸಂದ ಜಯ

ಸ್ವಚ್ಛತೆ ಯೋಜನೆಯಡಿಯಲ್ಲಿ ಕಳಪೆ ಕಾಮಗಾರಿ ನಡೆಸಿ ಲಕ್ಷಾಂತರ ರೂಪಾಯಿ ಲೂಟಿ ಮಾಡಲೊರಟಿದ್ದ ಅಧಿಕಾರಿಗಳ ಆಟ ಸಿಂಗನಾಳದಲ್ಲಿ ನಡೆಯಲಿಲ್ಲ. ಸರ್ಕಾರದ ಯೋಜನೆಗಳೆಲ್ಲಾ ತಮ್ಮ ಏಳ್ಗೆಗಾಗಿಯೇ ಇರುವುದು ಎಂದು ಭ್ರಮಿಸಿದ್ದ ಶ್ರೀಮಂತರು ಪೆಚ್ಚಾಗಿ, ದಿಟ್ಟವಾಗಿ ಹೋರಾಟ ನಡೆಸಿ ಜಯಶೀಲವಾದ ಸಂಘಟನೆಯ ಮೇಲೆ ಕೆಂಗಣ್ಣು ಬೀರಿದರು. ಲಂಚದ ಆಮಿಷ ನೀಡಿ ಹೋರಾಟಕ್ಕೆ ಮಸಿ ಬಳಿಯಲೊರಟವರ ಆಟ ಇಲ್ಲಿ ಸಾಗಲಿಲ್ಲ. ಈ ವಿಜಯದಿಂದ ಪ್ರಾಂತ ಕೃಷಿ ಕೂಲಿಕಾರರ ಸಂಘದ ಪ್ರಭಾವ ಸುತ್ತಮುತ್ತೆಲ್ಲ ಹೆಚ್ಚಿದೆ. ಹಲವರು ತಮ್ಮ ಊರಿನಲ್ಲಿಯೂ ಸಂಘಟನೆ ಕಟ್ಟಿ ಬೆಳೆಸುವ ಉತ್ಸಾಹ ತೋರುತ್ತಿದ್ದಾರೆ. ಭೂಮಾಲಕರು ಮತ್ತು ಆಳರಸರ ಕುತಂತ್ರಕ್ಕೆ ಸಂಘಟನೆಯಡಿಯಲ್ಲಿ ದಿಟ್ಟ ಉತ್ತರ ನೀಡಲು ಸಜ್ಜಾಗುತ್ತಿದ್ದಾರೆ.

"ಶೌಚಾಲಯ, ಚರಂಡಿ, ಕಸದ ವಿಲೇವಾರಿಯಂತಹ ವಿಷಯಗಳಲ್ಲಿ ನಮ್ಮ ಸಾಧನೆ ಶೋಚನೀಯ. ನಾವು ನೈರ್ಮಲ್ಯವನ್ನು ಸ್ವಾತಂತ್ರ್ಯ ಚಳುವಳಿಯ ಒಂದು ಭಾಗವಾಗಿ ಹೋರಾಡೋಣ" ಎಂದು ಘೋಷಿಸಿರುವ ಕೂಲಿಕಾರರ ಸಂಘಟನೆ ಇಂತಹ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ದಕ್ಕುವಂತೆ ಮಾಡಲು ದಿಟ್ಟ ಹೋರಾಟದತ್ತ ದಾಪುಗಾಲು ಹಾಕಿದೆ.

# ಕುಂದಾಪುರದಲ್ಲೀಗ ಮತಾಂಧ ವೈರಸ್ ಅಟ್ಟಹಾಸ



*ಗುಜರಾತ್‌ನ ಹತ್ಯಾಕಾಂಡದಿಂದ ಇನ್ನಷ್ಟು ಉತ್ತೇಜಿತರಾದ ಚೆಡ್ಡಿ ಪರಿವಾರ ಅದರ ಪ್ರಯೋಗಕ್ಕಿಳಿಯಿತು. ಪರಿಣಾಮ, ಅಲ್ಪಸಂಖ್ಯಾತರ ಮೇಲ್ ವ್ಯಾಪಕ ವಿದ್ವೇಷದ ವಿಷ ಕಾರಿದ್ದು... ಆಕ್ರಮಣ, ಆಸ್ತಿ ಲೂಟಿ, ಬೆಂಕಿ ಹಚ್ಚಿದ್ದು... ಇದಕ್ಕೆ ಬಳಸಿಕೊಂಡ ಕಾರಣ 'ವಿದ್ರೋಹಿಗಳು ಹುಡುಗಿಯರಿಗೆ ಏಡ್ಸ್ ಚುಚ್ಚುಮದ್ದು ಹಾಕಿದ್ದಾರೆ' ಎಂಬುದು! ಕೆಲ ಸತ್ಯ ಸಂಗತಿಗಳು ಹೊರಬಂದರೂ ಮತೋನ್ಮಾದ, ಪೂರ್ವಗ್ರಹಗಳ ದರ್ಬಾರಿನಲ್ಲಿ ಕೇಳುವವರಾರು? ಮದುಳಿಗೆ ಹಾಕಿದ ಈ ಕೋಮುದ್ವೇಷದ ಲಸಿಕೆಗೆ ಮದ್ದಿದೆಯೇ?*

ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕು ಏಪ್ರಿಲ್ ಮೊದಲ ವಾರದಂದು ಕೋಮು ಗಲಭೆಗೆ ತುತ್ತಾಗಿದ್ದು ತಾಲೂಕಿನ ವಿವಿದೆಡೆ ಅಶಾಂತವಾದ ವಾತಾವರಣ ಏರ್ಪಟ್ಟಿದೆ. ಹಲವು ವರ್ಷಗಳ ಹಿಂದೆ ಭಾಸ್ಕರ ಕೊಠಾರಿ-ಮುನಾವರ ಪ್ರಕರಣದ ನಂತರದಲ್ಲಿ ಈ ಘಟನೆ ತಾಲೂಕಿನ ಕೋಮು ಸಾಮರಸ್ಯವನ್ನು ಹಾಳು ಮಾಡಿದೆ.

ಕುಂದಾಪುರದ ಆಸೋಡು ಗ್ರಾಮದ ಗೆಂಡ ಹಬ್ಬದ ಸಂದರ್ಭದಲ್ಲಿ ಸುಮಾರು 10 ವರ್ಷದ 4 ಮಕ್ಕಳಿಗೆ ಸೂಜಿ ಚುಚ್ಚಿದ ಪ್ರಕರಣ. ಚುಚ್ಚಿದ ಆರೋಪಿಗಳು ಮುಸ್ಲಿಮ್ ವಿಭಾಗಕ್ಕೆ ಸೇರಿದವರಾಗಿದ್ದಾರೆ. ಪೋಲೀಸರು ಆರೋಪಿಗಳನ್ನು ಬಂಧಿಸಿದ್ದು ನ್ಯಾಯಾಂಗ ಬಂಧನಕ್ಕೆ ಅವರನ್ನು ಒಪ್ಪಿಸಲಾಗಿದೆ. ಅವರಲ್ಲಿ ಒಬ್ಬನಲ್ಲಿ ಒಂದು ನೀಡಲ್‌ನ್ನು ಉಳಿದವರಿಂದ ಸೂಜಿಗಳನ್ನು ವಶಪಡಿಸಿಕೊಳ್ಳಲಾಗಿದೆ.

ಸೂಜಿ ಚುಚ್ಚಿಸಿಕೊಂಡ ಮಕ್ಕಳನ್ನು ವಿವಿಧ ವಿಭಾಗದಲ್ಲಿ ಪರೀಕ್ಷೆಗೊಳಪಡಿಸಲಾಗಿದ್ದು ಯಾವುದೇ ಅಪಾಯವಿಲ್ಲ ಎಂದು ಕಂಡುಕೊಳ್ಳಲಾಗಿದೆ. ಹಾಗೂ ಮಕ್ಕಳು ಎಂದಿನಂತೆ ಇದ್ದಾರೆ. (ಆರೋಪಿಗಳು ತಮ್ಮ ಮೈಗೆ ಮೊದಲು ಚುಚ್ಚಿ ಮಕ್ಕಳಿಗೆ ಚುಚ್ಚಿರಬಹುದು ಎಂಬ ಕಾರಣ ಚುಚ್ಚಿದ್ದ ಆರೋಪಿಗಳ ರಕ್ತವನ್ನು ಪರೀಕ್ಷಿಸಲಾಗಿದ್ದು ಯಾವುದೇ ಗಂಭೀರ ಕಾಯಿಲೆಗಳಿರುವುದಿಲ್ಲ. ಈ ಬಗ್ಗೆ ಮಕ್ಕಳ ಹೆತ್ತವರಿಗೆ ವೈದ್ಯಾಧಿಕಾರಿಗಳು, ಅಧಿಕಾರಿಗಳೂ ಮನವರಿಕೆ ಮಾಡಿರುತ್ತಾರೆ.


ಈ ಘಟನೆ ಒಂದು ಕೋಮು ಗಲಭೆಯಾಗಿ ಪರಿವರ್ತಿತವಾಗಲು ಕಾರಣ ಸೂಜಿ ಚುಚ್ಚುವ ಮುಖಾಂತರ ಏಡ್ಸ್ ರೋಗವನ್ನು ಹರಡಲಾಗುತ್ತದೆ ಎಂಬುದು. ಆದರಲ್ಲಿಯೂ ಹಿಂದುಗಳ ವಿರುದ್ಧ ಮುಸ್ಲೀಮರು ಹರಡುತ್ತಿದ್ದಾರೆ ಎನ್ನುವ ವದಂತಿಯೇ ಗಂಭೀರ ವಾತಾವರಣ ಏರ್ಪಡಿಸಲು ಕಾರಣವಾಗಿದೆ.

1. ವಾಸ್ತವವಾಗಿ ಈ ಹಿಂದೆಯೇ ಕೆಲವು ಬಾರಿ ಹಬ್ಬ ಹಾಗೂ ಇಂತಹ ಸಂದರ್ಭದಲ್ಲಿ ಸೂಜಿ ಚುಚ್ಚಿದ ಪ್ರಕರಣ ಪ್ರಚಾರದಲ್ಲಿತ್ತು. ಈ ಸಂದರ್ಭದಲ್ಲಿಯೂ ಯೋಜನಾ ಬದ್ಧವಾಗಿ ಮುಸ್ಲಿಂ ವಿರೋದಿ ಬಾವನೆ ಹಬ್ಬಿಸಲಾಗಿತ್ತು. ಆರೋಪಗಳಲ್ಲಿ ವಿಚಾರಿಸಿದಾಗ ಸೂಜಿ ಚುಚ್ಚುವುದು ಸಣ್ಣ ಮಕ್ಕಳ ಆಟಿಕೆಗಳ ಮಾರಾಟದಲ್ಲಿ ಅವರು ತೊಂದರೆ ನೀಡದಂತೆ ತಡೆಯಲು ಹೀಗೆ ಬಳಸಲಾಗುತ್ತಿದೆ ಎಂಬುದಾಗಿ ಸ್ಪಷ್ಟನೆ ನೀಡುತ್ತಾರೆ. ಆದರೆ ಈ ಇಡೀ ಪ್ರಕರಣದಲ್ಲಿ ಹಿಂದು ಕೋಮುವಾದಿ ಸಂಘಟನೆಗಳ ಹಾಗೂ ಅದರ ನಾಯಕರ ಯೋಜಿತ ಅಪಪ್ರಚಾರದಿಂದಾಗಿ ವಾತಾವರಣವನ್ನು ಕೆಟ್ಟದಾಗಿ ಕದಡುವಂತೆ ಮಾಡಿದೆ. ಇತ್ತೀಚಿನ ದಿನದಲ್ಲಿ ತಾಲೂಕಿನ ವಿವಿದೆಡೆ ಭಜರಂಗ ದಳ ಶಾಖೆ ಸ್ಥಾಪಿಸಲಾಗಿದ್ದು ಅಂತರಾಷ್ಟ್ರೀಯ ಹಾಗೂ ರಾಷ್ಟ್ರೀಯ ವಾಗಿ ವಿವಿಧ ಘಟನೆಗಳು ನಡೆದಾಗ ಹಾಗೂ ಗೋದ್ರಾ ಘಟನೆ ನಡೆದ ಸಂದರ್ಭದಲ್ಲಿಯೂ ಯೋಜನಾಬದ್ಧವಾಗಿ ಮುಸ್ಲಿಮ್ ವಿರೋಧಿ ಭಾವನೆಯನ್ನು ಹಬ್ಬಿಸಲಾಗಿತ್ತು. ಕುಂದಾಪುರ ಪುರಸಭೆ ವ್ಯಾಪ್ತಿಯಲ್ಲಿ ಕೆಲವು ವಿಭಾಗದ ಯುವಕರು ಈಗೀಗ ಹೆಚ್ಚಾಗಿ ಭಜರಂಗದಳದೊಂದಿಗೆ ಗುರುತಿಸಿಕೊಂಡಿರುತ್ತಾರೆ ಹಾಗೂ ಉದ್ದ ನಾಮ ಹಾಕಿಕೊಳ್ಳುವುದು ಒಂದು ಪ್ರವೃತ್ತಿಯಾಗಿದೆ.

ಹೆಚ್ಚು ಹೆಚ್ಚು ಧಾರ್ಮಿಕ ಕಾರ್ಯಕ್ರಮದಲ್ಲಿ ತೊಡಗಿಸಿಕೊಳ್ಳುವುದು ಕೇಸರಿ ಬಾವುಟ ಎತ್ತಿಹಿಡಿಯುವುದು. ಬಾಬ್ರಿ ಮಸೀದಿ ಘಟನೆಗೆ ಸಂಬಂದ ಪಟ್ಟ ಟ್ಯಾಬ್ಲೋ ಮಾಡುವುದು ಮುಸ್ಲೀಮರ ವಿರುದ್ಧ ಘೋಷಣೆ ಕೂಗುವುದು ಇತ್ಯಾದಿ ಪ್ರವೃತ್ತಿಗಳು ಸ್ವಲ್ಪ ಹೆಚ್ಚೆಂಬಂತೆ ಕಾಣಿಸಿಕೊಂಡಿರುತ್ತವೆ.

**ಗಲಭೆಯ ಸಂದರ್ಭದಲ್ಲಿ**

ಪುರಸಭೆಯ ಚಿಕ್ಕನಾಲ ರಸ್ತೆಯಲ್ಲಿರುವ ಕೆಲವು ಮುಸ್ಲಿಂರ ಮನೆಗಳನ್ನು ನಿರಂತರವಾಗಿ 5 ಗಂಟೆಗಳ ಕಾಲ ಸುಮಾರು 20-30 ಯುವಕರು ಮನೆಯವರನ್ನು ಓಡಿಸಿ ಮನೆಯನ್ನು ಹಾಗೂ ಮನೆಯ ಫರ್ನಿಚರ್ ಇತ್ಯಾದಿಗಳನ್ನು ಪುಡಿ ಮಾಡಿರುತ್ತಾರೆ. ಬೆಲೆಬಾಳುವ ವಸ್ತುಗಳನ್ನು ಲೂಟಿಗೈದಿರುತ್ತಾರೆ.




- ಕೆಲವು ಮನೆಗಳಿಗೆ ದೂರದಿಂದಲೇ ಕಲ್ಲು ಹೊಡೆದು ಕಿಟಕಿ ಗ್ಲಾಸುಗಳನ್ನು ಒಡದು ಹಾಕಲಾಗಿದೆ. ಮನೆಯ ಹೊರಗೆ ಇಟ್ಟ ದ್ವಿಚಕ್ರವಾಹನ ಇತ್ಯಾದಿಗಳನ್ನು ಸುಡಲಾಗಿದೆ.
- ಕೆಲವಾರು ಆಯ್ದ ಮುಸ್ಲಿಂ ಮನೆಗಳನ್ನು ಲೂಟಿಗೈಯ್ಯಲಾಗಿದೆ.
- ಮುಸ್ಲೀಮರ ಅಂಗಡಿ ಮುಂಗಟ್ಟುಗಳ ಬೋರ್ಡ್ ಇತ್ಯಾದಿಗಳನ್ನು ಕಿತ್ತು ಒಡೆಯಲಾಗಿದೆ.
- ಒಂದು ಮುಸ್ಲಿಂ ಅಂಗಡಿಗೆ ಪೂರ್ತಿಯಾಗಿ ಸೀಮೆ ಎಣ್ಣೆ ಸುರಿದು ಬೆಂಕಿ ಹಾಕಿ ನಾಶ ಮಾಡಲಾಗಿದೆ.
- ಪುರಸಭೆಯಿಂದ ಹೊರಗಿರುವ ಏಕಾಂಗಿ ಮುಸ್ಲಿಂ ಮನೆಯನ್ನು ರಾತ್ರಿ ಸಮಯದಲ್ಲಿ ಗುರುತಿಸಿ ಕಲ್ಲು ಹೊಡೆಯಲಾಯಿತು. ಮನೆಯ ಹೊರಗಿಟ್ಟ ರಿಕ್ಷಾ ಪುಡಿಮಾಡಲಾಯಿತು.
- ಮೀನು ಮಾರಲು ಆಗಮಿಸಿದ ಮುಸ್ಲಿಂ ವ್ಯಕ್ತಿಗಳನ್ನು ಥಳಿಸಲಾಯಿತು.
- ಅಲ್ಲಲ್ಲಿ ರಸ್ತೆಗೆ ತಡೆ ನಿರ್ಮಿಸಿ ವಾಹನ ಸಂಚಾರ ನಿರ್ಬಂದಿಸಲಾಯಿತು.
- ಗಲಬೆ ನಿಯಂತ್ರಿಸಲು ಪ್ರಯತ್ನಿಸಿದ ಪೋಲೀಸರ ಮೇಲು ಹಲ್ಲೆ ನಡೆಸಲಾಯಿತು.

ಈ ಗಲಬೆಯ ಸಂದರ್ಭದಲ್ಲಿಯೂ ಈ ವಿಭಾಗ ಹೆಚ್ಚು ತೊಡಗಿಸಿಕೊಂಡಿದೆ.

ಪ್ರಕರಣ ತಾ. 31 ಮಾರ್ಚ್‌ರಂದು ನಡೆದಿದ್ದ ಸಂಜೆಯಿಂದಲೇ ಉದ್ರಿಕ್ತ ವಾತಾವರಣ ಏರ್ಪಟ್ಟು ಏಪ್ರಿಲ್ 1ರಂದು ಮುಂದುವರೆಯಿತು.

**ವಿ. ಚಂದ್ರಶೇಖರ್**

ತದನಂತರದಲ್ಲಿ 2 ದಿನವು ವಿವಿಧ ಕಡೆ ಅಹಿತಕರ ಘಟನೆ ನಡೆದಿದೆ ಅಂತೆಯೇ ಇತರ ಮೂರು ಇರಿದ ಪ್ರಕರಣವು ವರದಿಯಾಗಿದ್ದರೂ ಖಚಿತತೆ ಇಲ್ಲ.

ಈ ಗಲಭೆಯ ಸಂದರ್ಭದ ವ್ಯಾಪಕ ಪ್ರಯೋಜನ ಪಡೆದು ಮತಾಂಧ ಕೋಮುವಾದಿಗಳು ಹಾಗೂ ದುಷ್ಕರ್ಮಿಗಳು ಅಂಗಡಿ ಲೂಟಿ ಮಾಡುವುದು, ಅಂಗಡಿಗೆ ಕಿಚ್ಚಿಡುವುದು, ಮನೆಗಳಿಗೆ ನುಗ್ಗಿ ಲೂಟಿ ಮಾಡುವುದು ಹಾಗೂ ವಸ್ತುಗಳು ಹಾನಿಗೈದು ಬೆಂಕಿ ಹಾಕಿರುತ್ತಾರೆ. ಈ ಮಧ್ಯದಲ್ಲಿ ಕೈಗೆ ಸಿಕ್ಕಿದ ಅಲ್ಪ ಸಂಖ್ಯಾತರನ್ನು ಹೊಡೆದು, ಹಿಂಸಿಸಲಾಗಿದೆ. ವಾಹನಗಳನ್ನು ಪುಡಿಗೈಯಲಾಗಿದೆ. ರಸ್ತೆಗೆ ಅಡ್ಡಗಟ್ಟಿ ವಾಹನ ಸಂಚಾರಕ್ಕೆ ಅಡ್ಡಿಪಡಿಸಲಾಯಿತು. ಈ ಸಂದರ್ಭದಲ್ಲಿ ವ್ಯಾಪಕ ಅಪಪ್ರಚಾರ ನಡೆಸಿ ಗಲಭೆ ಇನ್ನಷ್ಟು ಹೆಚ್ಚಲು ಈ ಕೋಮುವಾದಿಗಳು ಕಾರಣರಾಗಿದ್ದಾರೆ. ಈ ಪ್ರಕರಣದಲ್ಲಿ ರಾಜಕೀಯ ಬೇಡ, ಹಿಂದುಗಳೆಲ್ಲ ಒಂದೇ, ಕಾಂಗ್ರೇಸಿನವರು ಮುಸ್ಲಿಮರಿಗೆ ಬೆಂಬಲ ನೀಡುತ್ತಾರೆ. ಪೋಲೀಸರು ಮುಸ್ಲಿಮರಿಗೆ ಸಪೋರ್ಟ್ ಮಾಡುತ್ತಾರೆ. ಅಪರಾಧಿಗಳನ್ನು ಪೋಲೀಸರು ರಕ್ಷಿಸುತ್ತಾರೆ. ಇತ್ಯಾದಿ ಪ್ರಚಾರ ಹಬ್ಬಿಸಲಾಯಿತು.

ಪ್ರಕರಣ ಪ್ರಾರಂಭವಾದಂದಿನಿಂದ ತಾಲೂಕಿನ ಎಲ್ಲಾ ಅಲ್ಪ ಸಂಖ್ಯಾತರು ಅತ್ಯಂತ ಹೆದರಿಕೆಯಿಂದ ಜೀವ ಭಯದಿಂದ ಕಾಲ ಕಳೆಯುವಂತಾಯಿತು. ಯಾವುದೇ ಕೋಮುವಾದಿ ಸಂಘಟನೆಗೆ ಒಳಪಡದವರು ಈ ಪ್ರಕರಣದಲ್ಲಿ, ಗಲಭೆಯಲ್ಲಿ ತೊಡಗಿಸಿಕೊಳ್ಳುವಷ್ಟರ ಮಟ್ಟಿಗೆ ಮಾನವೀಯತೆಯನ್ನು ಕಳೆದುಕೊಳ್ಳುವ ಹಂತಕ್ಕೆ ಪ್ರಚಾರ ಪ್ರಕ್ಷೋಭೆ ನಡೆಸಲಾಗಿದೆ. ಗುಜರಾತಿನ ಮಾದರಿಯನ್ನು ಕುಂದಾಪುರದಲ್ಲಿ ಅನುಸರಿಸಲಾಯಿತು. ನೂರಾರು ವರ್ಷಗಳ ಕೋಮು ಸಾಮರಸ್ಯಕ್ಕೆ ಕೊಳ್ಳಿ ಇಡಲಾಯಿತು.

ಆರೋಪಿಗಳನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದ್ದರೂ ಈ ಬಗ್ಗೆ ತೃಪ್ತಿಪಡದೇ ಆರೋಪಿಗಳನ್ನು ರಕ್ಷಿಸಲಾಗುತ್ತಿದೆ ಎಂಬ ಗುಲ್ಲು ಹಬ್ಬಿಸಿದ ಮತಾಂಧರು ಕಾನೂನು ಕ್ರಮದ ಮೇಲೆ ನಂಬಿಕೆ ಇರಲಿಲ್ಲ. ಉದ್ರಿಕ್ತ ಜನ ವಿಭಾಗವು ಕಾನೂನನ್ನು ಕೈಗೆ ತೆಗೆದುಕೊಳ್ಳುವಂತೆ ಗಲಬೆಗೆ ಪ್ರೋತ್ಸಾಹಿಸಿದರೂ ಈ ಮಂದಿ ತಪ್ಪಿತಸ್ಥರಲ್ಲದ ಅಮಾಯಕ ಮುಸ್ಲೀಮರ ಬದುಕನ್ನು ಹಾಳುಗೈಯ್ಯಲು ಕಾರಣರಾದರು. ವಿಶ್ವಹಿಂದು ಪರಿಷತ್, ಬಿಜೆಪಿ ಎಲ್ಲದ್ದಕ್ಕೂ ತಿದಿಯೂದಿದರು. ಈ ಮೂಲಕ ಹಿಂದು ಮತಾಂಧರಿಂದ ರಾಜಕೀಯ ಮಾಡಿದುದು ಸ್ಪಷ್ಟವಾಗಿ ಕಾಣಿಸಿಕೊಂಡಿತು. ಸೂಜಿ ಚುಚ್ಚಿದ ಪ್ರಕರಣಕ್ಕೆ ಇಷ್ಟು ಮೆರಗುಕೊಟ್ಟ ಮತಾಂಧವರಿಗೆ, ಕಂಬಾಲಪಲ್ಲಿಯ ದಲಿತರ ಜೀವಂತ ದಹನ ಯಾವುದೇ ಪ್ರತಿಕ್ರಿಯೆಗೆ ಪ್ರೇರೇಪಿಸಲಿಲ್ಲ, ಕುಮಾರಿ ಅತ್ಯಾಚಾರ ಹಾಗೂ ಕೊಲೆ ಪ್ರಕರಣ ಪ್ರತಿಭಟಿಸುವಂತೆ ಪ್ರೇರೇಪಿಸಲಿಲ್ಲ.

ಬಹಳ ಸಮಯೋಚಿತವಾಗಿ ಪೋಲಿಸ್ ವ್ಯವಸ್ಥೆ ಕಾರ್ಯ ನಿರ್ವಹಿಸಿದ್ದು, ಶಾಂತಿಪ್ರಿಯ ನಾಗರಿಕರು ಶ್ಲಾಘಿಸುವಂತಾಗಿದೆ. ಇಡೀ ಜಿಲ್ಲೆಯ ಶಕ್ತಿಯನ್ನು ಕುಂದಾಪುರದಲ್ಲಿ ತೊಡಗಿಸಿ ಪರಿಸ್ಥಿತಿ ಹತೋಟಿಗೆ ತರಲು ಶ್ರಮಿಸಿದ್ದು, ಪರಿಸ್ಥಿತಿ ವಿಕೋಪಕ್ಕೆ ಹೋಗದಂತೆ ತಡೆಯಲು ಯಶಸ್ವಿಯಾಗಿದ್ದಾರೆ. ಎಲ್ಲಾ ಅಧಿಕಾರಿಗಳು ಇಲ್ಲಿ ಮೊಕ್ಕಾಂ ಹೂಡಿ ಶಾಂತಿಯನ್ನು ಪುನರ್ ಸ್ಥಾಪಿಸಲು ಶ್ರಮಿಸಿದ್ದು ಉತ್ತಮ ಪ್ರಯತ್ನ. ಗಲಭೆ ನಡೆಯುವಾಗ ವಿಡಿಯೋ ಚಿತ್ರೀಕರಣ ಮಾಡಿದ್ದು ಹಲವು ದುಷ್ಕರ್ಮಿಗಳು ಈ ಆಧಾರದಲ್ಲಿ ಬಂಧನಕ್ಕೊಳಪಡುವ ನಿರೀಕ್ಷೆ ಇದೆ. ಇಂತಹ ಸಂದರ್ಭದಲ್ಲಿ ಸಿಪಿಐ(ಎಂ) ಮತ್ತಿತರ ಸಂಘಟನೆಗಳು ಶಾಂತಿ ಕಾಪಾಡುವಲ್ಲಿ ಶ್ರಮಿಸಿದವು. ○

## ಕ್ರೀಯಾಶೀಲ ಚೇತನ ಕಾಂ| ಸಿ.ಆರ್. ಭಟ್

**ಡಾ|| ದುರ್ಗಾಪ್ರಸಾದ್** ವಿರಾಜಪೇಟೆ.

**ನೆನಪು**

ಭಾರತ ಕಮ್ಯುನಿಸ್ಟ್ (ಮಾರ್ಕ್ಸ್‌ವಾದಿ) ಪಕ್ಷದ ಕರ್ನಾಟಕ ರಾಜ್ಯ ಸಮಿತಿ ಸದಸ್ಯರೂ, ಧಾರವಾಡ ಜಿಲ್ಲಾ ಸಮಿತಿ ಕಾರ್ಯದರ್ಶಿಗಳೂ ಆದ ಕಾಂ| ಸಿ.ಆರ್. ಭಟ್‌ರ ನಿಧನದ ವಾರ್ತೆ ಕೇಳುತ್ತಲೇ ನನ್ನ ನೆನಪು ನನ್ನ ವಿದ್ಯಾರ್ಥಿ ಜೀವನದತ್ತ ಸಾಗಿತು.

ಅಂದು ಸುಮಾರು 28-30 ವರ್ಷಗಳ ಹಿಂದೆ (ಇಸವಿ ನೆನಪಿಗೆ ಬರುತ್ತಿಲ್ಲ) ನಾನು ಅಂದು ಮಣಿಪಾಲದಲ್ಲಿ ಮೆಡಿಕಲ್ ಕಾಲೇಜಿನಲ್ಲಿ ಒಬ್ಬ ವಿದ್ಯಾರ್ಥಿ ಯಾಗಿದ್ದೆ. ಮಾರ್ಕ್ಸ್‌ವಾದದಲ್ಲಿ ಆಸಕ್ತರಾಗಿದ್ದ ನಾಲ್ಕೈದು ಜನರ ನಮ್ಮ ಒಂದು ಗುಂಪಿತ್ತು. ಅದಕ್ಕೆ ಅಂದು ಉಡುಪಿಯ ಎಲ್.ಐ.ಸಿಯಲ್ಲಿ ಉದ್ಯೋಗಿಯಾಗಿದ್ದ ಸಿ.ಆರ್.ಭಟ್ ಮತ್ತಿತರರು ಪರಿಚಿತರಾದರು.


ಒಮ್ಮೆ ನಮ್ಮ ಕಾಲೇಜಿನಲ್ಲಿ ಒಂದು ಮುಷ್ಕರ ನಡೆಯಿತು. ನಮ್ಮ ಬಗ್ಗೆ ಮ್ಯಾನೇಜ್‌ಮೆಂಟ್ ದೂರದಲ್ಲಿರುವ ನಮ್ಮ ತಂದೆ ತಾಯಿಯರಿಗೆ ಪತ್ರಗಳನ್ನು ಹಾಕಿತ್ತು. ಮ್ಯಾನೇಜ್‌ಮೆಂಟ್ ಬರೆದ ಸುಳ್ಳುಗಳಲ್ಲದೇ ನಾವೇಕೆ ಮುಷ್ಕರ ನಡೆಸುತ್ತಿದ್ದೇವೆಂದು ವಿವರಿಸುವ ವಿದ್ಯಾರ್ಥಿಗಳ ಪರವಾದ ಒಂದು ಪತ್ರ ನಾನೇ ಸಿದ್ಧಗೊಳಿಸಿದೆವು. ಆದರೆ ಅದರ ಎರಡು ಸಾವಿರ ಪ್ರತಿಗಳು ಬೇಕು. ಏನು ಮಾಡುವುದು? ನಾವು ಈ ಹಿರಿಯ ಸಂಗಾತಿಗಳಲ್ಲಿಗೆ ಓಡಿದೆವು. ಅವರು ತಾನು ಸಹಾಯ ಮಾಡುವುದಾಗಿ ನಮಗೆ ಭರವಸೆ ನೀಡಿ ಅವರ ಆಫೀಸಿಗೆ ನಮ್ಮನ್ನು ಕರೆದೋಯ್ದರು. ಅವರಲ್ಲಿ ಸೈಕ್ಲೊ ಸ್ಟೈಲ್ ಯಂತ್ರವಿತ್ತು. ಅದನ್ನು ಕೈಯಲ್ಲಿ ತಿರುವಿ ಪ್ರತಿಯೊಂದು ಪ್ರತಿ ಪಡೆಯಬೇಕು. ಆದರೆ ಅವರು ಅವರ ಸಂಗಾತಿಗಳು ರಾತ್ರೆಯೆಲ್ಲಾ ಕುಳಿತು ನಮಗಾಗಿ ಈ ಕೆಲಸ ಮಾಡಿಕೊಟ್ಟರು. ಅಂದು ಅವರ ಸಹಾಯಕ್ಕಾಗಿ ನಾವು ಅವರ, ಅವರ ಸ್ನೇಹಿತರ ಬಗ್ಗೆ ಪಟ್ಟ ಸಂತೋಷ ಇಂದಿಗೂ ನನ್ನ ನೆನಪಿನಲ್ಲಿ ಹಚ್ಚ ಹಸುರಾಗಿಯೇ ಉಳಿದಿದೆ.

ಅನಂತರ ಸ್ಟೂಡೆಂಟ್ಸ್ ಫೆಡರೇಶನ್ನಿನ (ಎಸ್.ಎಫ್.ಐ)ನ ಮೊದಲನೇ ಸಮ್ಮೇಳನ ತುಮಕೂರಿನಲ್ಲಿ ನಡೆದ ಸಂದರ್ಭ. ಭಾರತದ ವ್ಯವಸ್ಥೆ ಯಾವ ರೀತಿ ಗುತ್ತೇದಾರಿ ಬಂಡವಾಳಶಾಹಿ ಪಾಳೆಯಗಾರಿ ಹಿಡಿತದಲ್ಲಿದೆ, ಅವರು ಹೇಗೆ ವಿದೇಶೀ ಸಾಮ್ರಾಜ್ಯಶಾಹಿಗಳ ಸಹವರ್ತಿಗಳಾಗಿದ್ದಾರೆ ಎನ್ನುವುದನ್ನು ವಿವರಿಸಿ ಬರೆದ

ಪುಟ 10 ಕ್ಕೆ

# ಒಡಲ ಕಿಚ್ಚಿನಲಿ ಹೆಣ ಬೆಂದೋ....

**ಮಾಧ್ಯಮ ಲೋಕದ ಭಿನ್ನ ಪಯಣಿಗ ಪಿ.ಸಾಯಿನಾಥ್. ಮಾಧ್ಯಮಗಳು ವಿಮರ್ಶೆಗೆ ಮೀರಿದ್ದು ಎಂದು ಎಲ್ಲರೂ ಭಾವಿಸಿದ್ದಾಗ ಅದನ್ನು ದಂತಗೋಪುರದಿಂದ ಎಳೆದು ತಂದು ಜನರ ಕಟೆಕಟೆಯಲ್ಲಿ ನಿಲ್ಲಿಸಿದವರು ಸಾಯಿನಾಥ್. ಹಲವಾರು ಇಂಗ್ಲೀಷ್ ಪತ್ರಿಕೆಗಳ ಪ್ರಮುಖ ಹುದ್ದೆಯಲ್ಲಿದ್ದ ಅವರು ಜನಪರ ಆಶಯಗಳಿಗೆ ದನಿ ನೀಡಿದವರು. ಕೊನೆಗೆ ಮಾಧ್ಯಮದ ಮೂಲಕ ಜನರ ಸಮಸ್ಯೆ ಬಿಂಬಿಸಲೆಂದೇ ಇದ್ದ ಹುದ್ದೆ ತೊರೆದರು. ಭಾರತದ ಹಳ್ಳಿಗಾಡುಗಳಲ್ಲಿ ಸುತ್ತುತ್ತಾ ಬಡಜನರ ಧಾರುಣ ಕಥೆಗಳನ್ನು ಬೆಳಕಿಗೆ ತಂದರು. ಈ ಎಲ್ಲವೂ 'ಎವೆರಿಬಡಿ ಲವ್ಸ್ ಎ ಗುಡ್ ಡ್ರೌಟ್' ಎಂಬ ಪುಸ್ತಕದಲ್ಲಿ ಅಡಕವಾಗಿದೆ. ನಂತರ ಭಾರತದ ದಲಿತರ ನೋವನ್ನು ಎತ್ತಿ ತೋರಿಸಲು 'ದಿ ಹಿಂದೂ' ಪತ್ರಿಕೆಗಾಗಿ ದೇಶವನ್ನು ಸುತ್ತುತ್ತಿದ್ದಾರೆ. ಅವರು ಬಯಲಿಗಿಟ್ಟ ಭಾರತ ಒಡಲು ಕಲುಕುವಂತಹದ್ದು. ಅಂಬೇಡ್ಕರ್ ಜನ್ಮದಿನ ಅಂಗವಾಗಿ ಕರ್ನಾಟಕದ ಕಲ್ಬುರ್ಗಿಯ ಒಂದು ಪ್ರಕರಣ ಕುರಿತ ಇವರ ಒಂದು ಲೇಖನವನ್ನು ಕೃತಜ್ಞತೆಯಿಂದ ಇಲ್ಲಿ ಅನುವಾದಿಸಿ ಪ್ರಕಟಿಸುತ್ತಿದ್ದೇವೆ.**



*ಬಡವಾರು ಸತ್ತಾರೆ ಸುಡಲಕ್ಕೆ ಸೌದಿಲ್ಲೋ*
*ಒಡಲ ಕಿಚ್ಚಿನಲಿ ಹೆಣ ಬೆಂದೋ !*
*ಶಿವ ಶಿವಾ....*
*ಬಡವರಿಗೆ ಸಾವ ಕೊಡಬೇಡೋ*

*(ಜಾನಪದ ಗೀತೆ)*

**ಮಹಾಂಗಾವ ಕ್ರಾಸ್, ಗುಲ್ಬರ್ಗಾ:** ಬಂಡಿಯಪ್ಪನ ಹೆಣ ಇಡೀ ದಿನ ಊರ ಹೊರಗೆ ಅರ್ಧ ಸುಟ್ಟು ಅರ್ಧ ಹೂತ ಸ್ಥಿತಿಯಲ್ಲಿ ಇತ್ತು.

ಈ ಪ್ರದೇಶದಲ್ಲಿ ಸತ್ತವರನ್ನು ಬಡವರು ಸುಡುವುದಕ್ಕೆ ಹೋಗುವುದಿಲ್ಲ. ಗುಂಡಿ ತೆಗೆದು ಹೂಳುತ್ತಾರೆ. ಜಾತಿ ಏಣಿಯಲ್ಲಿ ಮೇಲಿರುವವರು ಮಾತ್ರ ಹೆಣ ಸುಡುತ್ತಾರೆ. ಆದರೆ ಸುಶೀಲಾಬಾಯಿಯ ಗಂಡನಿಗೆ ಎರಡೂ ಗತಿ ಬಂದೊದಗಿತ್ತು. ಹೆಣ ಹೂಳಲು ಹೋದಾಗ ಮೇಲ್ಜಾತಿಯವರು ಬೆದರಿಕೆ ಒಡ್ಡಿ ಮೈಮೇಲೆ ಬೀಳಲು ಸಹಾ ಸಿದ್ದವಾಗಿದ್ದರು. ಹೆಣವನ್ನು ಪೂರ್ತಿ ಸುಡಲು ಸಾಕಾಗುವಷ್ಟು ಸೌದೆ ಹಾಗೂ ಸೀಮೆಎಣ್ಣೆ ಇಲ್ಲದಿದ್ದರಿಂದ ಹೆಣ ಅರ್ಧಂಬರ್ಧ ಬೆಂದಿತ್ತು. ಆದ್ದರಿಂದ ಸ್ವಲ್ಪ ದೂರದಲ್ಲಿ ಬಂಡಿಯಪ್ಪನ ಮನೆಯ ಬಳಿ ಇದ್ದವರು ಹೆಣ ಹೂಳಲು ಗುಂಡಿ ತೋಡಲು ಸಹಾಯಹಸ್ತ ಚಾಚುವರೆಗೆ ಹೆಣ ಇದ್ದಲ್ಲಿಯೇ ಇತ್ತು. ಬಂಡಿಯಪ್ಪ ಒಬ್ಬ ದಲಿತ. ಹೈದ್ರಾಬಾದ್ ಕರ್ನಾಟಕದಲ್ಲಿ ಬದುಕಿದ್ದರೂ ಅಷ್ಟೇ-ಸತ್ತರೂ ಅಷ್ಟೇ ಜಾತಿ ಬೆನ್ನತ್ತಿ ಬರುತ್ತದೆ.

ಬಂಡಿಯಪ್ಪನ ಪತ್ನಿ ಅವಮಾನ ಹಾಗ ಆಘಾತದಿಂದ ಇನ್ನೂ ಚೇತರಿಸಿಕೊಂಡಿಲ್ಲ. 'ಆತ ಸತ್ತದ್ದೇ ವಿಚಿತ್ರವಾಗಿ. ಬಂಡಿಯಪ್ಪನಿಗಿದ್ದ ಹೈಡ್ರಾಸಿಲಿಸ್ ರೋಗಕ್ಕೆ ನಕಲಿ ವೈದ್ಯನೊಬ್ಬ ಕೊಟ್ಟ ಇಂಜೆಕ್ಷನ್ ಮಹಾನ್ ರೋಗಕ್ಕೆ ದಾರಿ ಮಾಡಿತ್ತು. ಆದರೆ ನಾನು ಯಾರನ್ನು ದೂರಲಿ ಎಂದು ಸುಶೀಲಾ ಬಾಯಿ ಗೋಳಾಡುತ್ತಾಳೆ. ಡಾಕ್ಟರು ನಾನು ಕೊಟ್ಟ ಇಂಜಕ್ಷನ್‌ನಿಂದ ಆತ ಸತ್ತಿಲ್ಲ ಎಂದು ಪ್ರಮಾಣ ಮಾಡಿ ಹೇಳುತ್ತಾನೆ. ಬಂಡಿಯಪ್ಪ ಸತ್ತ ನಂತರವೂ ಅವಮಾನದ ಪ್ರಕರಣ ಮುಂದುವರೆಯುತ್ತಲೇ ಹೋಯಿತು. 'ನಾವು ಆತನನ್ನು ನಾಲೆಯ ಬಳಿ ಹೂಳಲು ಹೋದೆವು. ಆದರೆ ನಾಲೆಯ ಬಳಿ ಇದ್ದ ಸವರ್ಣೀಯರು ಇದಕ್ಕೆ ವಿರೋಧ ವ್ಯಕ್ತಪಡಿಸಿದರು. ಹಲ್ಲೆಗೇ ಮುಂದಾದರು'

**ಅಸ್ಪೃಶ್ಯತೆ ಸಾವಿನ ನಂತರವೂ...**

'ಹೂಳುವುದರಲ್ಲಿ ತಕರಾರಿರಲಿಲ್ಲ. ಲಿಂಗಾಯತರೂ ಸಹಾ ಹೆಣವನ್ನು ಹೂಳುತ್ತಾರೆ. ಆದರೆ ತಕರಾರು ಇದ್ದದ್ದು ಹೆಣ ದಲಿತನದ್ದು ಎಂಬುದಕ್ಕೆ' ಎನ್ನುತ್ತಾಳೆ ಸುಶೀಲಾಳ ಸಹೋದರಿ ಶಾಂತಾಬಾಯಿ. ಒಟ್ಟಿನಲ್ಲಿ ಹೇಳಬೇಕೆಂದರೆ ದಲಿತನ ಹೆಣವನ್ನು ತಮ್ಮ ಜಾಗದ ಹತ್ತಿರ ಹೂಳಿದರೆ ಅದು ಜಾತಿಗೆಡಿಸುತ್ತದೆ, ಅಸ್ಪೃಶ್ಯತೆ ಸಾವಿನ ನಂತರವೂ ಬೆನ್ನತ್ತುತ್ತದೆ.

ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳಲ್ಲಿ ಸ್ಮಶಾನ ಎನ್ನುವುದು ದಲಿತರ ಪಾಲಿಗೆ ಇಲ್ಲ. ದೇಶದ ಬಹುತೇಕ ಕಡೆಯೂ ಇದೇ ಪರಿಸ್ಥಿತಿ ಇದೆ. ಸ್ಮಶಾನದಲ್ಲಿ ದಲಿತರ ಶವಗಳನ್ನು ಹೂಳಲು ಬಿಡದ ಅನೇಕ ಪ್ರಕರಣಗಳನ್ನು ದಲಿತರ ಕುರಿತ ಮಾನವ ಹಕ್ಕುಗಳ ಆಯೋಗ ಪಟ್ಟಿ ಮಾಡಿದೆ. ಆದರೆ ಗುಲ್ಬರ್ಗಾ ಮತ್ತು ಬೀದರ್‌ನಲ್ಲಿ ಪರಿಸ್ಥಿತಿ ಇನ್ನಷ್ಟು ಗಂಭೀರವಾಗಿದೆ. ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡಿರುವವರಿಗೂ ಈ ಸಮಸ್ಯೆ ಇದೆ. ಬೀದರ್ ಜಿಲ್ಲೆಯ ನಂದಾಗಾಂವದಲ್ಲಿ ಅರಣ್ಯ ಪ್ರದೇಶದ ನೆಲವನ್ನು ಒತ್ತುವರಿ ಮಾಡಿ ಕ್ರೈಸ್ತರ ಸ್ಮಶಾನ ರೂಪಿಸಲಾಗಿದೆ. ಇಲ್ಲಿಯ ತಹಶೀಲ್ದಾರರು ಈಗ ಈ ಮೂರು ಎಕರೆ ಸ್ಮಶಾನದಲ್ಲಿ ಹೆಣ ಹೂಳಲು ಅನುಮತಿ ನೀಡಿದ್ದಾರೆ. ಈಗ ಇದು ಧರ್ಮದ ಹಿಡಿತದಲ್ಲಿಲ್ಲ.

**ಪಿ.ಸಾಯಿನಾಥ್**

**ಕಾಯ್ದಿರಿಸಿದ ಹಕ್ಕು**

ಹೆಣ ಹೂಳಲು ಸಮಸ್ಯೆ ಎದುರಾಗಿದ್ದು ಮೂರು ವರ್ಷಗಳಿಂದೀಚೆಗೆ ಎನ್ನುತ್ತಾರೆ ಮಹಾಂಗಾವ ಕ್ರಾಸ್‌ನ ಬಂಗಮ್ಮ. ಜನವಾದಿ ಮಹಿಳಾ ಸಂಘಟನೆಯ ಕಾರ್ಯಕರ್ತರಾದ ಬಂಗಮ್ಮ ಮತ್ತು ಶಾಂತಮ್ಮ ಹೇಳುವ ಪ್ರಕಾರ ಈ ಊರಿನಲ್ಲಿ 20 ಲಿಂಗಾಯತರ ಮನೆ 15 ಹರಿಜನರ ಮನೆ ಇತ್ತು. ಆದರೆ ಹರಿಜನರು ಮನೆಯ ಸಂಖ್ಯೆ 30 ಕ್ಕೇರಿದಾಗ ಲಿಂಗಾಯತರು ಆತಂಕಕ್ಕೆ ಒಳಗಾದರು. ಮಾಹಾಂಗಾಂವ ಗ್ರಾಮದಿಂದ ಬಂದ ದಲಿತ ಕುಟುಂಬಗಳು ಊರ ಹೊರಗೆ ನೆಲೆಸಿದವು. 'ಕ್ರಾಸ್' ಎನ್ನುವ ಹೆಸರು ಮತ್ತೆ ಸೇರ್ಪಡೆಯಾಯಿತು. ಈ ಹಳ್ಳಿಯಲ್ಲಿ ದಲಿತರು ಹಳ್ಳಿಯ ಹೊರಗೆಮಾತ್ರ ಬದುಕುವುದಲ್ಲ ಅವರಿಗೆ ಸ್ಮಶಾನದ ಜಾಗವನ್ನು ಬಳಸುವ ಹಕ್ಕನ್ನು ನಿರಾಕರಿಸಲಾಗಿದೆ. ಇನ್ನು ಹಳ್ಳಿಯಲ್ಲಿ ಹೆಣದ ಮೆರವಣಿಗೆ ತೆಗೆಯುವುದು ಊಹೆಗೂ ನಿಲುಕದ ಮಾತು. ಹೆಣದ ಮೆರವಣಿಗೆ ಎಂಬುದು ಇಲ್ಲಿ ಮೇಲ್ಜಾತಿಯವರ ಕಾಯ್ದಿರಿಸಿದ ಹಕ್ಕು.

ಇಲ್ಲಿರುವ ಹರಿಜನ ಕುಟುಂಬಗಳಿಗೆ ಭೂಮಿ ಎಂಬುದೇನೂ ಇಲ್ಲ ಎನ್ನುತ್ತಾರೆ ರಂಗಮ್ಮ. ಆಕೆಯ ಗಂಡ ಹಾಗೂ ಮಗ ಇಬ್ಬರೂ ಸಹಾ ಇದೇ ಗ್ರಾಮದಲ್ಲಿದ್ದರೂ ಈಕೆಗೆ ಅವರ ದರ್ಶನಭಾಗ್ಯ ತೀರಾ ಅಪರೂಪ. ಇಬ್ಬರೂ ತಮ್ಮ ಧಣಿಗಳ ಮನೆಯ ಚಾವಣಿಯಲ್ಲಿ ಮಲಗಬೇಕು. ಬೇರೆಯವರ ಹೊಲದಲ್ಲಿ ಕೆಲಸ ಸಿಗುವುದೂ ಅಪರೂಪ. ಕೃಷಿ ಕಾರ್ಮಿಕರಿಗಾಗಿ ಅಪರೂಪಕ್ಕೆ ಒಮ್ಮೆ ಬೇರೆಯವರ ಹೊಲದಲ್ಲಿ ಕೆಲಸ ಸಿಕ್ಕರೂ ಇಡೀ ದಿನದ ದುಡಿಮೆಗೆ ರಂಗಮ್ಮನಿಗೆ ಸಿಗುವುದು ಕೇವಲ 15 ರೂ. ಮಾತ್ರ. ಕೇವಲ 10 ಸಾವಿರ ರೂ.ಗೆ ಮಗನನ್ನು ಜೀತದಾಳಾಗಿ ಕೊಡಲಾಯಿತು. ಗಂಡನಿಗೆ ಸಿಕ್ಕಿದ್ದು ಈ ಹಣದೊಂದಿಗೆ ವರ್ಷಕ್ಕೆ 6 ಚೀಲ ಜೋಳ ಮಾತ್ರ. ಇದಕ್ಕಾಗಿ ಬೆಳಗಿನಿಂದ ರಾತ್ರಿಯವರೆಗೂ ಬಿಡುವಿಲ್ಲದ ದುಡಿತ. ಮಹಿಳೆಯರೇ ಮನೆ ಮುನ್ನಡೆಸುವ ಕುಟುಂಬಗಳೇ ಮಹಾಂಗಾವ ಕ್ರಾಸಿನಲ್ಲಿ ಹೆಚ್ಚು. ಬಡತನ ಎಂಬುದು ಮನೆಯ ಗಂಡಸರನ್ನು ಊರಿಂದ ಹೊರಗೆ ಹಾಕುತ್ತದೆ. ಗಂಡಸರು ಮುಂಬೈನಲ್ಲಿಯೋ ಇತರ ಊರುಗಳಲ್ಲೋ ದುಡಿದು ಸಂಪಾದಿಸಬೇಕಾದ ಸ್ಥಿತಿ ಇದೆ. ರಂಗಮ್ಮನ ಗಂಡನಿಗೆ ಹೊರಗೆ ಹೋಗಿ ದುಡಿಯುವಂತೆಯೂ ಇಲ್ಲ. ಏಕೆಂದರೆ ಆತ ಜೀತದಾಳು. ಅತಿ ಕನಿಷ್ಟ ಕೂಲಿ, ಮೇಲ್ಜಾತಿಯವರ ನಿರಂತರ ಫಲವಿಲ್ಲದ ಸೇವೆ, ಜೀತ ದಲಿತರನ್ನು ಸಹಾ ಹಸಿವಿನಲ್ಲಿ, ಭಯದಲ್ಲಿ ನರಳುವಂತೆ ಮಾಡಿವೆ. ನನ್ನ ಗಂಡನಿಗೆ ನಾನು ದಿನಾ ಮನೆಯಿಂದಲೇ ರೊಟ್ಟಿ ಕೊಂಡೊಯ್ಯುತ್ತೇನೆ. ಏಕೆಂದರೆ ಧಣಿಯ ಮನೆಯಲ್ಲಿ ತಿನ್ನಲೂ ಏನೂ ಕೊಡುವುದಿಲ್ಲ ಎಂದು ರಂಗಮ್ಮ ನಿಟ್ಟುಸಿರಿಡುತ್ತಾಳೆ.

**ಬಿಟ್ಟಿ ಸೇವೆ ನಿಲ್ಲಿಸಿದ ನಂತರ...**

"ಬಹುಶಃ ಹೆಣ ಹೂಳುವ ಸಂಬಂಧ ಸಮಸ್ಯೆ ಆರಂಭವಾಗಿದ್ದು ನಾವು ಮೇಲ್ಜಾತಿಯವರ ಹೆಣ ಹೂಳುವ ಬಿಟ್ಟಿ ಸೇವೆ ನಿಲ್ಲಿಸಿದ ನಂತರ" ಎಂದು ರಂಗಮ್ಮ ಹೊಸ ವಿಷಯವನ್ನು ತಣ್ಣಗೆ ಬಿಡಿಸಿಡುತ್ತಾಳೆ. ದಲಿತರು ಮಾಡುವ ಎಷ್ಟೋ ಬಿಟ್ಟಿ ಚಾಕರಿಯಲ್ಲಿ ಹೆಣ ಹೂಳುವುದೂ ಒಂದು. 1980 ರಿಂದ ಇದನ್ನು ಪ್ರಶ್ನಿಸಲು ಆರಂಭಿಸಿದ್ದೇ ಸಮಸ್ಯೆಗೆ ನಾಂದಿ ಹಾಡಿದವು. 'ಇದು ಸತ್ಯ' ಎನ್ನುತ್ತಾರೆ ಪಕ್ಕದ ಶಾಲೆಯ ಅಧ್ಯಾಪಕ ನಾಗೇಂದ್ರಪ್ಪ. ಜಾತಿಯಿಂದ ಲಿಂಗಾಯತನಾದರೂ ಸಹಾ ಬಂಡಿಯಪ್ಪನ ಶವ ಪ್ರಕರಣದಲ್ಲಿ ನಾಗೇಂದ್ರಪ್ಪ ಜನವಾದಿ ಮಹಿಳಾ ಸಂಘಟನೆಯ ಬೆಂಬಲಕ್ಕೆ ನಿಂತಿದ್ದಾರೆ. ಮುಂದೆ ಸೂಕ್ತ ಸ್ಮಶಾನಕ್ಕೆ ಹೋರಾಟ ನಡೆದಾಗಲೂ ಇವರ ಬೆಂಬಲ ಅಪಾರ. ದಲಿತರ ಮಧ್ಯೆ 'ಮೇಷ್ಟ್ರು ನಾಗೇಂದ್ರಪ್ಪ ನಮ್ಮ ಬೆಂಬಲಕ್ಕಿದ್ದಾರೆ' ಎಂಬ ಧೈರ್ಯ ಬಂದಿದೆ. ನಾಗೇಂದ್ರಪ್ಪ ಪ್ರಕಾರ ಶಿಕ್ಷಣ ಎಂಬುದು ದಲಿತರಲ್ಲಿ ಪ್ರತಿಭಟನೆಗೆ ಧೈರ್ಯವನ್ನು ತುಂಬಿದೆ. ದಲಿತರಲ್ಲಿ ಹೆಣ ಹೂಳುವ ಉಪಜಾತಿ ಇದೆ. ಅವರು ಕುಲಕಸುಬಾಗಿ ಹೆಣ ಹೂಳುವುದನ್ನು ಮಾಡಲೇಬೇಕೆಂದು ನಂಬಿದವರು. ಆದರೆ ಈ ಜಾತಿಯ ಯುವಜನಾಂಗ ಶಿಕ್ಷಣ ಪಡೆದರು. ನಂತರ ತಮ್ಮ ಹಿರಿಯರನ್ನು ಈ ಕಸುಬು ಬಿಡುವಂತೆ ಪ್ರೇರೇಪಿಸಿದರು. ಮೇಲ್ಜಾತಿಯವರು ಸಿಟ್ಟಾಗಲು ಇದು ಸಾಕಾಯಿತು.

**ಹೆಣ ನೀಡಿ, ಹೆಣ ಹೂಳಿ...**

ಮಹಾಂಗಾಂವ ಕ್ರಾಸ್‌ನಲ್ಲಿ ಅದು ಹೊಸ ಕಾಲೋನಿಯಾದ್ದರಿಂದ ಪ್ರತಿಭಟನೆ ಇತ್ತೀಚಿಗೆ ಬಂದಿದ್ದರೂ ಆಳಂದ ತಾಲೂಕಿನ ಕುದ್ಮದ್ ಗ್ರಾಮದಲ್ಲಿ 8 ವರ್ಷದ ಹಿಂದೆಯೇ ದಲಿತ ಸಂಘರ್ಷ ಸಮಿತಿ ನೇತೃತ್ವದಲ್ಲಿ ಹೋರಾಟ ನಡೆಸಿ ದಲಿತರು ಗೆದ್ದರು. ಅಲ್ಲಿಯೂ ಸಹಾ ಪುಟ್ಟ ಬಾಲಕಿ ಸತ್ತಾಗ ಈ ವಿವಾದ ಸ್ಫೋಟಿಸಿತು. ದಲಿತರು ಹೆಣ ಹೂಳುವ ಪ್ರದೇಶ ಮೊದಲು ಬ್ರಾಹ್ಮಣರ ಕೈಯಲ್ಲಿತ್ತು. ನಂತರ ಲಿಂಗಾಯತರಲ್ಲೊಬ್ಬ ಇದನ್ನು ಕೊಂಡ. ದಲಿತರು ಹೆಣ ಹೂಳಬಾರದು ಎಂದು ಫರ್ಮಾನು ಹೊರಡಿಸಿದ. ಅವನಿಗೆ ಬೇಕಾದದ್ದು ಹಣ. ದಲಿತರ ಸ್ಮಶಾನಕ್ಕೆ ಸರ್ಕಾರದ ಹಣವಿದೆ. ನೀವೂ ಹೆಣ ಹೂಳಬೇಕೆಂದರೆ ಆ ಹಣ ನನಗೆ ಕೊಡಿ ಎಂದು ಹೇಳಿ ಬಾಲಕಿಯ ಶವ ಹೂಳಲು ಅಡ್ಡಿ ನಿಂತ. ಈ ಹಣವಂತ ಲಿಂಗಾಯತರಿಗೆ ಏನಿಲ್ಲವೆಂದರೂ 200 ಎಕರೆ ಭೂಮಿ ಇದೆ. ಆದರೆ ದಸಂಸ ಬಗ್ಗಲಿಲ್ಲ. ಪೋಲೀಸರವರೆಗೆ ಪ್ರಕರಣ ಹೋಯಿತು. ಪೋಲೀಸ್ ರಕ್ಷಣೆಯಲ್ಲಿ ಅಲ್ಲಿ ಬಾಲಕಿಯ ಹೆಣ ಹೂಳಲಾಯಿತು. ಮತ್ತೆ ಈ ವಿಜಯಕ್ಕೆ ಶಿಕ್ಷಣವೇ ಕಾರಣ. ನಾವು ಶಿಕ್ಷಣ ಪಡೆದಂತೆ ಈ ಪಾಳೇಗಾರಿ ಮೌಲ್ಯಗಳನ್ನು ಪ್ರಶ್ನೆ ಮಾಡಲು ಆರಂಭಿಸಿದೆವು. ಮೇಲ್ಜಾತಿಯ ಕೆಲವು ಪ್ರಗತಿಪರರೂ ಬೆಂಬಲಕ್ಕೆ ನಿಂತರು. ಬಾಲಕಿ ಹೆಣ ಹೂಳಲು ನಮಗೆ ಹಕ್ಕಿದೆ ಎಂಬುದು ಇಂತಹವರಿಗೆ ಮನವರಿಕೆ ಆಯಿತು' ಎನ್ನುತ್ತಾರೆ ಹೋರಾಟಗಾರರಲ್ಲೊಬ್ಬ.

**ದಕ್ಕಿದ ಹಕ್ಕು...**

ಈ ಪ್ರಕರಣದಲ್ಲಿ ವಿಜಯಕ್ಕೆ ಅದೊಂದೇ ಕಾರಣವಲ್ಲ. ಈ ಹಿಂದೆ ನಡೆಸಿದ ಹಲವಾರು ಸಂಘರ್ಷಗಳೂ ಇದಕ್ಕೆ ಕಾರಣವಾಗಿದೆ. ಹಳ್ಳಿಯ ಟೀ ಅಂಗಡಿಗಳಲ್ಲಿ ಇದ್ದ ಎರಡು ಲೋಟ ಪದ್ಧತಿ ಪ್ರಕರಣ ನೋಡೋಣ. ದಲಿತ ಸಂಘರ್ಷ ಸಮಿತಿ ನೇತೃತ್ವದ ಪ್ರತಿಭಟನಾಕಾರರು ಎರಡು ಗಾಜಿನ ಲೋಟಗಳನ್ನು ಹೊಡೆದು ಹಾಕಿದರು. ಟೀ ಅಂಗಡಿ ಮಾಲೀಕ 3 ದಿನ ಜೈಲಿನ ಕಂಬಿ ಎಣಿಸಬೇಕಾಯಿತು. ದಸಂಸ ಹಾಗೂ ಕಮ್ಯುನಿಸ್ಟ್ ನೇತೃತ್ವದ ಕೃಷಿ ಕೂಲಿಕಾರ ಸಂಘ ನಡೆಸಿದ ಮಾತುಕತೆ ನಂತರ ಎರಡು ಲೋಟದಂತಹ ಪದ್ಧತಿ ಕೈಬಿಡಲಾಯಿತು.

ಹನುಮಾನ ಮಂದಿರದ್ದೂ ಇದೇ ಕಥೆ. ಹನುಮಂತನ ಪೂಜೆಯ ಹಕ್ಕು ಮೇಲ್ಜಾತಿಯವರಿಗೆ ಮಾತ್ರ. ಆಳಂದ ತಾಲೂಕಿನ ವಾಗ್ದರಿಯ ಹುನುಮಂತನ ದೇವಸ್ಥಾನದಲ್ಲಿ ಕುಳಿತ ಲಿಂಗಾಯತರು 'ಒಂದಿಷ್ಟು ಜಾತಿ ಪದ್ಧತಿ ಇರಲೇಬೇಕು. ದಲಿತರನ್ನೇನಾದರೂ ಮನೆಯೊಳಗೆ ಬಿಟ್ಟುಕೊಂಡರೆ ಅವರುಸೀದಾ ಅಡುಗೆ ಕೋಣೆಗೇ ನುಗ್ಗುತ್ತಾರೆ ಅಷ್ಟೇ' ಎನ್ನುತ್ತಾರೆ. ದಲಿತರಿಗೆ ಈಗಲೂ ಸಹಾ ಹನುಮಂತನ ದೇವಸ್ಥಾನಕ್ಕೆ ಇಲ್ಲಿ ಪ್ರವೇಶವಿಲ್ಲ.

ಪುಟ 10 ಕ್ಕೆ



# ಪಂಪಸೆಟ್ ಮೀಟರ್ ಅಳವಡಿಕೆ ವಿರೋಧಿಸಿ ರಾಂಪುರ ಬಂದ್

ರಾಜ್ಯ ಸರ್ಕಾರ ನೀರಾವರಿ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸುವುದನ್ನು ವಿರೋಧಿಸಿ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನ ರಾಂಪುರದಲ್ಲಿ ಏಪ್ರಿಲ್ 6 ರಂದು ರೈತರು ಯಶಸ್ವಿ ಬಂದ್ ಆಚರಿಸಿ ಬೃಹತ್ ಪ್ರತಿಭಟನೆ ವ್ಯಕ್ತಪಡಿಸಿದರು. ನೀರಾವರಿ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸುವುದನ್ನು ವಿರೋಧಿಸಿ ರಾಜ್ಯಾದ್ಯಂತ ಏಪ್ರಿಲ್ ಒಂದರಿಂದ ಒಂದು ವಾರ ಕಾಲ ಪ್ರತಿಭಟನೆ ನಡೆಸಲು ಕರ್ನಾಟಕ ಪ್ರಾಂತ ರೈತ ಸಂಘ ನೀಡಿದ ಕರೆಯ ಹಿನ್ನೆಲೆಯಲ್ಲಿ ಈ ಹೋರಾಟ ನಡೆಯಿತು.

**ಒಂದು ವಾರ ಕಾಲ ಧರಣಿ**

ಮೊಳಕಾಲ್ಮೂರು ತಾಲ್ಲೂಕು ಚಿತ್ರದುರ್ಗ ಜಿಲ್ಲೆಯ ಬಹಳ ಹಿಂದುಳಿದ ತಾಲ್ಲೂಕು. ಹತ್ತಿ, ಜೋಳ, ಸೂರ್ಯಪಾನ, ಶೇಂಗಾ ಬೆಳೆಗಳು ಕಳೆದ ಮೂರು-ನಾಲ್ಕು ವರ್ಷಗಳಿಂದ ವಿಫಲವಾದವು. ರೈತರು ಮಾಡಿದ ಖರ್ಚು ಸಿಗಲಿಲ್ಲ. ಹಾಗಾಗಿ ಇಲ್ಲಿನ ರೈತರು ಈಗ ದಾಳಿಂಬೆ ಹಣ್ಣಿನ ಬೆಳೆ ಬೆಳೆಯಲು ಪ್ರಾರಂಭಿಸಿದ್ದಾರೆ. ಇಂತಹ ಸಂಕಷ್ಟದ ನಡುವೆಯೂ ಸರ್ಕಾರ ರೈತರ ಹಿತ ಕಾಪಾಡುವ ಬದಲು ವಿಶ್ವಬ್ಯಾಂಕ್‌ನ ಆಣತಿಯ ಮೇರೆಗೆ ನೀರಾವರಿ ಪಂಪ್‌ಸೆಟ್ಟುಗಳಿಗೆ ಮೀಟರ್ ಅಳವಡಿಸಿ ರೈತರನ್ನು ಸುಲಿಗೆ ಮಾಡಲು ಹೊರಟಿದೆ. ವಿದ್ಯುತ್ ಬೆಲೆ ಏರಿಕೆ, ಬಾಕಿ ವಸೂಲಿ, ಅಕ್ರಮ ಸಂಪರ್ಕ ಮತ್ತು ಸಕ್ರಮಗೊಳಿಸುವ ನೆಪದಲ್ಲಿ ದಂಡ ವಸೂಲಿ ಮುಂತಾದ ಕ್ರಮ ಕೈಗೊಳ್ಳಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ(ಕೆಪಿಟಿಸಿಎಲ್) ಮುಂದಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಹೋರಾಟ ತೀವ್ರಗೊಳ್ಳುತ್ತಿರುವಂತೆ ರಾಂಪುರದ ಪ್ರಾಂತ ರೈತ ಸಂಘ ಮತ್ತು ನೀರಾವರಿ ಪಂಪ್‌ಸೆಟ್ ವಿದ್ಯುತ್ ಬಳಕೆದಾರರ ಹೋರಾಟ ಸಮಿತಿ ನೇತೃತ್ವದಲ್ಲಿ ರೈತರು ಹೋರಾಟಕ್ಕಿಳಿದಿದ್ದಾರೆ.

ಇಲ್ಲಿನ ಕಾರ್ಯಕರ್ತರು ದೇವಸಮುದ್ರ ಹೋಬಳಿ ಯ 25 ಹಳ್ಳಿಗಳಲ್ಲಿ ಕರಪತ್ರ ಹಂಚಿ ಬಹಿರಂಗ ಸಭೆಗಳ ಮೂಲಕ ಪ್ರಚಾರ ನಡೆಸಿದರು. ಏಪ್ರಿಲ್ ಒಂದರಂದು ಬೊಮ್ಮದೇವರ ಹಳ್ಳಿಯಿಂದ ಮೂರು ಟ್ರಾಕ್ಟರ್ ಮೂಲಕ ಮತ್ತು 11 ಹಳ್ಳಿಗಳಿಂದ ಬಂದ ಸುಮಾರು 200 ರೈತರು ರಾಂಪುರದ ಗ್ರಾಮ ಪಂಚಾಯ್ತಿ ಕಛೇರಿಯಿಂದ ಮೆರವಣಿಗೆ ಹೊರಟು ಕೆಪಿಟಿಸಿಎಲ್ ಕಛೇರಿ ಮುಂದೆ ಧರಣಿ ಪ್ರಾರಂಭಿಸಿದರು. ಕೆಪಿಟಿಸಿಎಲ್ ನ ಉಪವಿಭಾಗದ ಎಂಜಿನಿಯರ್‌ರಿಗೆ ಮನವಿ ಪತ್ರ ಸಲ್ಲಿಸಿದರು.

**ಮೀಟರ್ ಸುಟ್ಟರು**

ಏಪ್ರಿಲ್ 3 ರಂದು ನಾಗಸಮುದ್ರದ ಜೋಗಶೆಟ್ಟಿ ತೋಟದಿಂದ ಮೀಟರ್ ಕಿತ್ತು ತಂದು ತಮ್ಮಟೆ ಬಾರಿಸುತ್ತಾ ರಾಂಪುರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಕೆಪಿಟಿಸಿಎಲ್ ಕಚೇರಿ ಮುಂದೆ ಮೀಟರ್‌ಗೆ ಕಟ್ಟಿಗೆ ಹಾಕಿ ಸುಟ್ಟರು. ಪೋಲೀಸರು ಈ ಸಂದರ್ಭದಲ್ಲಿ ಮುಖಂಡ ಡಿ.ಎಂ.ಮಲಿಯಪ್ಪನವರನ್ನು ಬಂಧಿಸಲು ಮುಂದಾದರೂ ರೈತರ ತೀವ್ರ ಪ್ರತಿಭಟನೆಯಿಂದಾಗಿ ಅದು ಸಾಧ್ಯವಾಗಲಿಲ್ಲ. ಕೆಪಿಟಿಸಿಎಲ್‌ನ ಅಧಿಕಾರಿಗಳು ಮೀಟರ್ ಅಳವಡಿಸಲು ಪಂಪ್‌ಸೆಟ್ ಬಳಿ ಬಂದರೆ ರೈತರು ಅವರನ್ನು ಬಂಧಿಸುವುದಾಗಿ ರೈತರು ಎಚ್ಚರಿಕೆ ಕೊಟ್ಟರು.

**ರಾಂಪುರ ಬಂದ್**

5 ದಿನಗಳ ತೀವ್ರ ಹೋರಾಟದ ನಂತರ ಏಪ್ರಿಲ್ 6 ರಂದು ರಾಂಪುರ ಬಂದ್ ಭಾರಿ ಯಶಸ್ವಿಯಾಗಿ ಜರುಗಿತು. ಬೆಂಗಳೂರು, ಬಳ್ಳಾರಿ ರಸ್ತೆಯ ಮೂಲಕ ತಂಡೋಪತಂಡವಾಗಿ ಬಂದ ರೈತರು ತಮಟೆಗಳನ್ನು ಹೊಡೆಯುತ್ತಾ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಬಂದ್ ಕರೆಯಿಂದಾಗಿ ಆಟೋಗಳು, ಸಿನಿಮಾ ಮಂದಿರ, ವ್ಯಾಪಾರ ವಹಿವಾಟು ಸ್ಥಗಿತಗೊಂಡಿತ್ತು. ಕೆಪಿಟಿಸಿಎಲ್ ಕಛೇರಿ ಮುಂದೆ ಘೋಷಣೆ ಕೂಗಿದ ರೈತರು ಸರ್ಕಾರದ ರೈತ ವಿರೋಧಿ ನೀತಿಯನ್ನು ಖಂಡಿಸಿದರು. ಸೆಕ್ಷನ್ ಅಧಿಕಾರಿಗೆ ಮನವಿ ಸಲ್ಲಿಸಲಾಯಿತು. ಈ ಚಳುವಳಿಯ ನೇತೃತ್ವವನ್ನು ಎ.ಹನುಮಂತ ರೆಡ್ಡಿ, ಎಸ್.ಟಿ.ಈಶ್ವರಪ್ಪ, ತಿಮ್ಮಣ್ಣ ಕರಡಿ ಹಳ್ಳಿ, ತಿಮ್ಮರೆಡ್ಡಿ, ತಿಪ್ಪೇಸ್ವಾಮಿ, ಕೆ.ಜಿ. ಗಂಗಣ್ಣ, ಚಂದ್ರಣ್ಣ ಮುಂತಾದವರು ವಹಿಸಿದ್ದರು.

# ಒಡಲ ಕಿಚ್ಚಿನಲಿ ಹೆಣ ಬೆಂದೋ....



ಪುಟ 9 ರಿಂದ

ಮಹಾಂಗಾಂವ ಕ್ರಾಸ್‌ನಲ್ಲಿಯೂ ಸಹಾ ಹೋರಾಟಕ್ಕೆ ಜಯ ಸಿಕ್ಕಿದೆ. ಬಂಡಿಯಪ್ಪನ ಹೆಣದ ಸಂಬಂಧ ಪ್ರತಿಭಟನೆ ನಡೆಸಿದ್ದೇ ತಡ ಇಲ್ಲಿನ ತಹಶೀಲ್ದಾರ್ 7 ದಿನದಲ್ಲಿ ದಲಿತರಿಗಾಗಿ ಸ್ಮಶಾನ ರೂಪಿಸಲು ಸರ್ಕಾರದಿಂದ ಹಣ ಕೊಡಿಸುತ್ತೇನೆ ಎಂದು ಆಶ್ವಾಸನೆ ನೀಡಿದರು. ಆದರೆ ಮರುದಿನ ಹೇಳಿಕೆಯೇ ಬದಲಾಗಿತ್ತು. ಸ್ಮಶಾನಕ್ಕಾಗಿ ಸರ್ಕಾರದ ಬಳಿ ಹಣ ಇಲ್ಲ ಎಂದು ಇದೇ ತಹಶೀಲ್ದಾರ್ ಹೇಳಿದ. ಮೇಲ್ಜಾತಿಯವರು ತಹಶೀಲ್ದಾರ್‌ನ ತಲೆ ತಿಕ್ಕಿದ್ದರು. ಆದರೆ ಜನವಾದಿ ಮಹಿಳಾ ಸಂಘಟನೆ ಸುಮ್ಮನಿರಲಿಲ್ಲ. ಎರಡು ಎಕರೆ ಸ್ಮಶಾನ ಭೂಮಿಗೆ ಹಣ ನೀಡಲೇಬೇಕಾಯಿತು. ಆದರೆ ಈ ಹೊಸ ಸಮಸ್ಯೆ. ಲಿಂಗಾಯತರೊಬ್ಬರಿಂದ ಸ್ಮಶಾನಕ್ಕಾಗಿ ಜಮೀನು ಕೊಳ್ಳಲು ಮುಂದಾದಾಗ ಅವರ ಮೇಲೂ ಜಾತಿಯ ಇತರರು ಅದನ್ನು ಮಾರದಿರಲು ಒತ್ತಡ ತಂದರು. ಆದರೆ ಪ್ರಾಧ್ಯಾಪಕ ನಾಗೇಂದ್ರಪ್ಪ ಹಾಗೂ ಇತರರು ಅವರಿಂದ ಒಪ್ಪಿಗೆ ಪತ್ರ ಪಡೆದಾಗಿತ್ತು. ಈ ಒಪ್ಪಿಗೆ ಪತ್ರದ ವಿರುದ್ಧ ಕೆಲಸ ಮಾಡಿದರೆ ನಿಮಗೇ ತೊಂದರೆ ಎಂದು ಜಮೀನು ಮಾರಲು ಮುಂದಾಗಿದ್ದವರಿಗೆ ತಾಕೀತು ಮಾಡಲಾಯಿತು. ಒಂದೆಡೆ ಜಾತಿಯ ಜನ ಇನ್ನೊಂದೆಡೆ ಪ್ರತಿಭಟನೆಗೆ ಮುಂದಾಗಿರುವ ಜೆಎಂಎಸ್ ನವರು. ಕೊನೆಗೆ ಜಮೀನು ಮಾರಾಟಕ್ಕೆ ಆತ ಮುಂದಾದ.

ಸರ್ಕಾರ ಸ್ಮಶಾನ ಭೂಮಿಗಾಗಿ ಕೊಟ್ಟ ಹಣ ಕಡಿಮೆ ಬಿತ್ತು. ಆದರೆ ಮಹಾಂಗಾಂವ ಕ್ರಾಸ್‌ನ ಪ್ರತಿಯೊಬ್ಬ ದಲಿತರೂ ಉಳಿದ ಹಣ ಕೊಡಿಸಿಕೊಟ್ಟರು ಎನ್ನುತ್ತಾರೆ ಸಿಪಿಎಂನ ಗುಲ್ಬರ್ಗಾ ಜಿಲ್ಲಾ ಕಾರ್ಯದರ್ಶಿ ಮಾರುತಿ ಮಾನ್ಪಡೆ. ಆನಂತರ ಅನಿರೀಕ್ಷಿತ ಘಟನೆ ನಡೆಯಿತು. ದಲಿತ ಮಹಿಳೆಯರು ಸ್ಮಶಾನ ಭೂಮಿಮಾರಾಟ ಮಾಡಿದ ಸ್ವಾಮಿಗೆ ಸಾರ್ವಜನಿಕ ಸನ್ಮಾನ ಮಾಡಿದರು. ಇದೇ ಜೆಎಂಎಸ್ ಮಹಿಳೆಯರು ಸ್ಮಶಾನ ಭೂಮಿಯನ್ನು ಸರಿಯಾಗಿ ಗುರುತುಮಾಡಿಸಿದರು. ಬಂಡಿಯಪ್ಪನ ಹೆಣಕ್ಕೆ ಸರಿಯಾದ ಅಂತ್ಯ ಸಂಸ್ಕಾರ ನೀಡಲು ಸುಶೀಲಾ ಬಾಯಿಯ ಬೆಂಬಲಕ್ಕೆ ನಿಂತರು. ಈಗ ನಮಗೆ ಆಗೀಗ ಸೇರಿ ಚರ್ಚೆ ನಡೆಸಲು ಸಮುದಾಯ ಭವನ ಬೇಕು ಎನ್ನುತ್ತಾಳೆ ಬಂಡಮ್ಮ. ಈಗ ಅಧಿಕಾರಿಗಳು ಅದನ್ನು ನೀಡಲು ನಿರಾಕರಿಸಿದರೆ ಸ್ವಾಮಿಯನ್ನು ಸಂಪರ್ಕಿಸಿ ಜಾಗ ಪಡೆಯುವುದು ಇವರಿಗೆ ಗೊತ್ತು.

ಅನು: ಮೋನಪ್ಪಯ್ಯ

# ..........'ಚಿಗಳ್ಳಿ ದೀಪ'ದ ಪವಾಡ

ಪುಟ 4 ರಿಂದ

ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಲಾಯಿತು. ಆದರೆ ಈವರೆಗೆ ಜಿಲ್ಲಾಧಿಕಾರಿಯವರು ಅವಕಾಶ ಮಾಡಿಕೊಡದಿರುವುದು ಖಂಡನೀಯ. ಸವಾಲು ಸ್ವೀಕರಿಸುವಂತೆ ಆಹ್ವಾನ ಕೊಟ್ಟ ನರೇಂದ್ರ ನಾಯಕ್‌ರೊಂದಿಗೆ ಪರೀಕ್ಷಿಸಲು ಇರುವ ಡಿಗ್ರಿ 'ಅರ್ಹತೆ' ಕೇಳಿರುವುದಾಗಿಯೂ, ಅದಕ್ಕೆ ನರೇಂದ್ರ ನಾಯಕರು ಇಂಧನ ಇಲ್ಲದೆ ದೀಪ ಉರಿಯುತ್ತಿದೆಯೇ ಎಂದು ಹೇಳಲು ಯಾವುದೇ ಅರ್ಹತೆ ಬೇಕಿಲ್ಲವೆಂದೂ, ಹೀಗೆ ದೀಪ ಉರಿಯುತ್ತಿದೆ ಎಂದು ಹೇಳುವವರ ಅರ್ಹತೆಯನ್ನು ಮೊದಲು ವಿಚಾರಿಸುವಂತೆಯೂ ಸಲಹೆ ಕೊಟ್ಟಿರುವುದಾಗಿ ತಿಳಿದುಬಂದಿದೆ.

**ಪವಾಡದ ದೀಪ ಯಾಕೆ ಸುಳ್ಳು?**

ಚಿಗಳ್ಳಿಯ ದೀಪದ ಪವಾಡ ಬಹುತೇಕ ಬಯಲಾದಂತಾಗಿದೆ. ಈ ಬಗ್ಗೆ ಉತ್ತರ ಕನ್ನಡದಲ್ಲಿ ಅನೇಕ ಕಾರ್ಯಕ್ರಮ ಮಾಡಿ ವಿವರಿಸಲಾಗಿದೆ. ಪತ್ರಿಕಾ ಹೇಳಿಕೆಯ ಮೂಲಕ, ಪತ್ರಿಕಾಗೋಷ್ಠಿಯ ಮೂಲಕ ಈ ಘಟನೆಯ ಹಿಂದಿನ ಹಿತಾಸಕ್ತಿಯನ್ನು ಬಯಲು ಮಾಡಲಾಗಿದೆ.

1. ಯಾವುದೇ ಇಂಧನವಿಲ್ಲದೆ ದೀಪ ಉರಿಯಲು ಸಾಧ್ಯ ಇಲ್ಲ.(ಸೀಮೆ ಎಣ್ಣೆ ಇಲ್ಲದೆ 23 ವರ್ಷದಿಂದ ದೀಪ ಉರಿಯುತಿದೆ ಎಂದಾದರೆ ಬೇರೆ ಯಾವುದೋ ಇಂಧನ ಇರಬಹುದು. ಅದರ ಶೋಧ ಆದರೆ ಈ ದೇಶದ ಇಂಧನ ಸಮಸ್ಯೆಯನ್ನು ಪರಿಹರಿಸಬಹುದಲ್ಲವೇ?

2. ಮೂರು ದೀಪದಲ್ಲಿ ಒಂದು ದೀಪವನ್ನಾದರೂ ಪರೀಕ್ಷೆಗೆ ಕೊಡಬಹುದಾಗಿತ್ತು. ಆದರೆ ಅದನ್ನು ಕೊಡುತ್ತಿಲ್ಲ. ಅತ್ಯಂತ ದೂರದಲ್ಲಿ ಜಾಳಿಗೆಯ ಮಧ್ಯೆ ಇರುವ ದೀಪವನ್ನು ನೋಡಲು ಮಾತ್ರ ಕೊಡುತ್ತಿರುವುದು, ಅವನ್ನು ಮುಟ್ಟಿ ನೋಡಲು ಅವಕಾಶ ಕೊಡದಿರುವುದು ಸಂಶಯಕ್ಕೆ ಕಾರಣ ಆಗಿದೆ.

3. ಲಾಟೀನಿನ ಮೇಲಿನ ಗ್ಲಾಸ್ ಕಪ್ಪಾಗಿದ್ದು, ಬಹುತೇಕ ಇಂಧನ ಇದ್ದಾಗ ಈ ಬಣ್ಣ ಬರುತ್ತದೆ.

4. ಕಳೆದ ಹತ್ತುವರ್ಷದಲ್ಲಿ ಈ ಲಾಟೀನು ಬದಲಾದ ಸೂಚನೆ ಕಾಣುತ್ತಿದೆ. 1992 ಲ್ಲಿ ತೆಗೆದ ಫೋಟೋ ಮತ್ತು 2000 ರಲ್ಲಿ ತೆಗೆದ ಫೋಟೋ(ಫೋಟೋ - ಶಿವಾನಂದ...) ವನ್ನು ಸೂಕ್ಷ್ಮವಾಗಿ ನೋಡಿದಾಗ ಲಾಟೀನಿನ ಕೆಳಭಾಗ (ಹಾಕಿದ ಬೆಸುಗೆ, ಡಿಸೈನ್ ಇತ್ಯಾದಿ) ಬದಲಾಗಿದ್ದು ಕಾಣುತ್ತದೆ.

5. ಹಿಂದೆ ಎಣ್ಣೆ ಇಲ್ಲದೆ ದೀಪ ಉರಿಯುತ್ತಿದೆ ಎನ್ನುತ್ತಿದ್ದವರು ಪೇಜಾವರ ಶಿಷ್ಯ ಬಂದು ಕೈಯಲ್ಲಿ ಲ್ಯಾಂಪ್ ಎತ್ತಿ ನೋಡಿ ಸೀಮೆ ಎಣ್ಣೆಯ ವಾಸನೆ ಬರುತ್ತಿದೆ ಎಂದಾಗ ಯಾಕೆ ಸುಮ್ಮನಾದರು. ಮತ್ತು ಎಣ್ಣೆ ಇದೆ ಆದರೆ ಈ ಎಣ್ಣೆ ಹಾಕಿದ್ದು ಕೂಡಾ 23 ವರ್ಷಗಳ ಹಿಂದೆ ಎಂದು ಯಾಕೆ ಮಾತು ಬದಲಾಯಿಸಿದರು.

ಈವರೆಗೆ ಮುಗ್ಧ ಜನರ 'ನಂಬಿಕೆ'ಯ ಹೆಸರಲ್ಲಿ ಕತ್ತಲೆಯಲ್ಲಿಟ್ಟವರ ಬಣ್ಣ ಬಯಲಾಗುತ್ತಿದೆ. ದೀಪದ ಹಿಂದಿನ ಪವಾಡ ಬಯಲಾಗುತ್ತದೆ.

**ಉರಿವ ಲಾಟೀನು ಹಿಂದೂಧರ್ಮದ ಪ್ರತೀಕವೇ?**

ಚಿಗಳ್ಳಿಯ ದೀಪವನ್ನು ಪರೀಕ್ಷಿಸಬೇಕೆಂದು ಕೇಳಿದವರನ್ನು ಧರ್ಮದ್ರೋಹಿಗಳೆಂದೂ, ಇದು ಹಿಂದೂಧರ್ಮದ ಮೇಲಿನ ಧಾಳಿಯೆಂದೂ ಪ್ರಚಾರ ಮಾಡುತ್ತಿದ್ದಾರೆ. ಹಾಗಾದರೆ ಸೀಮೆಎಣ್ಣೆ ಲಾಟೀನ್ ನಮ್ಮ ಪರಂಪರೆಯೇ? ನಮ್ಮಲ್ಲಿ ನಂದಾದೀಪದ ಬಳಕೆ ಇದೆ. ತೆರೆದ ಹಣತೆಯಲ್ಲಿ, ಎಳ್ಳೆಣ್ಣೆ, ಹರಳೆಣ್ಣೆ, ತೆಂಗಿನ ಎಣ್ಣೆ ಇತ್ಯಾದಿಗಳನ್ನು ಬಳಸಿ ದೇವರೆದುರು ಉರಿಸುತ್ತಾರೆ. ದಿನನಿತ್ಯ ಬತ್ತಿ ಬದಲಾಯಿಸುವ, ಎಣ್ಣೆ ಬದಲಾಯಿಸುವ ಮೂಲಕ ಅದರ ಶುದ್ಧತೆಯನ್ನು ಕಾಯ್ದುಕೊಳ್ಳುತ್ತಾರೆ. ಆದರೆ ಈ ಲ್ಯಾಟೀನು? ಇದು 19ನೇ ಶತಮಾನದ ಕೊನೆಗೆ ವಿದೇಶದಿಂದ ಬಂದಿದ್ದು. ಅದೂ ಸೀಮೆ ಎಣ್ಣೆಯ ಲಾಟೀನನ್ನು ಎಲ್ಲಾದರೂ ದೇವರಿಗೆ ಹಚ್ಚಿಡುತ್ತಾರೆಯೇ? ನಾವಂತೂ ನೋಡಿಲ್ಲ. ಇದ್ದರೆ ಈ ಗುತ್ತಿಗೆದಾರರು ಹೇಳಬೇಕು. ಸೀಮೆಎಣ್ಣೆ ತುಂಬಿದ ಲಾಂದ್ರಕ್ಕೆ ದೇವರಪೂಜೆಗಾಗಿ ಬಳಸುವ ಪರಂಪರೆಗೆ ಎಷ್ಟುವರ್ಷ?

# ಕ್ರೀಯಾಶೀಲ ಚೇತನ ಕಾಂ। ಸಿ.ಆರ್. ಭಟ್...

ಪುಟ 8 ರಿಂದ

ಪುಸ್ತಿಕೆಯೊಂದರ ಹಸ್ತ ಪ್ರತಿಯನ್ನು ನಮಗೆ ತೋರಿದರು. ನಾವು ಅದನ್ನು ತುಂಬಾ ಇಷ್ಟಪಟ್ಟೆವು. ಎಸ್.ಎಸ್.ಐ. ಹೆಸರಿನಲ್ಲಿ ಅವನ್ನು ಪ್ರಕಟಿಸಲು ಅನುಮತಿ ಬೇಡಿದೆವು. ಅವರು ಸಂತೋಷದಿಂದ ಒಪ್ಪಿ ನಮ್ಮ ಉತ್ಸಾಹಕ್ಕೆ ಸ್ಫೂರ್ತಿ ನೀಡಿದರು. ಮಂಗಳೂರಿನಲ್ಲಿ ಮೋರ್ಗನ್ ಗೇಟಿನ ಬಳಿ ಆ ಕಾಲದಲ್ಲಿ ಈಗ ಪಕ್ಷದ ರಾಜ್ಯ ಕಾರ್ಯದರ್ಶಿ [illegible] ಶ್ರೀಯಾನ್ ಒಡೆತನದ ಒಂದು ಪ್ರೆಸ್ ಇತ್ತು. ಅಲ್ಲಿ ಈ ಪುಸ್ತಕವನ್ನು ಮುದ್ರಿಸಲಾಯಿತು. ಆ ಸಂದರ್ಭ ಕಾಂ। ಶ್ರೀಯಾನ್‌ರು ನಮಗೆ ತುಂಬಾ ಸಹಾಯ ಮಾಡಿದರು, ಪ್ರೋತ್ಸಾಹ ನೀಡಿದ್ದರು. 'ಭಾರತದರ್ಶನ' ಎಂಬ ತಲೆ ಬರಹದಡಿ ಪ್ರಕಟವಾದ ಈ ಪುಸ್ತಿಕೆಯನ್ನು ತುಮಕೂರಿನಲ್ಲಿ ನಡೆದ ಮೊದಲ ಎಸ್.ಎಫ್.ಐ ಸಮ್ಮೇಳನದಲ್ಲಿ [illegible] ಮಾಡಿ ಮಾರಾಟ ಮಾಡಲಾಯಿತು.

ಅನಂತರ 30 ವರ್ಷಗಳ ನಂತರ ಇತ್ತೀಚಿಗೆ ಹಂಪಿ ವಿಶ್ವವಿದ್ಯಾಲಯದ ವಿದ್ವಾಂಸರಾದ ನನ್ನ ಪರಿಚಿತರು ತಮ್ಮಲ್ಲಿಂದ ಪ್ರಕಟವಾಗಬೇಕಾದ ವಿಶ್ವಕೋಶವೊಂದಕ್ಕೆ 'ಸೋವಿಯತ್ ಕ್ರಾಂತಿಯ ಬಗ್ಗೆ ಒಂದು ಪ್ರಬುದ್ಧ ಲೇಖನ ಬೇಕು ಬರೆಯಬಲ್ಲ ಶಕ್ತರು ಯಾರಿದ್ದಾರೆ?" ಅದೂ ಅಲ್ಪಕಾಲದಲ್ಲೇ ಎಂದು ನನ್ನನ್ನು ವಿಚಾರಿಸಿದರು. ನನ್ನ ತಲೆಗೆ ಪಕ್ಕನೆ ಹೊಳೆದದ್ದು ಕಾಂ। ಸಿ.ಆರ್. ಭಟ್‌ರ ಹೆಸರು. ಕಾಂ। ಗುರುಶಾಂತ್‌ರನ್ನು ವಿಚಾರಿಸಿದಾಗಲೂ ಅವರು ಭಟ್‌ರವರನ್ನೇ ಹೇಳಿದರು. ಅನಂತರ ದೂರವಾಣಿಯ ಮೂಲಕ ಭಟ್‌ರನ್ನು ಸಂಪರ್ಕಿಸಿ ನಮ್ಮ ಹಿಂದಿನ ಉಡುಪಿಯ ಸಂಬಂಧದ ನೆನಪು ಮಾಡಿಕೊಟ್ಟೆ. ಅನಂತರ ಲೇಖನ ಕೇಳಿದಾಗ ಅವರು ತಕ್ಷಣವೇ ಒಪ್ಪಿಕೊಂಡು ಅತ್ಯಂತ ಕಮ್ಮಿ ಸಮಯವಿದ್ದರೂ ನಿಗದಿತ ದಿನಸಕ್ಕೆ ತಲುಪುವಂತೆ ಬರೆದು ಕೊಟ್ಟರು. ವಿಶ್ವವಿದ್ಯಾಲಯದ ವಿದ್ವಾಂಸರೂ ಅದರಿಂದ ತೃಪ್ತರಾದರು.

ಕ್ರಿಯಾಶೀಲ ಚೇತನದ ರೂಪವಾದ ಭಟ್ಟರ ನಿಧನದ ವಾರ್ತೆ ತಿಳಿಯುತ್ತಿದ್ದಂತೆ ಮೇಲಿನ ಘಟನೆಗಳು ನನ್ನ ನೆನಪಿಗೆ ಬಂದವು.


# ಪ್ರಗತಿಪರ ಯುವಜನ ಚಳುವಳಿಗೆ ಹೊಸ ಆಯಾಮ

**ದ.ಕನ್ನಡ ಜಿಲ್ಲೆಯಾದ್ಯಂತ ಡಿವೈಎಫ್ಐ ಜನಪ್ರಿಯ. ಹಲವಾರು ವೈವಿಧ್ಯಮಯ ಕಾರ್ಯಕ್ರಮ, ಹೋರಾಟಗಳಿಂದ ಯುವಜನರನ್ನು ಒಗ್ಗೂಡಿಸಿ ಪ್ರಗತಿಪರ ಶಕ್ತಿಯಾಗಿ ರೂಪಿಸುವಲ್ಲಿ ಗಮನಾರ್ಹ ಸಾಧನೆಯಿದೆ. ಅದೂ ಮತೀಯವಾದಿಗಳು, ಕ್ರಿಮಿನಲ್ ಗ್ಯಾಂಗ್‌ಗಳು ಯುವಜನರನ್ನು ಹೆಚ್ಚು ಹೆಚ್ಚಾಗಿ ದಿಕ್ಕು ತಪ್ಪಿಸುತ್ತಿರುವ ಕರಾವಳಿ ಜಿಲ್ಲೆಯಲ್ಲಿ ಪ್ರಜಾಸತ್ತಾತ್ಮಕ ಯುವಜನ ಆಂದೋಲನ ಬೆಳೆದ ಬಗೆಯತ್ತ ಇಣುಕುನೋಟ ಹರಿಸಿದ್ದಾರೆ ಜಿಲ್ಲಾ ಕಾರ್ಯದರ್ಶಿ ಸುನೀಲ್ ಕುಮಾರ್ ಬಜಾಲ್.**

ಮಾರ್ಚ್ 17, 18-2002 ಅವಿಭಜಿತ ದ.ಕ. ಜಿಲ್ಲೆಯ ಯುವಜನರ ಹಾಗೂ ಜನಸಾಮಾನ್ಯರ ಮಧ್ಯೆ ಹಬ್ಬದ ವಾತಾವರಣ. ಜಿಲ್ಲೆಯ ಅಮಾಯಕ ಜನತೆ, ದೀನದಲಿತರ, ದೌರ್ಜನ್ಯಕ್ಕೆ ಒಳಗಾದವರ ನಾಯಕನಾದರೆ, ಇನ್ನೊಂದೆಡೆ ಯುವಜನರ ಆಶಾಕಿರಣವಾಗಿ ಡಿವೈಎಫ್ಐ ಸಂಘಟನೆಯ 9ನೇ ಜಿಲ್ಲಾ ಸಮ್ಮೇಳನ. ಸುಮಾರು 2 ತಿಂಗಳ ವ್ಯಾಪಕ ತಯಾರಿಯ ನಡುವೆ ಅತ್ಯಂತ ಯಶಸ್ವಿಯಾಗಿ, ಅದ್ದೂರಿಯಾಗಿ ಸಮ್ಮೇಳನವು ಜಿಲ್ಲಾ ಕೇಂದ್ರವಾದ ಮಂಗಳೂರಿನ ಪುರಭವನದಲ್ಲಿ ನಡೆಯಿತು.

ಸಮ್ಮೇಳನದ ಯಶಸ್ಸಿನ ಹಿಂದೆ ಜಿಲ್ಲೆಯ ಸಾಮಾನ್ಯ ಜನತೆಯಿಂದ ಹಿಡಿದು ಎಲ್ಲಾ ಜನವಿಭಾಗಗಳ ಜನರೂ ಇದ್ದದ್ದು ಈ ಸಮ್ಮೇಳನದ ವಿಶೇಷತೆಯಾಗಿದೆ. ಇವೆಲ್ಲದರ ಭಾಗವಹಿಸುವಿಕೆಯ ಹಿಂದೆ ಡಿವೈಎಫ್ಐ ನ ಇತಿಹಾಸವಿದೆ. ದೇಶದಲ್ಲಿ ಡಿವೈಎಫ್ಐ ಸ್ಥಾಪನೆಯಾದಾಗ ದ.ಕ ಜಿಲ್ಲೆಯಲ್ಲ ಶ್ವೇತಪತಾಕೆ ಹಾರಾಡಿತ್ತು. ಅಂದು ಜಿಲ್ಲೆಯಲ್ಲಿ ಸಣ್ಣ ಸಂಘಟನೆಯಾಗಿದ್ದರೂ, ಜನತೆಯ ಪ್ರಶ್ನೆ ಬಂದಾಗ ನಿರ್ಣಾಯಕ ಪಾತ್ರವಹಿಸಿ ಯಶಸ್ವಿಯಾದ ಪರಂಪರೆಯಿದೆ. ಆದರೆ ಕಳೆದ ಸಮ್ಮೇಳನದಿಂದ ಇಂದಿನವರೆಗೆ 3 ವರ್ಷಗಳಲ್ಲಿ ಡಿವೈಎಫ್ಐನ ಸದಸ್ಯತ್ವ, ಪ್ರಭಾವ, ಕಾರ್ಯಕ್ರಮ, ಹೋರಾಟ, ಕಾರ್ಯಕರ್ತರ ಸಂಖ್ಯೆ ಹೆಚ್ಚಿದೆ. ದಿನಂಪ್ರತಿ ಸಮಸ್ಯೆಗಳು ಉದ್ಭವಿಸಿದಾಗ ಡಿವೈಎಫ್ಐ ಸಂಘಟನೆಯೇ ಮುಂದೆ ನಿಂತು ಸಮಸ್ಯೆಯನ್ನು ಬಗೆಹರಿಸಿದೆ. ಖಾಸಗಿ ಬಸ್ ಮಾಲಕರು ಬಸ್ ದರವನ್ನು ಏರಿಸಿದಾಗ ವಾಪಸ್ ಪಡೆಯುವಲ್ಲಿ ಪ್ರಬಲ ಹೋರಾಟ, ಗೂಡಂಗಡಿ ಎತ್ತಂಗಡಿ ಮಾಡಿದಾಗ ಸ್ಪಂದನ, ರಾತ್ರಿ ಕಾಲೇಜನ್ನು ಉಳಿಸುವಲ್ಲಿ ಇಡೀ ರಾಜ್ಯದ ಸಮಸ್ಯೆ ಪರಿಹಾರವಾಗುವಲ್ಲಿ ಪ್ರಮುಖ ನಾಯಕತ್ವ, ಕುದುರೆಮುಖ ಗಣಿಗಾರಿಕೆ ಮುಚ್ಚಬೇಕೆಂಬ ಪರಿಸರವಾದಿಗಳಿಂದ ಪ್ರಬಲ ಪ್ರತಿಪಾದನೆ ಬಂದಾಗ, ಅದರ ಸತ್ಯಾಸತ್ಯತೆ ತಿಳಿದು ವೈಜ್ಞಾನಿಕ ಕಾರಣಗಳನ್ನು ನೀಡಿ, ಉನ್ನತ ಮಟ್ಟದ ನಿಯೋಗವೊಂದು ಸ್ವತಃ ಪ್ರದೇಶಕ್ಕೆ ಭೇಟಿ ನೀಡಿ ಸತ್ಯಶೋಧನಾ ವರದಿಯನ್ನು ತಯಾರಿಸಿ, ಇಡೀ ರಾಜ್ಯದಲ್ಲೇ ಮೆಚ್ಚುಗೆಗೆ ಪಾತ್ರವಾಗಿದೆ. ವಿದೇಶೀ ನಿಧಿಯ ಹಿನ್ನೆಲೆಯಿರುವ ಪರಿಸರವಾದಿಗಳ ವಿರುದ್ಧ ಸೈದ್ಧಾಂತಿಕ ಹೋರಾಟವನ್ನು ಮಾಡಿದ್ದರಿಂದ ಮಧ್ಯಮ ವರ್ಗದವರ ಬೆಂಬಲವನ್ನು ಪಡೆಯಲು ಸಾಧ್ಯವಾಗಿದೆ. ಇಷ್ಟು ಮಾತ್ರವಲ್ಲದೆ ಸ್ಥಳೀಯ ಮಟ್ಟದಲ್ಲಿ ಆಸ್ಪತ್ರೆ, ನೀರು, ರಸ್ತೆ, ಡಾಮರೀಕರಣ, ಬಸ್ಸು, ದಾರಿದೀಪದ ಪಶ್ನೆ ಬಂದಾಗ ಡಿವೈಎಫ್ಐ ಮುಂಚೂಣಿಯಲ್ಲಿದ್ದುಕೊಂಡು ಸಮಸ್ಯೆಯನ್ನು ಪರಿಹರಿಸುವಲ್ಲಿ ಪ್ರಮುಖ ಪಾತ್ರವಹಿಸಿದೆ. ವೈವಿಧ್ಯಮಯ ಸಾಂಸ್ಕೃತಿಕ ಹಾಗೂ ಕ್ರೀಡಾ ಕಾರ್ಯಕ್ರಮವನ್ನು ನಡೆಸುವ ಮೂಲಕ ಯುವಜನರ ಮಧ್ಯೆ ಪ್ರಭಾವವನ್ನು ವಿಸ್ತರಿಸಿದೆ. ಹೊಸ ಪ್ರತಿಭೆಗಳು ಬೆಳಗಿವೆ. ಕೋಮುವಾದಿ ಶಕ್ತಿಗಳ ಅಟ್ಟಹಾಸದೆದುರು ಸಂಘಟನಾತ್ಮಕ ಸೈದ್ಧಾಂತಿಕ ಹೋರಾಟ ನಿರಂತರ ನಡೆಸಿದೆ. ಇವೆಲ್ಲದರ ಹಿನ್ನೆಲೆಯಲ್ಲಿ ಡಿವೈಎಫ್ಐ

## ದ.ಕ. ಡಿವೈಎಫ್ಐ ಸಮ್ಮೇಳನ



ಸಮ್ಮೇಳನ ಉದ್ಘಾಟನೆ: ಖ್ಯಾತ ರಂಗಕರ್ಮಿ ಪ್ರಸನ್ನರವರಿಂದ

ತೊಡಗಿಸಿಕೊಳ್ಳಬೇಕೆಂಬ ಉತ್ಕಟವಾದ ಬಯಕೆ ಇಂದು ಜಿಲ್ಲೆಯ ಯುವಜನರ ಮಧ್ಯೆ ಬೆಳೆದಿದೆ. ಇದರ ಪರಿಣಾಮವಾಗಿಯೇ ಜಿಲ್ಲಾ ಸಮ್ಮೇಳನ ಯಶಸ್ವಿಯಾಗಲು ಕಾರಣವಾಯಿತು.

**ಸ್ವಾಗತ ಸಮಿತಿ ರಚನೆ:** ಪ್ರತಿಸಲವೂ ವಾಡಿಕೆಯಂತೆ ಸ್ವಾಗತ ಸಮಿತಿಯನ್ನು ರಚನೆ ಮಾಡಿದ್ದರೂ ಕೊನೆಗೆ ಎಲ್ಲಾ ಕೆಲಸಗಳನ್ನು ಮಾಡುವುದು ಜಿಲ್ಲಾ ಕೇಂದ್ರದ ಸಂಗಾತಿಗಳೇ, ಆದರೆ ಈ ಸಲ ಹಾಗಾಗಲಿಲ್ಲ. ಉತ್ಸಾಹಭರಿತವಾದ ವಾತಾವರಣದಲ್ಲಿ 175 ಮಂದಿ ಭಾಗವಹಿಸಿದ್ದ ಸಭೆಯಲ್ಲಿ ಸ್ವಾಗತಸಮಿತಿ ರಚನೆಯಾಯಿತು.

ಅಧ್ಯಾಪಕರ ಸಂಘಟನೆಯಾದ ಆಮುಕ್ತನ ಅಧ್ಯಕ್ಷರಾದ ಪ್ರೊ/ ರಾಲ್ಫಿ ಮಸ್ಕರೇನ್ಹಸರವರು ಗೌರವಾಧ್ಯಕ್ಷರಾಗಿ ಸಮ್ಮೇಳನದ ತಯಾರಿಯ ಪ್ರತಿ ಹೆಜ್ಜೆ ಹೆಜ್ಜೆಯಲ್ಲೂ ಭಾಗವಹಿಸಿ ಮಾರ್ಗದರ್ಶನ ನೀಡಿ ಮುನ್ನಡೆಸಿದರು. ಅವರಿಗೆ ಬೆಂಗಾವಲಾಗಿ ಜಿಲ್ಲೆಯ ಖ್ಯಾತ ವೈದ್ಯರೂ ವಕೀಲರೂ, -- ಉದ್ಯಮಿಗಳು, ಅಧ್ಯಾಪಕರೂ, ಯುವನಾಯಕರೂ, ವಿದ್ಯಾರ್ಥಿ ನಾಯಕರೂ ರೈತಕಾರ್ಮಿಕ ಮುಖಂಡರು ಸ್ವಾಗತ ಸಮಿತಿಯಲ್ಲಿದ್ದುಕೊಂಡು ಸಮ್ಮೇಳನ ಯಶಸ್ಸಿಗೆ ಕಾರಣಕರ್ತರಾದರು. ಅವರೆಲ್ಲರ ಸ್ವಯಂ ಸ್ಫೂರ್ತಿಯಿಂದಲೇ ಪ್ರತಿ ವಾರಕ್ಕೊಮ್ಮೆ ಸಭೆ ನಡೆಸಿ ಸಮ್ಮೇಳನದ ತಯಾರಿಯ ಬಗ್ಗೆ ವಿಮರ್ಶೆ ನಡೆಸಿದರು. ಪ್ರಸ್ತುತ ಕಾಲಘಟ್ಟದಲ್ಲಿ ಜನತೆಯ ಬದುಕಿಗೆ ಮಾರಕವಾದ ಜಾಗತೀಕರಣ ಹಾಗೂ ಜನರ ಜೀವನಕ್ಕೆ ಕಳಂಕಪ್ರಾಯವಾದ ಕೋಮುವಾದದ ವಿರುದ್ಧ ಯುವಜನರನ್ನು ಸಂಘಟಿಸಬೇಕು. ಅಂತಹ ಘೋಷಣೆಯನ್ನು ಸಮ್ಮೇಳನಕ್ಕೆ ನೀಡಬೇಕೆಂದು ಸಭೆಯಲ್ಲಿ ಬಲವಾದ ಅಭಿಪ್ರಾಯಗಳನ್ನು ನೀಡಿದ್ದು ಹಾಗೂ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ನೀವೆಲ್ಲರೂ ಜಾತ್ಯಾತೀತ ನಿಲುವಿಗೆ ಬದ್ಧರಾಗಿರುತ್ತೇವೆ ಎಂಬ ಪ್ರತಿಜ್ಞೆಯನ್ನು ಸ್ವೀಕರಿಸಬೇಕೆಂಬ ಮಾತುಗಳನ್ನು ಹೇಳಿದವರೂ ಅವರುಗಳೇ. ನಿಧಿ

ನಮ್ಮ ನಿರೀಕ್ಷೆಯೂ ಮೀರಿ ಜನತೆ ಸ್ಪಂದಿಸಿದ್ದಾರೆ. ಇವೆಲ್ಲದರ ಸ್ಫೂರ್ತಿಯ ನಡುವೆ ಸಮ್ಮೇಳನದ ಒಂದೊಂದೇ ಮಜಲುಗಳನ್ನು ದಾಟುತ್ತಿದ್ದೆವು.

**ಪ್ರಚಾರ ಪ್ರಕ್ಷೋಭೆ:** ಸಮ್ಮೇಳನದ ಸಂದೇಶವನ್ನು ಸಾರುವಂತಹ ಗೋಡೆಬರಹಗಳು ಮಂಗಳೂರು ನಗರದಾದ್ಯಂತ ರಾಜಿಸುತ್ತಿದ್ದರೆ, ಪೋಸ್ಟರುಗಳಂತೂ ಉಭಯ ಜಿಲ್ಲೆಯ ಮೂಲೆ ಮೂಲೆಗಳಲ್ಲಿ ಎದ್ದು ನಿಂತು ಸಮ್ಮೇಳನದ ಬಗ್ಗೆ ಹೇಳುತ್ತಿದ್ದವು. ಸ್ಟಿಕ್ಕರುಗಳು ಬಸ್ಸುಗಳಲ್ಲಿ ಇತರ ವಾಹನಗಳಲ್ಲಿದ್ದರೆ ಕರಪತ್ರಗಳು ಸಾವಿರ ಸಾವಿರ ಸಂಖ್ಯೆಯಲ್ಲಿ ಜನರ ಮನಸ್ಸನ್ನು ಮುಟ್ಟುತ್ತಿದ್ದವು. ಸಮ್ಮೇಳನದ ಹಿಂದಿನ 2 ತಿಂಗಳಿನಲ್ಲಂತೂ ಸ್ಥಳೀಯ ಪತ್ರಿಕೆಗಳಲ್ಲಿ ಡಿವೈಎಫಐನದ್ದೆ ಸುದ್ದಿ. ಪೂರ್ವಭಾವಿ ಕಾರ್ಯಕ್ರಮಗಳು ಸಮ್ಮೇಳನದ ಪ್ರಚಾರವನ್ನು ದಿನದಿಂದ ದಿನಕ್ಕೆ ಉತ್ತರಿಸುತ್ತಿದ್ದವು.

**ಪೂರ್ವಭಾವಿ ಕಾರ್ಯಕ್ರಮಗಳು:** ಸಮ್ಮೇಳನದ ಯಶಸ್ಸಿಗೆ ಪೂರ್ವಭಾವಿಯಾಗಿ ನಡೆಸಿದ ಹತ್ತು ಹಲವು ಕಾರ್ಯಕ್ರಮಗಳು ನಮ್ಮ ನಿರಿಕ್ಷೆಗೂ ಮೀರಿ ಯಶಸ್ವಿಯಾಗಿರುವುದು ಸಮ್ಮೇಳನದ ಮೆರುಗನ್ನು ಹೆಚ್ಚಿಸಿದೆ. ಒಂದು ಕಡೆ ಸಂಘಟನಾತ್ಮಕವಾದ ಕಾರ್ಯಕ್ರಮಗಳು ತಾಲೂಕು, ವಲಯ, ನಗರ ಸಮ್ಮೇಳನಗಳು, ಇನ್ನೊಂದು ಕಡೆ ವೈವಿದ್ಯಮಯ, ಕ್ರೀಡಾ, ಆರೋಗ್ಯ, ಮುಂತಾದ ಕಾರ್ಯಕ್ರಮಗಳು, ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ ಸುಮಾರು 700 ರಷ್ಟು ಕ್ರೀಡಾಸಕ್ತರು ಭಾಗವಹಿಸಿರುವುದು, ರಾತ್ರಿಯಿಡೀ ಮಂಗಳೂರು ನಗರದಲ್ಲಿ ಸಾಂಸ್ಕೃತಿಕ ರಸದೌತಣ-ಪ್ರಪ್ರಥಮ ಬಾರಿಗೆ ರಾತ್ರಿ ಹೊತ್ತಿನ, ಕಾರ್ಯಕ್ರಮದಲ್ಲಿ ಹಾಸ್ಯಪ್ರತಿ ಆಗಿರುವಂತಹ ಖ್ಯಾತಿಗೆ ಡಿವೈಎಫ್ಐನ ಕಾರ್ಯಕ್ರಮ ಸೇರ್ಪಡೆಯಾಗಿದೆ. ಉಚಿತ ಆರೋಗ್ಯ ಶಿಬಿರದಲ್ಲಿ 200ರಷ್ಟು ಜನರು ತಪಾಸಣೆಗೊಳಪಟ್ಟು ಔಷಧಿಗಳನ್ನು ಪಡೆದರು. ಗ್ರಾಮೀಣ ಪ್ರದೇಶದಲ್ಲಿ ಬೀಡಿಕಟ್ಟುವ ಸ್ಪರ್ಧೆಯನ್ನು ಏರ್ಪಡಿಸಲಾಯಿತು. ಕೋಮುವಾದ ಮತ್ತು ಯುವಜನತೆ ಎಂಬ ವಿಷಯದ ಬಗ್ಗೆ ವಿಚಾರಸಂಕಿರಣ ಮಂಗಳೂರಿನಲ್ಲಿಯಾದರೆ, ರಾಣಿ ಅಬ್ಬಕ್ಕದೇವಿ ಹಾಗೂ ಸ್ವಾತಂತ್ರ್ಯ ಹೋರಾಟ ಎಂಬ ವಿಷಯದ ಬಗ್ಗೆ ವಿಚಾರ ಸಂಕಿರಣ ನಡೆಯಿತು.ಸಮ್ಮೇಳನದ ಸಂದೇಶವನ್ನು ಸಾರಲು 1 ವಾರಗಳ ಕಾಲ ಉಭಯ ಜಿಲ್ಲೆಯಾದ್ಯಂತ ಸಾಂಸ್ಕೃತಿಕ ಕಲಾಪ್ರಚಾರ ಜಾಥಾವನ್ನು ನಡೆಸಿ 150ಕ್ಕೂ ಹೆಚ್ಚು ಕಡೆಗಳಲ್ಲಿ ಕಾರ್ಯಕ್ರಮಗಳನ್ನು ನೀಡಿ ಸಾವಿರಾರು ಜನರ ಮನಸ್ಸನ್ನು ಗೆಲ್ಲಲು ಸಾಧ್ಯವಾಗಿದೆ. ಒಟ್ಟಿನಲ್ಲಿ ಎಲ್ಲಾ ಪೂರ್ವಭಾವಿ ಕಾರ್ಯಕ್ರಮಗಳು ನಮ್ಮ ನಿರೀಕ್ಷೆಗೂ ಮೀರಿ ಯಶಸ್ವಿಯಾಗಿದೆ.

**ಉದ್ಘಾಟನಾ ಸಮಾರಂಭ :** ಉದ್ಘಾಟನಾ ಸಮಾರಂಭವಂತೂ ಪುರಭವನದಲ್ಲಿ ನಡೆದಿರುವುದು ಎಲ್ಲರ ಗಮನ ಸೆಳೆಯಲು ಸಾಧ್ಯವಾಗಿದೆ. ಆಕರ್ಷಕವಾದ, ವರ್ಣರಂಜಿತವಾದ ವ್ಯಂಗ್ಯ ಹಾಗೂ ಹಾಸ್ಯಗಳಿಂದ ಕೂಡಿದ ಪಾತ್ರಗಳು ಸಾರ್ವಜನಿಕರನ್ನು ಮನಸೆಳೆಯುವಂತಿತ್ತು. ಧ್ವಜಾರೋಹಣಕ್ಕೆ ಪ್ರತಿನಿಧಿಗಳು, ಹಿತೈಷಿಗಳು ಅಣಿಯಾಗಬೇಕಾದರೆ ಗಣ್ಯವ್ಯಕ್ತಿಗಳ ಆಗಮನ ಹೊಸ ಸ್ಫೂರ್ತಿ ನೀಡಿತು. ಆಕರ್ಷಕವಾದ ಘೋಷಣೆಗಳೊಂದಿಗೆ ಕಾರ್ಯಕರ್ತರ ಕರತಾಡನದ ನಡುವೆ ರಾಷ್ಟ್ರನಾಯಕರನ್ನು ಹಾಗೂ ಉದ್ಘಾಟಕರನ್ನು ಸ್ವಾಗತಿಸಲಾಯಿತು. ಡಿವೈಎಫ್ಐ ಜಿಲ್ಲಾ ಉಪಾಧ್ಯಕ್ಷರೂ ಸಮ್ಮೇಳನದ ಸ್ವಾಗತ ಸಮಿತಿಯ ಕಾರ್ಯಾಧ್ಯಕ್ಷರಾದ ಕೆ.ಯಾದವ ಶೆಟ್ಟಿ ಪತಾಕೆಯನ್ನು ಹಾರಿಸುವುದರೊಂದಿಗೆ ಸಮ್ಮೇಳನಕ್ಕೆ ಚಾಲನೆ ನೀಡಿದರು. ಬಳಿಕ ಹುತಾತ್ಮ ಸ್ತಂಭಕ್ಕೆ ಗಮನ 1500ಕ್ಕೂ ಮಿಕ್ಕಿದ ಜನಸಮೂಹದ ಮಧ್ಯೆ ರಾಜ್ಯದ ಖ್ಯಾತ ರಂಗಕರ್ಮಿಯಾದ ಪ್ರಸನ್ನರವರು ಸಮ್ಮೇಳನವನ್ನು ಉದ್ಘಾಟಿಸಿದರು. ಪ್ರಪ್ರಥಮ ಬಾರಿಗೆ ಮಂಗಳೂರಿಗೆ ಆಗಮಿಸಿದ ಅಖಿಲಭಾರತ ಪ್ರಧಾನ ಕಾರ್ಯದರ್ಶಿ ತಪಸ್ ಸಿನ್ಹಾ, ರಾಜ್ಯ ಕಾರ್ಯದರ್ಶಿಯಾದ ಮಹಾಂತೇಶ್‌ರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

**ಪ್ರತಿನಿಧಿ ಅಧಿವೇಶನ:** ಮಧ್ಯವರ್ತಿ ಸಮಿತಿಗಳಿಂದ ಆಯ್ಕೆಯಾಗಿ ಬಂದಿದ್ದ 200 ರಷ್ಟು ಪ್ರತಿನಿಧಿಗಳು ಪ್ರತಿನಿಧಿ ಅಧಿವೇಶನದಲ್ಲಿ ಭಾಗವಹಿಸಿದ್ದರು. ಕಾರ್ಯದರ್ಶಿಯವರು ಮಂಡಿಸಿದ್ದ ಕರಡು ವರದಿಯ ಮೇಲೆ ಸುಮಾರು 5 ಗಂಟೆಗಳ ಕಾಲ 25 ಮಂದಿ ಸಂಗಾತಿಗಳು ಚರ್ಚೆ ನಡೆಸಿ, ಜಿಲ್ಲೆಯಲ್ಲಿ ಪ್ರಗತಿಪರ ಜಾತ್ಯಾತೀತ ಯುವಜನ ಚಳುವಳಿಯಲ್ಲಿ ಕಟ್ಟಲು --ಬದ್ಧರಾಗಲು ಸಮ್ಮೇಳನವು ತೀರ್ಮಾನಿಸಿತು. ವಿವಿಧ ಸಂಘಟನೆಗಳ ಮುಖಂಡರು ಸಮ್ಮೇಳನಕ್ಕೆ ಶುಭ ಕೋರಿ ಮಾತಾಡಿದರು.

**ನಿರ್ಣಯಗಳು:** ಸಮ್ಮೇಳನವು ಜಿಲ್ಲೆಗೆ ಸಂಬಂಧಿಸಿದ ಹಲವಾರು ಪ್ರಮುಖ ನಿರ್ಣಯಗಳನ್ನು ಕೈಗೊಂಡಿತು. ಜಿಲ್ಲಾ ಸರಕಾರಿ ವೆನ್‌ಲಾಕ್ ಆಸ್ಪತ್ರೆಯಲ್ಲಿರುವ ಅವ್ಯವಸ್ಥೆಯನ್ನು ಹೋಗಲಾಡಿಸಿ, ಸಾಮಾನ್ಯ ಜನರ ಆರೋಗ್ಯವನ್ನು ಸುಧಾರಿಸುವಲ್ಲಿ ಪ್ರಮುಖ ಪಾತ್ರ ವಹಿಸಬೇಕು, ಮಂಗಳೂರು -ಸಕಲೇಶಪುರ ರೈಲ್ವೇ ಬ್ರಾಡ್‌ಗೇಜ್‌ನ ಬಗ್ಗೆ ಸರಕಾರದ ವಿಳಂಬ ನೀತಿಯನ್ನು ಖಂಡಿಸಿ, ಜನತೆಯ ಮಧ್ಯೆ ಪ್ರಚಾರ ಪ್ರಕ್ಷೋಭೆಯನ್ನು ನಡೆಸಬೇಕು. ರಾಜ್ಯ ಸರಕಾರದ ಸ್ವಯಂ ಆಸ್ತಿಕತೆಗೆ ನೀತಿಯನ್ನು ವಿರೋಧಿಸಿ ಜನಾಂದೋಲನ ಸಂಘಟಿಸಬೇಕು- ಮುಂತಾದ ನಿರ್ಣಯಗಳು ಸಮ್ಮೇಳನದಲ್ಲಿ ಮೂಡಿಬಂದವು.

**ಪ್ರತ್ಯೇಕ ಜಿಲ್ಲಾ ಸಮಿತಿಗಳ ಆಯ್ಕೆ:** ಆಡಳಿತಾತ್ಮಕವಾಗಿ ಜಿಲ್ಲೆ ಇಬ್ಭಾಗಗೊಂಡಿದ್ದರಿಂದ ಸಮ್ಮೇಳನವು 2 ಜಿಲ್ಲೆಗಳಿಗೆ ಪ್ರತ್ಯೇಕ ಜಿಲ್ಲಾ ಸಮಿತಿಯನ್ನು ಆರಿಸಿತು. ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ಅಧ್ಯಕ್ಷರಾಗಿ ಕೃಷ್ಣಪ್ಪಕೊಂಚಾಡಿ, ಕಾರ್ಯದರ್ಶಿಯಾಗಿ ಸುನೀಲ್‌ಕುಮಾರ್ ಬಜಾಲ್‌ರವರು ಪುನರಾಯ್ಕೆಗೊಂಡರೆ, ಉಡುಪಿ ಜಿಲ್ಲಾ ಸಮಿತಿಯ ಅಧ್ಯಕ್ಷರಾಗಿ ಉಮೇಶ ಕುಂದರ್, ಕಾರ್ಯದರ್ಶಿಯಾಗಿ ಚಂದ್ರಶೇಖರ್.ವಿ ಯವರು ಆಯ್ಕೆಗೊಂಡರು.

**ಸಮಾರೋಪ:** 2ನೇ ದಿನದ ಸಂಜೆ ಸಮ್ಮೇಳವು ನೂತನ ನಾಯಕತ್ವದ ವಿಶ್ವಾಸದೊಂದಿಗೆ, ಯುವಜನ ಚಳುವಳಿಯನ್ನು ಕಟ್ಟಿಬೆಳೆಸಬೇಕೆಂಬ ದೃಢ ಸಂಕಲ್ಪದೊಂದಿಗೆ ಸಮಾರೋಪಗೊಂಡಿತು. ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್‌ರವರ ಸಮಾರೋಪ ಭಾಷಣ ಹಾಗೂ ಡಿವೈಎಫ್ಐಯಿಂದ ವಿದಾಯ ಹೊಂದಿದ್ದ ಸಂಗಾತಿಗಳ ಮಾತುಗಳು ಭಾಗವಹಿಸಿದ ಪ್ರತಿನಿಧಿಗಳಲ್ಲಿ ವಿದ್ಯುತ್ಸಂಚಾರವಾದಂತಿತ್ತು. ಗೆಲುವು ನಮ್ಮದೇ ಹಾಡು ಹಾಗೂ ಧ್ವಜಾ ಅವರೋಹಣದೊಂದಿಗೆ ಸಮ್ಮೇಳನದ ಇಡೀ ಕಾರ್ಯಕಲಾಪವೂ ಮುಕ್ತಾಯವಾಯಿತು. ○



ಪುಸ್ತಕ ಪರಿಚಯ

# ಹುತಾತ್ಮ ಭಗತ್ ಸಿಂಗ್

**ಭಗತ್ ಸಿಂಗ್ ಎಂಬುದು ಇಂದಿಗೂ ಸ್ಫೂರ್ತಿ ಚಿಮ್ಮಿಸುವ ಹೆಸರು. ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು ಎಂಬಂತೆ ಸ್ವಾತಂತ್ರ್ಯ ಹೋರಾಟದಲ್ಲಿಯೂ ಸಾವಿರಾರು ಕವಲುಗಳಿದ್ದವು. ಭಾರತವನ್ನು ಬ್ರಿಟಿಷರಿಂದ ಮುಕ್ತವಾಗಿಸಬೇಕು ಎಂದು ಕನಸು ಕಂಡವರಲ್ಲಿ ಹಲವು ಯೋಜನಾ ರೀತಿಗಳಿದ್ದವು. ಗಾಂಧಿ ಅಹಿಂಸೆಯ ಮೂಲಕ ಭಾರತ ಸ್ವಾತಂತ್ರ್ಯ ಪಡೆಯುವುದನ್ನು ಕನಸಿದರು. ಅನೇಕರು ಭಾರತಕ್ಕೆ ಸ್ವಾತಂತ್ರ್ಯ ಎಂಬುದು ಹಿಂದೂ ಭಾರತಕ್ಕೆ ಬರುವ ಸ್ವಾತಂತ್ರ್ಯ ಎಂದು ಭಾವಿಸಿ ಹೋರಾಟ ನಡೆಸಿದರು. ಆದರೆ ಜಾತ್ಯಾತೀತ ಭಾರತದ ಕನಸು ಕಂಡಾತ ಭಗತ್ ಸಿಂಗ್. ಧರ್ಮ ಮತ್ತು ರಾಜಕಾರಣವನ್ನು ದೂರವೇ ಇಡಬೇಕು ಎಂದು ಸ್ಪಷ್ಟವಾಗಿ ಮನಗಂಡಿದ್ದ ಭಗತ್‌ಸಿಂಗ್ ಭಾರತ ಕೋಮುವಾದದ ನಡುವೆ ಸಿಕ್ಕು ನಲುಗುತ್ತಿರುವ ಇಂದಿನ ದಿನದಲ್ಲಿ ಹೆಚ್ಚೆಚ್ಚು ಪ್ರಸ್ತುತವಾಗಿದ್ದಾನೆ. ಖ್ಯಾತ ಪತ್ರಕರ್ತ ಕುಲದೀಪ್ ನಯ್ಯರ್ ದಶಕಗಳ ಕಾಲ ಸಂಶೋಧನೆ ನಡೆಸಿ ರಚಿಸಿದ 'ದಿ ಮಾರ್ಟಿರ್' ಪುಸ್ತಕ ವನ್ನು ಇನ್ನೊಬ್ಬ ಪತ್ರಕರ್ತ ಜಿ.ಪಿ.ಬಸವರಾಜು ಕನ್ನಡಕ್ಕೆ ಸಂಗ್ರಹಾನುವಾದ ಮಾಡಿದ್ದಾರೆ. ಈ ಪುಸ್ತಕದ ಒಂದು ಅಧ್ಯಾಯ ಇಲ್ಲಿದೆ.**


**ಮಾರ್ಚ್ 23:** ಎಂದಿನಂತೆ ಅದೂ ಒಂದು ದಿನ, ರಾಜಕೀಯ ಕೈದಿಗಳು ಬೆಳಗ್ಗೆಯೇ ತಮ್ಮ ಸೆಲ್ ಗಳಿಂದ ಹೊರಬಂದಿದ್ದರು. ಕತ್ತಲಾಗುವವರೆಗೂ ಅವರು ಸೆಲ್‌ಗಳಿಂದ ಹೊರಗಿರುತ್ತಿದ್ದರು. ಇವತ್ತು ಮಾತ್ರ ಸಂಜೆ 4ರ ಹೊತ್ತಿಗೇ ವಾರ್ಡನ್ ಚರತ್‌ಸಿಂಗ್ ಕಾಣಿಸಿಕೊಂಡ: ಎಲ್ಲರೂ ತಮ್ಮ ತಮ್ಮ ಸೆಲ್‌ಗಳನ್ನು ಸೇರಿಸಿಕೊಳ್ಳಬೇಕೆಂದು ಸೂಚಿಸಿದ. ಇದು ಎಲ್ಲರಲ್ಲಿ ಆಶ್ಚರ್ಯ ಹುಟ್ಟಿಸಿತು.

ಸೆಲ್ ಸೇರಲು ಇದು ಹೊತ್ತಲ್ಲ; ಬಹಳ ಬೇಗ ಆಯ್ತು, ಎಷ್ಟೋ ಸಲ ಅವರು ಸೂರ್ಯ ಮುಳುಗಿ ಎಷ್ಟೋ ಹೊತ್ತಾದರೂ ತಮ್ಮ ಸೆಲ್‌ಗಳನ್ನು ಸೇರುತ್ತಿರಲಿಲ್ಲ. ವಾರ್ಡನ್ ಆಕ್ಷೇಪಣೆ ಮಾಡಿದರೂ ಅವರು ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತಿರಲಿಲ್ಲ. ಈ ಬಾರಿ ಮಾತ್ರ ವಾರ್ಡನ್ ಬಹಳ ಕಟ್ಟುನಿಟ್ಟಾಗಿದ್ದ. ಯಾಕೆಂಬುದನ್ನು ಆತ ಹೇಳಲಿಲ್ಲ. ಮೇಲಿನಿಂದ ಆರ್ಡರ್ ಎಂದೇನೋ ಅಸಂಬದ್ಧವಾಗಿ ಗೊಣಗಿದ.

ಅವನು ಕೈದಿಗಳ ಪ್ರೀತಿ ಪಾತ್ರ ವ್ಯಕ್ತಿ. ಕೈದಿಗಳು ತಮ್ಮ ಪಾಡಿಗೆ ತಾವಿರಲು ಆತ ಬಿಡುತ್ತಿದ್ದ. ಅವರು ಓದುತ್ತಿರುವುದೇನು ಎಂಬುದನ್ನೂ ಆತ ಎಂದೂ ಚೆಕ್ ಮಾಡುತ್ತಿರಲಿಲ್ಲ. ಆಂಗ್ಲರ ವಿರುದ್ಧದ ಕೆಲವು ಪುಸ್ತಕಗಳನ್ನು ಜೈಲಿನೊಳಕ್ಕೆ ಕದ್ದು ತರಲಾಗುತ್ತಿತ್ತು. ಆತ ಆ ಪುಸ್ತಕಗಳನ್ನು ಕಸಿದು ಇಟ್ಟುಕೊಳ್ಳಬಹುದಾಗಿತ್ತು. ಆದರೆ ಎಂದೂ ಆತ ಹಾಗೆ ಮಾಡಿದವನಲ್ಲ. ಕೈದಿಗಳು ಎಳೆಯ ಮಕ್ಕಳಲ್ಲ. ಗಾಢವಾದ ರಾಜಕೀಯ ತಿಳುವಳಿಕೆಯನ್ನು ಪಡೆದವರು ಎಂಬ ಅರಿವು ಆತನಿಗಿತ್ತು. ಆ ಪುಸ್ತಕಗಳು ಜೈಲಿನಲ್ಲಿ ತೊಂದರೆಗಳನ್ನು ಹುಟ್ಟುಹಾಕುವಂಥ ಕೆಲಸವನ್ನು ಕೈದಿಗಳಿಂದ ಮಾಡಿಸಲಾರವು.

ತಂದೆತಾಯಿಗಳು ನೋಡಿಕೊಳ್ಳುವ ರೀತಿಯಲ್ಲಿ ತಮ್ಮನ್ನು ಈ ಚರತ್‌ಸಿಂಗ್ ನೋಡಿಕೊಳ್ಳುತ್ತಿದ್ದ: ಇದು ಅವರನ್ನು ಕಲಕಿತ್ತು. ಆತನನ್ನು ಅವರು ಗೌರವದಿಂದ ಕಾಣುತ್ತಿದ್ದರು; ಚರತ್‌ಸಿಂಗ್‌ಜೀ ಎಂದು ಕರೆಯುತ್ತಿದ್ದರು. ಸೆಲ್‌ಗಳಿಗೆ ಹಿಂತಿರುಗಬೇಕೆಂದು ಚರತ್‌ಸಿಂಗ್ ಹೇಳಿದಾಗ ಏನೋ ಪ್ರಬಲವಾದ ಕಾರಣವೇ ಇರಬೇಕೆಂದುಅವರು ಊಹಿಸಿದ್ದರು. ಎಲ್ಲರೂ ತಂತಮ್ಮ ಸೆಲ್‌ಗಳನ್ನು ಸೇರಿಕೊಂಡರು. ಅವರೆಲ್ಲ ಸೆಲ್‌ಗಳನ್ನು ಸೇರಿಕೊಂಡ ಮೇಲೆ ಸೆಲ್‌ಗಳಿಗೆ ಬೀಗ ಹಾಕುತ್ತಿದ್ದುದು ಸಂಜೆ ಏಳು ಗಂಟೆಗೇ. ಇವತ್ತು ಮೂರು ಗಂಟೆಗೆ ಮೊದಲೇ ಅವರೆಲ್ಲ ತಮ್ಮ ಸೆಲ್‌ಗಳಲ್ಲಿದ್ದರು. ಇವತ್ತು ಯಾಕೆ ಹೀಗೆ? ಕುತೂಹಲ ತಡೆಯದೆ ಸರಳುಗಳ ಹಿಂದಿನಿಂದ ಇಣುಕಿ ನೋಡಿದರು. ಕ್ಷೌರಿಕ ಬರ್ಕತ್ ಒಂದಾದ ನಂತರ ಒಂದು ಸೆಲ್‌ಗಳಿಗೆ ಹೋಗಿ ಬರುವುದನ್ನು ಅವರು ಕಂಡರು. ಭಗತ್‌ಸಿಂಗ್ ಮತ್ತು ಆತನ ಸಂಗಾತಿಗಳನ್ನು ಇವತ್ತು ರಾತ್ರಿ ಗಲ್ಲಿಗೇರಿಸಲಾಗುವುದೆಂಬ ಸುದ್ದಿಯನ್ನು ಆತ ಪಿಸುದನಿಯಲ್ಲಿ ಬಿತ್ತರಿಸುತ್ತಿದ್ದ. ಭಗತ್‌ಸಿಂಗ್‌ನ ಬಾಚಣಿಗೆ, ಪೆನ್ನು, ಗಡಿಯಾರ ಅಥವಾ ಇನ್ನಾವುದೇ ವಸ್ತುವನ್ನು ಬರ್ಕತ್ ತಮಗೆ ತಂದುಕೊಡು ತ್ತಾನೆಯೇ? ಅದನ್ನು ತಾವು ಇಟ್ಟುಕೊಳ್ಳಬಹುದು.

ಯಾವಾಗಲೂ ನಗೆ ಮುಖದಿಂದಿರುತ್ತಿದ್ದ ಬರ್ಕತ್ ತೀರ ದುಃಖಿತನಾಗಿರುವುದು ಎದ್ದು ಕಾಣಿಸುತ್ತಿತ್ತು. ಆತ ಭಗತ್‌ಸಿಂಗ್‌ನ ಸೆಲ್‌ಗೆ ಹೋಗಿ ಬಂದ. ಒಂದು ಪೆನ್ನು, ಒಂದು ಬಾಚಣಿಗೆಯನ್ನು ಅಲ್ಲಿಂದ ತಂದ. ಈ ವಸ್ತುಗಳು ತನಗೆ ಬೇಕೆಂದು ಎಲ್ಲರೂ ಬೇಡಿಕೆಯನ್ನು ಮುಂದಿಟ್ಟರು. ತಲಾ ಒಂದೊಂದು ವಸ್ತುಗಳನ್ನು ಪಡೆದುಕೊಂಡರು.




**ಹುತಾತ್ಮ ಭಗತ್ ಸಿಂಗ್**

| | | |
|---|---|---|
| **ಮೂಲ** | : | **ಕುಲದೀಪ ನಯ್ಯರ್** |
| **ಕನ್ನಡಕ್ಕೆ** | : | **ಜಿ.ಪಿ.ಬಸವರಾಜು** |
| **ಪ್ರಕಾಶಕರು** | : | **ಲೋಹಿಯಾ ಪ್ರಕಾಶನ ಕ್ಷಿತಿಜ, ಕಪ್ಪಗಲ್ಲು ರಸ್ತೆ, ಗಾಂಧಿನಗರ, ಬಳ್ಳಾರಿ-583109** |
| **ಬೆಲೆ** | ; | **60 ರೂ.** |

**ಐಕ್ಯರಂಗ ಓದುಗರಿಗೆ 45 ರೂ.**

ಯಾರೊಬ್ಬರ ಬಾಯಿಂದಲೂ ಮಾತು ಹೊರಡಲಿಲ್ಲ. ಮೌನ ಕವಿದಿತ್ತು. ತಮ್ಮ ಸೆಲ್‌ಗಳ ಹೊರಗಿನ ದಾರಿಯ ಕಡೆಗೇ ಎಲ್ಲರ ದೃಷ್ಟಿ ನೆಟ್ಟವು; ಈ ದಾರಿಯಲ್ಲಿ ನಡೆದು ಬಂದದ್ದು ಅವರ ಸ್ಮೃತಿಪಟಲದಲ್ಲಿ ಹಾದು ಹೋಯಿತು. ಒಬ್ಬ ರಾಜಕೀಯ ಕೈದಿ ಕೇಳಿಯೇ ಬಿಟ್ಟ: 'ಕೋರ್ಟಿನಲ್ಲಿ ನೀವು ಯಾಕೆ ನಿಮ್ಮನ್ನು ರಕ್ಷಿಸಿಕೊಳ್ಳಲಿಲ್ಲ?' 'ನಾವು ಒಂದು ಧ್ಯೇಯವನ್ನು ಪ್ರತಿನಿಧಿಸುತ್ತಿದ್ದೇವೆ ಹೀಗಾಗಿ ನಾವು ಸಾಯಲೇಬೇಕು. ನಮ್ಮ ಸಾವಿನಿಂದ ಮಾತ್ರ ಈ ಧ್ಯೇಯ ಬಲಗೊಳ್ಳುತ್ತದೆ. ಕೋರ್ಟಿನಲ್ಲಿ ನಮ್ಮನ್ನು ರಕ್ಷಿಸಿಕೊಳ್ಳುವುದರಿಂದ ಅಲ್ಲ' - ಎಂದು ಭಗತ್‌ಸಿಂಗ್ ಉತ್ತರಿಸಿದ್ದ. ಆ ಮೂವರ ಒಂದು ಕ್ಷಣದ ದರ್ಶನಕ್ಕಾಗಿ ಇವರೆಲ್ಲ ಉತ್ಸುಕರಾಗಿ ಕಾದರು: ಅವರು ನಡೆದುಬರುವ ಸದ್ದೇನಾದರೂ ಕೇಳಬಹುದೇನೋ ಎಂದು ಎಲ್ಲರೂ ಕಿವಿ ನಿಮಿರಿಸಿದರು.

ಗಲ್ಲಿಗೇರಿಸುವುದಕ್ಕೆ ಎರಡು ಗಂಟೆ ಮೊದಲು ಭಗತ್‌ಸಿಂಗ್‌ನ ಲಾಯರ್ ಪ್ರಾಣ್‌ನಾಥ್ ಮೆಹ್ತಾ ಅವರಿಗೆ ಭೇಟಿಯ ಅವಕಾಶ ನೀಡಲಾಯಿತು. ತನ್ನ ಕಕ್ಷಿದಾರರ ಕೊನೆಯ ಬಯಕೆಗಳನ್ನು ತಿಳಿಯಲು ತಮಗೆ ಭೇಟಿಯ ಅವಕಾಶ ನೀಡಬೇಕೆಂದು ಮೆಹ್ತಾ ಕೇಳಿಕೊಂಡಿದ್ದರು; ಅದಕ್ಕೆ ಒಪ್ಪಿಗೆ ನೀಡಲಾಗಿತ್ತು.

ಬೋನಿನೊಳಗಿನ ಸಿಂಹದಂತೆ ತನ್ನ ಸೆಲ್ಲಿನಲ್ಲಿ ಅತ್ತಿಂದಿತ್ತ, ಇತ್ತಿಂದತ್ತ ಹೆಜ್ಜೆ ಹಾಕುತ್ತಿದ್ದ. ಮೆಹ್ತಾ ಅವರನ್ನು ದೊಡ್ಡ ಮಂದಹಾಸದಿಂದಲೇ ಬರಮಾಡಿಕೊಂಡ. ತಾನು ಕೇಳಿದ್ದ 'ದಿ ರೆವಲ್ಯೂಷನರಿ ಲೆನಿನ್' ಪುಸ್ತಕವನ್ನು ತಂದಿದ್ದೀರಾ? ಎಂದು ಕೇಳಿದ. ಪತ್ರಿಕೆಯೊಂದರಲ್ಲಿ ಪ್ರಕಟವಾಗಿದ್ದ ಈ ಪುಸ್ತಕದ ವಿಮರ್ಶೆಯನ್ನು ಓದಿದ್ದ ಭಗತ್, ಈ ಪುಸ್ತಕವನ್ನು ತಂದುಕೊಡುವಂತೆ ಮೆಹ್ತಾ ಅವರಿಗೆ ಸೂಚನೆಯೊಂದನ್ನು ಕಳುಹಿಸಿದ್ದ.

ಮೆಹ್ತಾ ಈ ಪುಸ್ತಕವನ್ನು ಕೊಟ್ಟರು. ಪುಸ್ತಕ ಸಿಕ್ಕಿದ್ದೇ ಭಗತ್‌ಸಿಂಗ್ ಖುಷಿಯಿಂದ ಓದುವುದಕ್ಕೆ ಶುರು ಮಾಡಿದ; ತನಗಿನ್ನು ಹೆಚ್ಚು ಸಮಯ ಉಳಿದಿಲ್ಲ ಎಂಬ ಅರಿವು ಆತನಿಗಿತ್ತು. ರಾಷ್ಟ್ರಕ್ಕೆ ಏನಾದರೂ ಸಂದೇಶ ನೀಡುವುದಿದೆಯಾ?ಎಂದು ಮೆಹ್ತಾ ಕೇಳಿದರು. ಪುಸ್ತಕದಿಂದ ದೃಷ್ಟಿಯನ್ನು ತೆಗೆಯದೇ ಭಗತ್ ಹೇಳಿದ: 'ಸಾಮ್ರಾಜ್ಯಶಾಹಿಗೆ ಧಿಕ್ಕಾರ', 'ಕ್ರಾಂತಿ ಚಿರಾಯುವಾಗಲಿ' ಈ ಎರಡು ಘೋಷಣೆಗಳನ್ನು ತಿಳಿಸಿ.

**ಮೆಹ್ತಾ:** ಇವತ್ತು ಹೇಗಿದ್ದೀಯಾ?

**ಭಗತ್‌ಸಿಂಗ್:** ಎಂದಿನಂತೆ, ಸುಖವಾಗಿ

**ಮೆಹ್ತಾ:** ನಿನಗೇನಾದರೂ ಆಶೆ ಇದೆಯೇ?

**ಭಗತ್‌ಸಿಂಗ್:** ಹೌದು, ಈ ದೇಶದಲ್ಲಿ ಮತ್ತೆ ಹುಟ್ಟುವ ಆಶೆ ಇದೆ: ಮತ್ತೆ ಹುಟ್ಟಿದರೆ ರಾಷ್ಟ್ರದ ಸೇವೆ ಮಾಡಬಹುದು.

ಪಂಡಿತ್ ನೆಹರೂ, ಸುಭಾಷ್‌ಚಂದ್ರಭೋಸ್ ಅವರಿಗೆ ತನ್ನ ನಮಸ್ಕಾರ ತಿಳಿಸುವಂತೆ ಭಗತ್ ಹೇಳಿದ. ಅವರಿಬ್ಬರೂ ಈ ಪ್ರಕರಣದಲ್ಲಿ ಹೆಚ್ಚಿನ ಆಸಕ್ತಿ ತೋರಿಸಿದ್ದರು.

ಮೆಹ್ತಾ ರಾಜಗುರುವನ್ನೂ ಭೇಟಿ ಮಾಡಿದರು "ಶೀಘ್ರದಲ್ಲಿಯೇ ನಾವು ಭೇಟಿಯಾಗುತ್ತೇವೆ'- ಈ ವಾಕ್ಯದ ಅರ್ಥವನ್ನು ಅರಿತವನಂತೆ ರಾಜಗುರು ಹೇಳಿದ. ಕೆಲವು ತಿಂಗಳ ಹಿಂದೆ ಮೆಹ್ತಾ ನೀಡಿದ್ದ ಕೇರಂ ಬೋರ್ಡನ್ನು ಜೈಲರಿಂದ ಹಿಂದಕ್ಕೆ ಪಡೆಯಬೇಕೆಂದು ಸುಖದೇವ್ ನೆನಪಿಸಿದ.

ಮೆಹ್ತಾ ಹೋದ ಕೂಡಲೇ ಅಧಿಕಾರಿಗಳು ಈ ಮೂರು ಜನರಿಗೆ ಹನ್ನೊಂದು ಗಂಟೆ ಮೊದಲೇ ಗಲ್ಲಿಗೆ ಹಾಕುವ ವಿಚಾರವನ್ನು ತಿಳಿಸಿದರು ಮರುದಿನ ಬೆಳಗ್ಗೆ 6ಕ್ಕೆ ನಿಗದಿಯಾಗಿದ್ದ ಗಲ್ಲು ಬದಲಾಗಿ, ಈ ದಿನ ಸಂಜೆ 7ಕ್ಕೆ ನಿಗದಿಯಾಗಿತ್ತು ಭಗತ್‌ಸಿಂಗ್ ಈ ಪುಸ್ತಕದ ಕಾಲು ಪುಟಗಳನ್ನು ಮಾತ್ರ ಓದಿದ್ದ.

ಒಂದು ಅಧ್ಯಾಯವನ್ನಾದರೂ ಮುಗಿಸುವುದಕ್ಕೆ ಅವಕಾಶ ಕೊಡುತ್ತೀರಾ? ಎಂದು ಭಗತ್‌ಸಿಂಗ್ ಕೇಳಿದ. ಇದಕ್ಕೆ ಉತ್ತರವನ್ನು ಕೊಡುವ ಬದಲು ಅವರು ನೇಣುಗಂಬದ ಕಡೆಗೆ ನಡೆಯಲು ಸೂಚಿಸಿದರು.

ಮೂವರು ತಮ್ಮ ಕೈಗಳನ್ನು ಕಟ್ಟಿಸಿಕೊಂಡು ಗಲ್ಲಿನ ವೇದಿಕೆಗೆ ಹೊರಟ ಸೆಂಟ್ರಿಗಳ ಹಿಂದೆ ಹೆಜ್ಜೆ ಹಾಕಿದರು. ಪರಿಚಿತವಾದ ಕ್ರಾಂತಿಗೀತೆಯನ್ನು ಹಾಡಿದರು.

ಕಭೀ ವೋ ದಿನ್ ಭಿ ಆಯೆಗಾ
ಕೆ ಜಬ್ ಆಜಾದ್ ಹಮ್ ಹೋಂಗೆ
ಯೇ ಅಪ್ನಿ ಹೈ ಜಮೀನ್ ಹೋಗಿ
ಯೇ ಅಪ್ನಾ ಆಸ್ಮಾನ್ ಹೋಗಾ
ಶಾಹೀದೋಂಕಿ ಚಿತಾವೋಂಪರ್
ಲಗೇಂಗೆಹರ್ ಬರಸ್ ಮೇ ಲೆ
ವತನ್ ಪರ್ ಮರ್‍ನೆವಾಲೋಂಕಾ
ಯಹೀ ನಾವೋ ನಿಶಾಂತ್ ಹೋಗಾ

ಒಬ್ಬರ ನಂತರ ಒಬ್ಬರಂತೆ ಅವರೆಲ್ಲರ ತೂಕವನ್ನು ನೋಡಲಾಯಿತು ಎಲ್ಲರ ತೂಕವು ಹೆಚ್ಚಾಗಿತ್ತು. ಎಲ್ಲರೂ ಸ್ನಾನ ಮಾಡಿದರು. ಕಪ್ಪು ಬಟ್ಟೆಯನ್ನು ಧರಿಸಿದರು. ಆದರೆ ಮುಖವನ್ನು ಮುಚ್ಚಿಕೊಳ್ಳಲಿಲ್ಲ

ವಾಹೆ ಗುರುವಿಗೆ ಪ್ರಾರ್ಥನೆ ಸಲ್ಲಿಸುವಂತೆ ಭಗತ್‌ಸಿಂಗ್ ಕಿವಿಯಲ್ಲಿ ಚರತ್‌ಸಿಂಗ್ ಪಿಸುಗುಟ್ಟಿದ. ಭಗತ್‌ಸಿಂಗ್ ನಕ್ಕು ಹೇಳಿದ: 'ನನ್ನ ಜೀವಮಾನದಲ್ಲಿ ನಾನೆಂದೂ ಪ್ರಾರ್ಥನೆ ಸಲ್ಲಿಸಿಲ್ಲ; ವಾಸ್ತವವಾಗಿ ಬಡವರ ಯಾತನೆಗಳನ್ನು ಕಂಡು ದೇವರನ್ನು ಬೈದಿದ್ದೇನೆ. ಈಗ ನಾನವನ ಕ್ಷಮೆ ಕೇಳಿದರೆ, 'ಇವನೊಬ್ಬ ಹೇಡಿ, ಕೊನೆಯ ಕ್ಷಣ ಸಮೀಪಿಸಿದಾಗ ಕ್ಷಮೆ ಕೇಳುತ್ತಿದ್ದಾನೆ' ಎಂದು ಅವನು ಹೇಳುತ್ತಾನೆ.'

ಸೆಲ್‌ಗಳಲ್ಲಿದ್ದ ಕೈದಿಗಳೂ ಕೇಳಬಹುದಾದಷ್ಟು ಗಟ್ಟಿಯಾಗಿ ಭಗತ್‌ಸಿಂಗ್ ಭಾಷಣ ಮಾಡಿದ: 'ನಿಜವಾಗಿ ಕ್ರಾಂತಿಕಾರಿ ಸೇನೆಗಳು ಹಳ್ಳಿಗಳಲ್ಲಿ ಮತ್ತು ಕಾರ್ಖಾನೆಗಳಲ್ಲಿವೆ; ಶ್ರಮಿಕರು ಮತ್ತು ಕೃಷಿಕರು ನಿಜವಾದ ಸೈನಿಕರು. ಆದರೆ ನಮ್ಮ ಬೂರ್ಜ್ವಾ ನಾಯಕರು ಅವರನ್ನು ಎದುರಿಸುವುದಿಲ್ಲ; ಎದುರಿಸುವ ಧೈರ್ಯ ಮಾಡಲಾರರು.

ಮುಂದುವರಿಯುವುದು



PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2002
ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,